"ಸು.ರಂ. ಎಕ್ಕುಂಡಿಯವರ ಕಥನ ಕವನಗಳು : ಒಂದು ಅಧ್ಯಯನ"

(ಕನ್ನಡ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ನಿಬಂಧ)

ಸಂಶೋಧಕರು :
ಅಶ್ವಿನಿ
ಎಂ.ಫಿಲ್. ಅಭ್ಯರ್ಥಿ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ.), ಮಂಡ್ಯ.

ಮಾರ್ಗದರ್ಶಕರು :
ಪ್ರೊ. ಎಚ್. ಎಲ್. ಮಹಾದೇವ
ಮಹಿಳಾ ಸರ್ಕಾರಿ ಕಾಲೇಜು
(ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ)
ಮಂಡ್ಯ.

ಕರ್ನಾಟಕ ಸಂಘ (ರಿ.) ಮಂಡ್ಯ.
...ಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
೨೦೦೮ - ೨೦೦೯

"ಸು.ರಂ. ಎಕ್ಕುಂಡಿಯವರ ಕಥನ ಕವನಗಳು: ಒಂದು ಅಧ್ಯಯನ"

(ಕನ್ನಡ ಎಂ.ಫಿಲ್. ಪದವಿಗಾಗಿ

ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಸಂಶೋಧನಾ ನಿಬಂಧ)

ಸಂಶೋಧಕರು:

ಅಶ್ವಿನಿ

ಎಂ.ಫಿಲ್. ಅಭ್ಯರ್ಥಿ

(ನೋಂದಣಿ ಸಂಖ್ಯೆ: **KRS MKS - 00358**)

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ.

ಮಾರ್ಗದರ್ಶಕರು

ಪ್ರೊ. ಎಚ್.ಎಲ್. ಮಹಾದೇವ

ಮಹಿಳಾ ಸರ್ಕಾರಿ ಕಾಲೇಜು

(ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ)

ಮಂಡ್ಯ.

ಕರ್ನಾಟಕ ಸಂಘ (ರಿ), ಮಂಡ್ಯ.

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ.ಹಂಪಿ ಮಾನ್ಯತೆ ಪಡೆದಿದೆ)

೨೦೦೮-೨೦೦೯

ಮಾರ್ಗದರ್ಶಕರ ದೃಢೀಕರಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೮-೦೯ನೇ ಸಾಲಿಗೆ ಕನ್ನಡ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು ***"ಸು.ರಂ. ಎಕ್ಕುಂಡಿ ಅವರ ಕಥನ ಕವನಗಳು: ಒಂದು ಅಧ್ಯಯನ"*** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತಾರೆ.

ಈ ನಿಬಂಧವನ್ನಾಗಲೀ, ನಿಬಂಧದ ಅಧ್ಯಾಯವನ್ನಾಗಲೀ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ. ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸಿರುತ್ತಾರೆ.

ಪ್ರೊ. ಎಚ್.ಎಲ್. ಮಹಾದೇವ
ಮಹಿಳಾ ಸರ್ಕಾರಿ ಕಾಲೇಜು,
(ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ)
ಮಂಡ್ಯ.

ದಿನಾಂಕ: ೨೨-೦೯-೨೦೦೯
ಸ್ಥಳ: ಮಂಡ್ಯ.

ಸಂಶೋಧಕರ ದೃಢೀಕರಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೮–೦೯ನೇ ಸಾಲಿಗೆ ಕನ್ನಡ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು ***"ಸು.ರಂ. ಎಕ್ಕುಂಡಿ ಅವರ ಕಥನ ಕವನಗಳು: ಒಂದು ಅಧ್ಯಯನ"*** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಪ್ರೊ.ಎಚ್.ಎಲ್.ಮಹಾದೇವ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲೀ, ನಿಬಂಧದ ಅಧ್ಯಾಯವನ್ನಾಗಲೀ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ. ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಅಶ್ವಿನಿ

ಅಶ್ವಿನಿ
ಎಂ.ಫಿಲ್. ಅಭ್ಯರ್ಥಿ
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ.

ದಿನಾಂಕ: ೨೨–೦೯–೨೦೦೯
ಸ್ಥಳ: ಮಂಡ್ಯ.

ಪರಿವಿಡಿ

ಪ್ರಸ್ತಾವನೆ

ಪ್ರಸ್ತಾವನೆ

ಬಹುಸಂಸ್ಕೃತಿಗಳ ಭಾರತೀಯ ಸಮಾಜವು ತನ್ನ ಆಂತರ್ಯದಲ್ಲಿ ಪರಂಪರೆಯ ಎರಡು ಧಾರೆಗಳನ್ನು ಒಳಗೊಂಡಿರುವುದನ್ನು ಕಾಣುತ್ತೇವೆ. ಅವುಗಳೆಂದರೆ: ಒಂದು ಮೌಖಿಕ ಪರಂಪರೆ; ಮತ್ತೊಂದು ಶಿಷ್ಟ ಪರಂಪರೆ.

ಈ ಎರಡೂ ಪರಂಪರೆಗಳಲ್ಲಿ ದಾಖಲಾಗಿರುವ ಅನುಭವ, ಆಲೋಚನೆ, ಕ್ರಿಯೆ ಮತ್ತು ಪ್ರತಿಕ್ರಿಯೆಗಳ ಮೊತ್ತವು ಅಪಾರ. ಇಂತಹ ಅಸಂಖ್ಯ ಪ್ರಮಾಣದ ಸಂಗತಿಗಳೆಲ್ಲವೂ ಒಂದು ನೆಲದ ನಾಗರಿಕತೆ–ಜನಜೀವನಗಳನ್ನು ರೂಪಿಸಿರುವ ಸತ್ಯ ಒಂದು ಕಡೆಗಿದ್ದರೆ, ಮತ್ತೊಂದು ಕಡೆಗೆ ಅವುಗಳಲ್ಲಿ ಮಹತ್ವವೆನಿಸುವ ಕ್ರಿಯಾ ಸರಣಿಗಳು ಸಾರ್ವಕಾಲಿಕ ಅರ್ಥಸಾಮರ್ಥ್ಯದ ವಸ್ತು ಸಾಮಗ್ರಿಗಳನ್ನು ಒದಗಿಸಿ, ಭಾರತೀಯ ಕಥನ ಪರಂಪರೆಯನ್ನು ಪೋಷಿಸಿದ ಚರಿತ್ರೆಯಿದೆ. ಇದರಿಂದಾಗಿಯೇ ಭಾರತದ ಈ ಎರಡೂ ಪರಂಪರೆಗಳಲ್ಲಿ ಸಮೃದ್ಧವಾದ ಕಥಾ ಸಾಹಿತ್ಯ ನಿರ್ಮಾಣವಾಗಲು ಸಾಧ್ಯವಾಯಿತು. ಆ ಸಮೃದ್ಧಿಯು ಜನಪದ ಕಾವ್ಯಗಳಲ್ಲಿ, ಶಾಸನಗಳಲ್ಲಿ, ಪ್ರಾಚೀನ ಅಭಿಜಾತ ಕಾವ್ಯಗಳಲ್ಲಿ ಮತ್ತು ಆಧುನಿಕ ಸಾಹಿತ್ಯದಲ್ಲಿ ವೈವಿಧ್ಯಮಯವಾಗಿ ದಾಖಲಾಗಿದೆ. ಈ ಮಾತು ಭಾರತದ ಇತರ ಭಾಷೆಗಳಿಗೆ ಹೇಗೋ ಕನ್ನಡಕ್ಕೂ ಅದು ಅರ್ಥ ಪೂರ್ಣವಾಗಿಯೇ ಹೊಂದಿಕೊಳ್ಳುತ್ತದೆ.

ಸಾವಿರಾರು ವರ್ಷಗಳ ಕನ್ನಡ ಕಥಾಪರಂಪರೆಯು ಹಲವು ಸ್ಥಿತ್ಯಂತರಗಳನ್ನು ಅರಗಿಸಿಕೊಂಡು ಬೆಳೆದಿದೆ ಎಂಬ ಮಾತು ಇಲ್ಲಿ ಗಮನಾರ್ಹ. ಅದು ಕಥಾ ವಸ್ತುವಿನ ಆಯ್ಕೆ, ಭಾಷಾ ಬಳಕೆ, ಕೃತಿಯ ಸ್ವರೂಪ ಮತ್ತು ಆಶಯಗಳಲ್ಲಿ ಸ್ಪಷ್ಟವಾಗಿ ಪ್ರಕಟಗೊಂಡಿದೆ. ಪ್ರಭೇದಗಳ ದೃಷ್ಟಿಯಿಂದ ಕನ್ನಡ ಸಾಹಿತ್ಯ ಪರಂಪರೆಯು ಬಹು ಆಯಾಮಗಳಲ್ಲಿ ತನ್ನನ್ನು ತಾನು ರೂಪಿಸಿಕೊಂಡು ಬೆಳೆಯುತ್ತಿದೆ.

ಕನ್ನಡದ ಜಾಯಮಾನಕ್ಕನುಗುಣವಾಗಿ ಇಲ್ಲಿ ಹಾಡುಗಬ್ಬ ಮತ್ತು ಓದುಗಬ್ಬ ಎಂಬ ಎರಡು ಪ್ರತ್ಯೇಕ ಕಥನ ಧಾರೆಗಳು ಸೃಷ್ಟಿಯಾಗಿವೆ. ಈ ಎರಡೂ ಪರಂಪರೆಗಳಲ್ಲಿ ನಿರ್ವಹಣೆಗೊಳಗಾಗಿರುವ ಕಥನಗಳು ಕನ್ನಡ ನೆಲದ ಹಲವು ವಿಶಿಷ್ಟತೆಗಳನ್ನು ಚೆನ್ನಾಗಿ ಪ್ರತಿನಿಧಿಸಿವೆ. ಗದ್ಯ ಪ್ರಭೇದಗಳಂತೆಯೇ ಪದ್ಯ ಪ್ರಭೇದಗಳು ಸಹ ಸಾಧನೆಯಲ್ಲಿ ಪರಸ್ಪರ ಸರಿಸಮಾನವಾಗಿ ನಿಂತಿವೆ. ಪ್ರಾಚೀನ ಸಾಹಿತ್ಯದ ಈ ವೈವಿಧ್ಯತೆಯ ನಿರಂತರತೆಯು, ಆಧುನಿಕ ಸಂದರ್ಭದಲ್ಲೂ ಹೊಸ ಹೊಸ ಒಳನೋಟಗಳೊಂದಿಗೆ ನಿರಾತಂಕವಾಗಿ ಸಾಗುತ್ತಿರುವುದನ್ನು ಮನಗಾಣಬಹುದು.

ಹೊಸಗನ್ನಡದ ಸಂದರ್ಭದಲ್ಲಿ ಈ ಕಥನ ಪರಂಪರೆಯು ಮಹಾಕಾವ್ಯ, ದೃಶ್ಯಕಾವ್ಯ,

ಕಥೆ, ಕಾದಂಬರಿ, ಕಥನಗೀತೆಗಳ ಆಕಾರ ಪಡೆದು ಸಾಗುತ್ತಿದೆ. ಈ ಬಗೆಯ ವೈವಿಧ್ಯಮಯ ಆಯಾಮವು ಕಥನ ಪರಂಪರೆಯ ಅಂತಃಸತ್ವಕ್ಕೆ ಸಾಕ್ಷಿಯಾಗಿದೆ ಎಂದು ಕೂಡ ಹೇಳಬಹುದು. ಹೊಸಗನ್ನಡ ಕಾಲದ ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಕಾಲಘಟ್ಟಗಳಲ್ಲಿ ದಾಖಲಾಗಿರುವ ಕನ್ನಡ ಸಾಹಿತ್ಯ ಸಮೃದ್ಧಿಯು ಅಧ್ಯಯನಕಾರರನ್ನು ವಿವಿಧ ದೃಷ್ಟಿಕೋನಗಳ ವಿಶ್ಲೇಷಣೆಗಾಗಿ ಆಹ್ವಾನಿಸುತ್ತಿದೆ.

ಈ ಹಿನ್ನೆಲೆಯಲ್ಲಿ "ಸು.ರಂ.ಎಕ್ಕುಂಡಿಯವರ ಕಥನಕವನಗಳ ಒಂದು ಅಧ್ಯಯನ" ಎಂಬ ವಿಷಯವನ್ನು ಪ್ರಸ್ತುತ ನಿಬಂಧಕ್ಕೆ ಆರಿಸಿಕೊಳ್ಳಲಾಗಿದೆ. ಎಕ್ಕುಂಡಿಯವರು ೨೦ನೇ ಶತಮಾನದ ಕನ್ನಡದ ಮಹತ್ವದ ಕವಿಗಳಲ್ಲಿ ಒಬ್ಬರಾಗಿದ್ದಾರೆ. ವಿಶೇಷವಾಗಿ ಕಥನ ಕವನಗಳನ್ನು ರಚಿಸುವುದರಲ್ಲಿ ಅವರದು ಅಗ್ರಗಣ್ಯ ಸ್ಥಾನ. ಈ ಕಾರಣಕ್ಕಾಗಿಯೇ ಅವರ ಕಥನ ಕವನಗಳ ವಿಶ್ಲೇಷಣೆಯು ಕುತೂಹಲಕಾರಿಯಾಗುತ್ತದೆ.

ಈ ನಿಬಂಧದಲ್ಲಿ ಒಟ್ಟು ಏಳು ಅಧ್ಯಾಯಗಳಿವೆ. ಮೊದಲ ಅಧ್ಯಾಯದಲ್ಲಿ ಅಧ್ಯಯನದ ವಿಷಯ ಮತ್ತು ವ್ಯಾಪ್ತಿಯನ್ನು ಕವಿ ಪರಿಚಯದೊಂದಿಗೆ ಸ್ಪಷ್ಟಪಡಿಸಲಾಗಿದೆ. ಎರಡನೇ ಅಧ್ಯಾಯದಲ್ಲಿ ಸಾಹಿತ್ಯ ಪ್ರಭೇದಗಳಲ್ಲಿ ಕಥನ ಕವಿತೆಗಳ ವಿಶಿಷ್ಟತೆಯನ್ನು ಅದರ ಅರ್ಥ, ಲಕ್ಷಣ, ಸ್ವರೂಪಗಳೊಂದಿಗೆ ವಿವರಿಸಲಾಗಿದೆ. ಮೂರನೇ ಅಧ್ಯಾಯದಲ್ಲಿ ಜಾಗತಿಕ ಕಥನಗೀತೆಗಳ ಪರಂಪರೆಯ ಸ್ಥೂಲ ಅವಲೋಕನ ಮಾಡಲಾಗಿದೆ. ಏಕೆಂದರೆ, ಕಥನ ಕವಿಯಾಗಿ ಪ್ರಖ್ಯಾತಿ ಪಡೆದಿರುವ ಎಕ್ಕುಂಡಿಯವರನ್ನು ಪ್ರಭಾವಿಸಿರುವ ಅನ್ಯಭಾಷೆಗಳ ಹಿನ್ನಲೆಯನ್ನು ಗುರುತಿಸುವುದು ಇಲ್ಲಿಯ ಉದ್ದೇಶ.

ನಾಲ್ಕನೆಯ ಅಧ್ಯಾಯದಲ್ಲಿ ಕನ್ನಡ ಕಥನ ಕಾವ್ಯ ಪರಂಪರೆಯನ್ನು ಜಾನಪದ, ಶಾಸನ, ಅಭಿಜಾತ ಮತ್ತು ಆಧುನಿಕ ಎಂದು ವಿಂಗಡಿಸಿ, ಅವುಗಳ ಸ್ಥೂಲ ಪರಿಚಯ ಮಾಡಿಕೊಡಲು ಪ್ರಯತ್ನಿಸಲಾಗಿದೆ. ಇದು ಕನ್ನಡ ಕಥನಕವನ ಪರಂಪರೆಯಿಂದ ಎಕ್ಕುಂಡಿಯವರು ಪಡೆದಿರುವ ಪ್ರೇರಣೆ ಮತ್ತು ತಮ್ಮ ಅಭಿವ್ಯಕ್ತಿಯ ವಿಶಿಷ್ಟ ಮಾರ್ಗವಾಗಿ ಕಥನ ಕವನ ಪ್ರಕಾರವನ್ನು ಒಪ್ಪಿಕೊಳ್ಳಲು ಇರುವ ಕಾರಣಗಳೇನು ಎಂದು ಗೊತ್ತುಪಡಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ.

ಐದನೇ ಅಧ್ಯಾಯದಲ್ಲಿ ಎಕ್ಕುಂಡಿಯವರ ಸಮಗ್ರ ಕಥನ ಕವಿತೆಗಳನ್ನು ವಸ್ತು, ಶೈಲಿ, ಸ್ವರೂಪ ಇವುಗಳ ಆಧಾರದ ಮೇಲೆ ಅಧ್ಯಯನದ ಸೌಕರ್ಯಕ್ಕಾಗಿ ವರ್ಗೀಕರಣ ಮಾಡಿಕೊಳ್ಳಲಾಗಿದೆ. ಆರನೇ ಅಧ್ಯಾಯದಲ್ಲಿ ವಸ್ತು ವಿಷಯಗಳ ಆಧಾರದ ಮೇಲೆ ಹಿಂದಿನ ಅಧ್ಯಾಯದಲ್ಲಿ ವರ್ಗೀಕರಿಸಿರುವಂತೆ ಅಧ್ಯಯನದ ಉದ್ದೇಶಕ್ಕೆ ಅನುಗುಣವಾಗಿ, ವಿವರವಾಗಿ

ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆಯು ಪೌರಾಣಿಕ, ಸಾಮಾಜಿಕ, ಚಾರಿತ್ರಿಕ, ಪ್ರೀತಿ – ಪ್ರಣಯ, ವ್ಯಕ್ತಿಚಿತ್ರಣ, ವೈಚಾರಿಕ ದೃಷ್ಟಿಕೋನಗಳನ್ನು ಒಳಗೊಂಡಿದೆ. ಎಕ್ಕುಂಡಿಯವರ ಸಮಗ್ರ ಕಥನ ಕವನಗಳನ್ನು ಈ ಚೌಕಟ್ಟಿನಲ್ಲಿ ವಿಶ್ಲೇಷಿಸಿ, ಅವುಗಳ ವಿಶಿಷ್ಟತೆಯನ್ನು ಗುರುತಿಸುವ ಯತ್ನ ನಡೆಸಲಾಗಿದೆ. ಏಳನೇ ಅಧ್ಯಾಯದಲ್ಲಿ ಎಕ್ಕುಂಡಿಯವರು ತಮ್ಮ ಕಥನಗೀತೆಗಳಲ್ಲಿ ಅಚ್ಚೊತ್ತಿರುವ ಅನನ್ಯತೆಯನ್ನು, ಆ ಮೂಲಕ ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆಯನ್ನು ವಿವರಿಸಲು ಯತ್ನಿಸಿರುತ್ತೇನೆ. ಕೊನೆಯಲ್ಲಿ ಎಕ್ಕುಂಡಿಯವರ ಕಥನ ಗೀತೆಗಳು ಒಟ್ಟಾರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪಡೆದಿರುವ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಥಾನಮಾನಗಳ ಪ್ರಸ್ತಾಪದೊಂದಿಗೆ ಈ ಅಧ್ಯಯನದ ಸಾರ್ಥಕತೆಯನ್ನು ಮನಗಾಣಿಸಲು ಪ್ರಯತ್ನಿಸಿರುತ್ತೇನೆ.

****

ಅಧ್ಯಾಯ–ಒಂದು

ಅಧ್ಯಯನ ವಿಷಯ, ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಯನದ ವಿಷಯ ಮತ್ತು ವ್ಯಾಪ್ತಿ

ನವೋದಯ ಕಾಲದ ಶ್ರೇಷ್ಠ ಕವಿ ಪು.ತಿ.ನ. ಅವರಿಂದ 'ಸಹಜ ಕವಿ' ಎಂದೇ ಪ್ರಶಂಸೆಗೆ ಒಳಗಾಗಿರುವ ಸು.ರಂ. ಎಕ್ಕುಂಡಿಯವರು, ಹೊಸಗನ್ನಡದ ಸಾಹಿತ್ಯದ ವಿಶಿಷ್ಟ ಕವಿ. ಆ ವಿಶಿಷ್ಟತೆಯನ್ನು ಅವರು ತಮ್ಮ ಕಥನ ಕವನಗಳ ರಚನೆಯ ಮೂಲಕ ದಾಖಲಿಸಿದ್ದಾರೆ. ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಕಾವ್ಯ ಸಂದರ್ಭಗಳ ಅರ್ಧಶತಮಾನಕ್ಕೂ ಹೆಚ್ಚು ಕಾಲ ಕಾವ್ಯ ಕೃಷಿ ನಡೆಸಿರುವ ಸು.ರಂ. ಎಕ್ಕುಂಡಿಯವರು ಯಾವುದೇ ಪಂಥ, ಪ್ರಣಾಳಿ, ವರ್ಗಪ್ರಜ್ಞೆ, ಬದ್ಧತೆಗಳಿಗಾಗಿ ಕಾವ್ಯ ರಚಿಸದೆ ಜನರ ಸಂತೋಷಕ್ಕಾಗಿ ಜೀವನ ಸೌಂದರ್ಯ, ಬಾಳಿನ ಅರ್ಥಪೂರ್ಣತೆಗಳನ್ನು ದರ್ಶಿಸುವ ಧ್ಯೇಯವಿಟ್ಟು ಬರೆದವರು. ಈ ಅಂಶವು ಅವರ ಕವಿತೆಗಳ ಸಮಗ್ರ ಅಧ್ಯಯನದಿಂದ ಗೋಚರವಾಗುತ್ತದೆ. ವಿಶೇಷವಾಗಿ ಅವರ ಕಥನ ಗೀತೆಗಳು ಈ ಕಾರಣದಿಂದಾಗಿಯೇ ನನ್ನ ಅಧ್ಯಯನಾಸಕ್ತಿಯನ್ನು ಪ್ರೇರೇಪಿಸಿವೆ.

"ಸುಬ್ಬಣ್ಣ ರಂಗನಾಥ ಎಕ್ಕುಂಡಿ (೧೯೨೩-೧೯೯೫) ನಮ್ಮ ಆಧುನಿಕ ಕನ್ನಡ ಕಾವ್ಯದ ಮುಖ್ಯ ಕವಿಗಳಲ್ಲಿ ಒಬ್ಬರು. ಧಾರವಾಡ ಜಿಲ್ಲೆಯ ರಾಣಿಬೆನ್ನೂರಿನಲ್ಲಿ ೧೯೨೩ ಜನವರಿ ೨೦ರಂದು ಜನಿಸಿದ ಎಕ್ಕುಂಡಿಯವರು ಕಿರಿವಯಸ್ಸಿನಲ್ಲಿ ತಮ್ಮ ತಂದೆಯನ್ನು ಕಳೆದುಕೊಂಡರು. ತಾಯಿ ಮತ್ತು ಬಂಧುಗಳ ನೆರವಿನಿಂದ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹುಬ್ಬಳ್ಳಿಯಲ್ಲಿ, ನಂತರದ ಬಿ.ಎ.ಆನರ್ಸ್ ಪದವಿಯನ್ನು ಸಾಂಗಲಿಯ ವಿಲ್ಲಿಂಗ್‌ಡನ್ ಕಾಲೇಜಿನಲ್ಲಿ ಪಡೆದುಕೊಂಡರು. ಕೌಟುಂಬಿಕ ಸಾವು-ನೋವು, ಅಪಾರವಾದ ಬಡತನ, ಕಷ್ಟದಲ್ಲಿ ಸಾಗಬೇಕಿದ್ದ ವಿದ್ಯಾಭ್ಯಾಸ ಎಕ್ಕುಂಡಿಯವರ ಮೇಲೆ ದಟ್ಟವಾದ ಪ್ರಭಾವ ಬೀರಿವೆ". ೧

ಹಿರಿಯರಾದ ವಿ.ಕೃ. ಗೋಕಾಕ್ ಮತ್ತು ರಂ.ಶ್ರೀ.ಮುಗಳಿಯವರ ಸಹವಾಸ ಹಾಗೂ ಅವರ ಕಾವ್ಯಗಳ ಪ್ರಭಾವಕ್ಕೆ ಒಳಗಾದ ಎಕ್ಕುಂಡಿಯವರಿಗೆ 'ವರುಣಕುಂಜ' ಎಂಬ ಗೆಳೆಯರ ಬಳಗದ ಸಕ್ರಿಯ ಸದಸ್ಯರಾಗಿ ಪಡೆದ ಅನುಭವಗಳು, ಈ ಬಳಗದ ಚಟುವಟಿಕೆಗಳು ಅವರ ಕಾವ್ಯ ರಚನೆಯ ಆಸಕ್ತಿಯನ್ನು ಪೋಷಿಸಿ ಬೆಳೆಸಿವೆ ಎಂದರೆ ತಪ್ಪಲ್ಲ. ತಮ್ಮ ಇಂಗ್ಲಿಷ್ ಆನರ್ಸ್ ಪದವಿಯ ನಂತರ ಸು.ರಂ. ಎಕ್ಕುಂಡಿಯವರು ಉತ್ತರ ಕನ್ನಡದ ಬಂಕಿಕೊಡ್ಲದ ಆನಂದಾಶ್ರಮ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇರಿ ಮುಖ್ಯೋಪಾಧ್ಯಾಯರಾಗಿ ನಿವೃತ್ತಿಯಾಗುವವರೆಗೆ ೩೫ ವರ್ಷಗಳ

---

೧. ಜಿ.ಎಸ್.ಮೋಹನ್ ಸಾಲುದೀಪಗಳು ಪುಟ – ೩೯೭

ಸೇವೆ ಸಲ್ಲಿಸಿ 'ಆದರ್ಶ ಶಿಕ್ಷಕ' ಪ್ರಶಸ್ತಿ ಪಡೆದರು.

"ಉತ್ತರ ಕನ್ನಡದ ಬಂಕಿಕೊಡ್ಲ ಎಕ್ಕುಂಡಿಯವರ ಕಾವ್ಯ ಸಾಧನೆಯ ತಪೋಭೂಮಿಯಾಯಿತು. 'ಸಮುದ್ರ ತೀರದ ಈ ಊರಿನಲ್ಲಿ ಮೂರು ದಶಕಕ್ಕೂ ಹೆಚ್ಚು ಕಾಲ ಎಕ್ಕುಂಡಿಯವರ ಕವನಗಳಲ್ಲಿ ಅಲ್ಲಿನ ನಿಸರ್ಗ ಹೆಣೆದುಕೊಂಡಿದೆ. ಹಾಡಿಯ ಮಧ್ಯದಲ್ಲಿ ಕೇಳಿ ಬರುವ ಕೋಗಿಲೆಯ ಧ್ವನಿ, ಗದ್ದೆಗಳ ಮಧ್ಯದಿಂದ ಧುತ್ತೆಂದು ಹಾರುವ ಬೆಳ್ಳಕ್ಕಿಗಳು, ಭೋರ್ಗರೆವ ಉಪ್ಪುಕಡಲು, ಚಾಮರ ಬೀಸಿ ಹಾಡುವ ತೆಂಗಿನ ಮರಗಳ ಸಾಲು ಸಾಲು, ಕೋಪಿಸಿ ಮೈಮೇಲೆ ದಿನಗಟ್ಟಲೆ ಸುರಿದು ಹಾವಳಿ ಎಬ್ಬಿಸುವ ಮಳೆರಾಯ, ಎಕ್ಕುಂಡಿಯವರ ಕವನಗಳಲ್ಲಿ ಕುಸುರಿಗೆಲಸ ನಡೆಸಿವೆ." ೧

'ಆದರೆ ನಿಸರ್ಗದಲ್ಲಿ ತೋಯ್ದ ಎಕ್ಕುಂಡಿಯವರಿಗೆ ಅಷ್ಟೇ ವರ್ಷ ಆ ಕಡಲ ತಡಿಯ ತೆಂಗಿನ ಗರಿಕೆಯ ಗುಡಿಸಲುಗಳಿಂದ ನಿಟ್ಟುಸಿರುಗಳು ಸಹ ಕೇಳಿಸಿವೆ. ಕಡಲ ತೀರದಲ್ಲಿ ಬೆಂಕಿ ಹಚ್ಚಿ ಗುಮಟೆ ನುಡಿಸುತ್ತಾ ಹಾಡು ಕೇಳುತ್ತಾ ಇದ್ದವರ ಹಿಂದೆ ಎಷ್ಟು ನಿಟ್ಟುಸಿರು ಇದೆ ಎಂಬುದು ಎಕ್ಕುಂಡಿಯವರಿಗೆ ಗೊತ್ತಿರುವುದರಿಂದಲೇ ನಿಸರ್ಗವನ್ನು ಹಿಂದೆ ತಳ್ಳಿ ಅವರ ಕಾವ್ಯದಲ್ಲಿ ಜನಸಾಮಾನ್ಯರು ಇಣುಕುತ್ತಾರೆ. ಎಕ್ಕುಂಡಿ ಅವರ ಕಾವ್ಯದ ಕೇಂದ್ರ ಮನುಷ್ಯನೇ ಆಗಿರುವುದಕ್ಕೂ ಅವರ ಪ್ರಧಾನ ಕಾವ್ಯ ಪ್ರಕಾರ ಕಥನ ಕವನವೇ ಆಗಿರುವುದಕ್ಕೂ ಕಾರಣಗಳು ಸ್ಪಷ್ಟವಾಗಿಯೇ ಇವೆ'. ೨

'ಪ್ರಕೃತಿ'ಯನ್ನು ಕುರಿತು ಹಾಡುವಾಗಲೂ ಕವಿ ಮನುಷ್ಯ ಸಮಾಜವು ಪ್ರಕೃತಿಯಿಂದ ಪಡೆಯಬಹುದಾದ ಜೀವನೋತ್ಸಾಹದ ಕಡೆಗೇ ಒಂದು ಕಣ್ಣಿಟ್ಟಿರುವುದು ಕಾಣುವುದು. 'ಕೆಂಡದ ಮೇಲೆ ನಡೆದವರಿಗೆ ಮಾತ್ರವೇ ಕೆಂಡದ ಅನುಭವವನ್ನು ಬಣ್ಣಿಸಲು ಸಾಧ್ಯ ಎಂಬುದು ಎಕ್ಕುಂಡಿಯವರ ನಿಲುವು. ಎಕ್ಕುಂಡಿಯವರು ತಾವು ಶಿಕ್ಷಕರಾಗುವವರೆಗೆ ನಡೆದು ಬಂದ ಕೆಂಡದ ಮೇಲಿನ ನಡಿಗೆಯೇ ಇವರ ಕಾವ್ಯವನ್ನು ನಿರ್ದೇಶಿಸಿದೆ'. ೩

ಎಕ್ಕುಂಡಿಯವರು ನವೋದಯದ ಉತ್ಕರ್ಷದ ಕಾಲದಲ್ಲಿ ಕಾವ್ಯ ರಚನೆಗೆ ತೊಡಗಿ, ಪ್ರಗತಿಶೀಲ, ನವ್ಯ, ನವ್ಯೋತ್ತರ ಕಾಲದ ಹಲವಾರು ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಸಂತಾನ (೧೯೫೩), ಶ್ರೀ ಆನಂದ ತೀರ್ಥರು (೧೯೫೩), ಹಾವಾಡಿಗರ ಹುಡುಗ (೧೯೬೭),

---

೧. ಟಿ.ಪಿ.ಅಶೋಕ್– ಸಾಲುದೀಪಗಳು ಪುಟ – ೩೯೮

೨. ಟಿ.ಪಿ.ಅಶೋಕ್– ಸಾಲುದೀಪಗಳು ಪುಟ – ೩೯೮

೩. ಜಿ.ಎನ್.ಮೋಹನ್ ಸಾಲುದೀಪಗಳು ಪುಟ – ೩೯೭

ಮತ್ಸ್ಯಗಂಧಿ (೧೯೭೫), ಬೆಳ್ಳಕ್ಕಿಗಳು (೧೯೮೨), ಕಥನ ಕವನಗಳು (೧೯೮೫), ಬಕುಲದ ಹೂಗಳು (೧೯೯೧), 'ಗೋಧಿಯ ತೆನೆಗಳು' (೧೯೯೬), ಕವನ ಸಂಗ್ರಹಗಳಾಗಿವೆ. ಅಲ್ಲದೆ, ಎಕ್ಕುಂಡಿಯವರು ಗದ್ಯದಲ್ಲೂ ಕೃಷಿ ಮಾಡಿ ವಿಮರ್ಶೆ–ಪು.ತಿ.ನ (೧೯೫೭), ಜೀವನ ಚರಿತ್ರೆ ಶ್ರೀ ಮಧ್ವಮುನಿ ವಿಜಯ (೧೯೫೮) ಎಂಬ ಕೃತಿಗಳನ್ನು ಪ್ರಕಟಿಸಿರುವುದಲ್ಲದೆ ರಷ್ಯನ್ ಕಾದಂಬರಿ ಮತ್ತು ಪ್ರತಿಬಿಂಬ (೧೯೭೮), ಮೌನದ ಹೊತ್ತು (೧೯೯೫) ಎಂಬ ಕವಿತೆಗಳ ಸಂಗ್ರಹಗಳನ್ನು ಕನ್ನಡಕ್ಕೆ ತಂದಿದ್ದಾರೆ. ಅವರ ಬಿಡಿ ಲೇಖನಗಳನ್ನು 'ಪಂಜುಗಳು' (೧೯೯೮) ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ.

ಇಂತಹ ಕವಿ ಶಿಕ್ಷಕ ಎಕ್ಕುಂಡಿಯವರಿಗೆ ೧೯೭೦ರಲ್ಲಿ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ, ೧೯೭೮ರಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿ, ೧೯೭೮ ರಲ್ಲಿ 'ಮತ್ಸ್ಯಗಂಧಿ' ಕವನ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಕಾವ್ಯ ಪ್ರಶಸ್ತಿ, ೧೯೮೨ ರಲ್ಲಿ 'ಬೆಳ್ಳಕ್ಕಿಗಳು' ಕೃತಿಗೆ ಮುದ್ದಣ್ಣ ಸ್ಮಾರಕ ಕಾವ್ಯ ಪ್ರಶಸ್ತಿ ಹಾಗೂ ೧೯೯೨ರಲ್ಲಿ 'ಬಕುಲದ ಹೂವುಗಳು' ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದ್ದು, ಈ ಪ್ರಶಸ್ತಿಗಳೆಲ್ಲವೂ ಅವರ ಕವಿ ಪ್ರತಿಭೆಗೆ ದಕ್ಕಿದ ಶ್ರೇಷ್ಠ ಗೌರವಗಳೆಂದೇ ತಿಳಿಯಬೇಕಾಗುತ್ತದೆ.

ಎಕ್ಕುಂಡಿಯವರ ಜೀವನ ಮತ್ತು ಸಾಹಿತ್ಯ ಕುರಿತು ಸಂಶೋಧನಾ ಪ್ರಬಂಧಗಳು ರಚಿತವಾಗಿವೆ. ಅಲ್ಲದೆ ಎಕ್ಕುಂಡಿಯವರ ವಿವಿಧ ಕೃತಿ–ಕಾವ್ಯ–ವಿಚಾರಗಳ ಅಂತಃ ಸತ್ವವನ್ನು ಪ್ರಖ್ಯಾತ ವಿಮರ್ಶಕರು ತಮ್ಮ ವ್ಯಾಖ್ಯಾನ, ವಿಮರ್ಶೆಗಳ ರೂಪದಲ್ಲಿ ನಿಯತಕಾಲಿಕೆಗಳ ಮುಖಾಂತರ ಜನರಿಗೆ ಪರಿಚಯಿಸಿಕೊಟ್ಟಿದ್ದಾರೆ. ಎಕ್ಕುಂಡಿಯವರ ಸಾಧನೆಗಳು ಇಂಗ್ಲಿಷ್ ಮತ್ತು ರಷ್ಯನ್ ಭಾಷೆಗಳಿಗೆ ಪರಿಚಯಗೊಂಡಿವೆ ಎಂಬುದು ಹೆಮ್ಮೆ ಪಡುವ ವಿಚಾರ.

ಎಕ್ಕುಂಡಿಯವರ ಬರವಣಿಗೆ ವಿಶೇಷವಾಗಿ ಕಾವ್ಯ ಮಾಧ್ಯಮದಲ್ಲಿ ಯಶಸ್ಸು ಕಂಡಿದೆ ಎಂದೇ ಹೇಳಬಹುದು. ಈ ಮಾತಿಗೆ ಅವರ ಒಂಭತ್ತು ಕವನ ಸಂಗ್ರಹಗಳೇ ಸಾಕ್ಷಿಯಾಗಿವೆ. ಕಾವ್ಯ ಪ್ರಭೇದಗಳಲ್ಲಿ ಭಾವ ಪ್ರಧಾನವಾದ ಭಾವಗೀತೆ, ವಿಚಾರ ಪ್ರಧಾನವಾದ ಕವಿತೆ ಮತ್ತು ಕಥಾಂಶವುಳ್ಳ ಕಥನ ಕವನಗಳನ್ನು ನೂರಾರು ಸಂಖ್ಯೆಯಲ್ಲಿ ಎಕ್ಕುಂಡಿಯವರು ರಚಿಸಿದ್ದಾರೆ. ಹೀಗಾಗಿ ಅವರಿಗೆ ಲೇಖಕ ಎನ್ನುವುದಕ್ಕಿಂತ ಕವಿ ಎಂಬ ಅಭಿದಾನವೇ ಸುಸಂಗತವಾಗುತ್ತದೆ. ಅದರಲ್ಲೂ ಕಥನ ಕವನಗಳ ರಚನೆಯಲ್ಲಿ ಎಕ್ಕುಂಡಿಯವರ ಸಾಧನೆ ಅಗ್ರಸ್ಥಾನದಲ್ಲಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಇಷ್ಟೊಂದು ಕಥನ ಕವನಗಳನ್ನು ರಚಿಸಿರುವವರು ವಿರಳವೆಂದೇ ಹೇಳಬೇಕು. ಎಕ್ಕುಂಡಿಯವರ ಈ ಸಾಧನೆಯು ಕನ್ನಡ ಸಾಹಿತ್ಯ ವಿಮರ್ಶಕರ ವಿಶೇಷ

ಅಧ್ಯಯನಾಸಕ್ತಿಗಳಿಗೆ ಪ್ರೇರಣೆ ನೀಡಿರುವುದು ಸುಳ್ಳಲ್ಲ.

'ಕಥನ ಕವನಗಳಲ್ಲಿ ಸು.ರಂ. ಎಕ್ಕುಂಡಿ ಅವರು ನಡೆಸಿದ ಪ್ರಯೋಗಗಳು ಈ ಕ್ಷೇತ್ರಕ್ಕೊಂದು ನಾವಿನ್ಯವನ್ನು ತಂದುಕೊಟ್ಟಿವೆ. ಕಥನ ಕವನವೇ ಹೊಸ ಅರ್ಥ ಪಡೆಯುವಂತಹ ಪ್ರಯೋಗಗಳನ್ನು ಎಕ್ಕುಂಡಿ ನಡೆಸಿದ್ದಾರೆ. "ಕಥನ ಕವನ"ದ ಪಾರಂಪರಿಕ ವ್ಯಾಖ್ಯೆ ಶ್ರೀ ಎಕ್ಕುಂಡಿಯವರಲ್ಲಿ ಬದಲಾಗಿದೆ. 'ಕಥೆಯುಳ್ಳ ಕವನ' ಎಂಬುದಕ್ಕೆ ಸೀಮಿತಗೊಳ್ಳದೆ 'ಕಥನಕವನ' ಎಂಬ ಅರ್ಥಕ್ಕೆ ಹೊರಳಿದೆ. 'ಕಥೆ' ಮತ್ತು 'ಕಥನ'ಗಳ ಅರ್ಥವ್ಯಾಪ್ತಿ ಬೇರೆ ಬೇರೆ ತಾನೆ? ಇದು ನಮ್ಮ ಪ್ರಾಚೀನ ಕವಿಗಳು ಬಳಸಿದ 'ವಸ್ತುಕ' ಮತ್ತು 'ವರ್ಣಕ' ವೆಂಬ ಮಾತುಗಳಿಗೆ ಹೊಂದುತ್ತವೆಯೇ ಎಂದೂ ಯೋಚಿಸಲು ಸಾಧ್ಯ. ಅದಿರಲಿ, ಶ್ರೀ ಎಕ್ಕುಂಡಿಯವರ ಕವಿತೆಗಳಲ್ಲಿ ಕಥೆಗಿಂತ ಕಥನ ಮೇಲುಗೈ ಪಡೆಯುತ್ತದೆ. ಹೀಗಾಗಿ ಇಲ್ಲಿನ ಕಥನ ಕವಿತೆಗಳಲ್ಲಿ ಕಥೆ ಎಂಬುದು ಇಲ್ಲದಿದ್ದರೂ ಬಲವಾದ ಕಥನ ಮಾತ್ರ ಎಲ್ಲ ಕವಿತೆಗಳಲ್ಲೂ ಇದ್ದೇ ಇದೆ.' ೧

'ಎಕ್ಕುಂಡಿಯವರ ಭಾವಗೀತೆಯ ಉಜ್ವಲ ಸ್ವರೂಪ ಅವರ ಕವಿತೆಗಳಲ್ಲಿ ವ್ಯಕ್ತವಾಗಿದೆ. ಅವರ ಶಕ್ತಿ ವಿಶೇಷವು ಧ್ವನಿರಮ್ಯವಾದ ಕಥನ ಕವನಗಳಲ್ಲಿ ಕಂಡುಬಂದಿದೆ. ಪೂರ್ವ ಪರಂಪರೆಯಿಂದ ಎತ್ತಿಕೊಂಡ ಕಥೆಗಳನ್ನು ಉನ್ನತ ಸರಣಿಯಲ್ಲಿ ನಿರೂಪಿಸಿ, ಹೊಸ ಕಾವ್ಯಕ್ಕೆ ಅವರು ವಿಶೇಷ ಕಳೆ ತಂದಿದ್ದಾರೆ'. ೨ 'ಪ್ರಾಕ್ತನ ವಿಷಯವನ್ನು ಅವಲಂಬಿಸಿ ಆಧುನಿಕ ಮನಸ್ಸು ಒಪ್ಪುವಂತೆ ರಚಿತವಾಗಿರುವ ಕಥನ ಕವನಗಳಲ್ಲಿ ಎಕ್ಕುಂಡಿಯವರನ್ನು ಮೀರಿಸುವ ಅಷ್ಟೇಕೆ ಹೆಗಲೆಣೆಯಾಗಿ ನಿಲ್ಲುವಂಥವರೂ ಸಹ ಬಹಳಿಲ್ಲ'. ೩

ಡಾ॥ ಕೆ.ವಿ.ನಾರಾಯಣ್, ಡಾ॥ ರಂ.ಶ್ರೀ ಮುಗಳಿ ಹಾಗೂ ಪು.ತಿ.ನ ಅವರ ಮೇಲ್ಕಂಡ ವಿವರಣೆಗಳು ಎಕ್ಕುಂಡಿಯವರ ಕಥನ ಕವನಗಳ ಅನನ್ಯತೆಯನ್ನು ಗುರುತಿಸುವಲ್ಲಿ ಯಶಸ್ವಿಯಾಗಿವೆ.

ಹೀಗೆ ನಾಡಿನ ವಿದ್ವಾಂಸರು, ಕವಿಗಳು, ವಿಮರ್ಶಕರು, ಸಹೃದಯರ ವರ್ಗಗಳನ್ನು ವಿಶೇಷವಾಗಿ ಗಮನ ಸೆಳೆದಿರುವ ಎಕ್ಕುಂಡಿಯವರ ಸಮಗ್ರ ಸಾಹಿತ್ಯದ ವಿಮರ್ಶೆಯು ಪೂರ್ಣ ಪ್ರಮಾಣದಲ್ಲಿ ಕನ್ನಡಿಗರಿಗೆ ಇನ್ನೂ ಲಭ್ಯವಾಗಬೇಕಾಗಿದೆ. ಆ ನಿಟ್ಟಿನಲ್ಲಿ ಅವರ ಕಥನ ಕವಿತೆಗಳ ಒಟ್ಟು ಅಧ್ಯಯನ ಮತ್ತು ವಿಮರ್ಶೆಯು ಒಂದು ಸಾರ್ಥಕ ಕಾರ್ಯವೆಂದು ಭಾವಿಸಿ, ಈ

---

೧. ಡಾ॥ ಕೆ.ವಿ.ನಾರಾಯಣ್ – ಬಕುಲದ ಹೂವುಗಳು ಮುನ್ನುಡಿಯಲ್ಲಿ – ೧೯೬೧

೨. ಡಾ॥ ರಂ.ಶ್ರೀ. ಮುಗಳಿ – ಕನ್ನಡ ಸಾಹಿತ್ಯದ ಇತಿಹಾಸ – ೧೯೫೮ ಪುಟ– ೨೫೬

೩. ಪು.ತಿ.ನ – ಹಾವಾಡಿಗರ ಹುಡುಗ ಮುನ್ನುಡಿಯಲ್ಲಿ – ಪುಟ – V

ನಿಬಂಧದಲ್ಲಿ ಎಕ್ಕುಂಡಿಯವರ ಸಮಗ್ರ ಕಥನ ಕವನಗಳನ್ನು ಅಧ್ಯಯನಕ್ಕಾಗಿ ಆರಿಸಿಕೊಂಡಿರುತ್ತೇನೆ.

ಪ್ರಸ್ತುತ ಅಧ್ಯಯನ ಸೌಕರ್ಯಕ್ಕಾಗಿ ವಸ್ತು ವಿಷಯಗಳ ಆಧಾರದ ಮೇಲೆ ಎಕ್ಕುಂಡಿಯವರ ಕಥನ ಕವನಗಳನ್ನು ವರ್ಗೀಕರಿಸಲಾಗಿದೆ. ಆ ವರ್ಗೀಕರಣಕ್ಕೆ ಪೌರಾಣಿಕ, ಚಾರಿತ್ರಿಕ, ಸಾಮಾಜಿಕ, ಪ್ರೀತಿ-ಪ್ರಣಯ, ಜೀವನ ಚಿತ್ರಣ, ವಿಡಂಬನೆ ಹಾಗೂ ವೈಚಾರಿಕ ದೃಷ್ಟಿಕೋನಗಳನ್ನು ಆಧಾರವಾಗಿಟ್ಟು -ಕೊಳ್ಳಲಾಗಿದ್ದು, ಅದರಂತೆ ಪ್ರತಿಯೊಂದು ಕವಿತೆಗಳ ವಸ್ತು-ವಿಷಯಗಳನ್ನು ವಿಶ್ಲೇಷಿಸಿ, ಕವಿತೆಯ ಆಶಯಗಳನ್ನು ವಿವರಿಸುವ ಉದ್ದೇಶವನ್ನು ಈ ನಿಬಂಧವು ಒಳಗೊಂಡಿದೆ.

ತಮ್ಮ ಕಥನ ಗೀತೆಗಳ ಮೂಲಕ ಸು.ರಂ.ಎಕ್ಕುಂಡಿಯವರು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಗೆ ತಂದು ಕೊಟ್ಟಿರುವ ಅನನ್ಯತೆಯನ್ನು ಗುರುತಿಸುವ ಅವಕಾಶಗಳು ಇಂತಹ ಅಧ್ಯಯನ, ವಿಶ್ಲೇಷಣೆಗಳಿಂದ ಸಾಧ್ಯವಾಗುತ್ತದೆ ಎಂಬುದು ನನ್ನ ಗ್ರಹಿಕೆಯಾಗಿದೆ. ಇದು ಅಧ್ಯಯನದ ವ್ಯಾಪ್ತಿಯನ್ನು ಕೂಡ ನಿರ್ಧರಿಸುತ್ತದೆ ಎಂದುಕೊಳ್ಳುತ್ತೇನೆ.

****

ಅಧ್ಯಾಯ-ಎರಡು

ಕಥನ ಕವನಗಳ ಅರ್ಥ, ಲಕ್ಷಣ ಮತ್ತು ಸ್ವರೂಪ

ಕಥನ ಕವನಗಳ – ಅರ್ಥ, ಲಕ್ಷಣ ಮತ್ತು ಸ್ವರೂಪ

ಜಗತ್ತಿನ ಎಲ್ಲಾ ಭಾಷೆಗಳಲ್ಲೂ, ಸಾಹಿತ್ಯ ಪ್ರಕಾರದ ಅತ್ಯಂತ ಪ್ರಾಚೀನ ಮೂಲರೂಪ 'ಕಥನಗೀತೆ' ಎಂದು ಗುರುತಿಸಲಾಗಿದೆ. ಪ್ರಾಚೀನತೆಯಲ್ಲಿ ಅಗ್ರಸ್ಥಾನದಲ್ಲಿರುವ ಗ್ರೀಕ್, ಸಂಸ್ಕೃತ, ಪ್ರಾಕೃತ, ಪಾಳಿ, ತಮಿಳು, ಕನ್ನಡ, ಇಂಗ್ಲಿಷ್ ಈ ಮೊದಲಾದ ಭಾಷೆಗಳ ಸಾಹಿತ್ಯ ಪರಂಪರೆಯನ್ನು ಅವಲೋಕಿಸಿದರೆ 'ಕಥನಗೀತೆ'ಯೇ ಬಹುತೇಕ ಕಲೆಗಳಿಗೆ ಮೂಲವಾಗಿರುವುದು ಸ್ಪಷ್ಟ. ಅದು ಭಿನ್ನ ಸನ್ನಿವೇಶ – ಸಂದರ್ಭಗಳ ಒತ್ತಡದಲ್ಲಿ ದೃಶ್ಯಕಾವ್ಯವಾಗಿ, ಶ್ರವ್ಯಕಾವ್ಯವಾಗಿ ಕವಲೊಡೆಯುತ್ತಾ, ಈಗಿನ ವಿವಿಧ ಸಾಹಿತ್ಯ ಪ್ರಭೇದಗಳ ವಿಕಾಸಕ್ಕೆ ಮೂಲ ದ್ರವ್ಯಗಳನ್ನು ಒದಗಿಸಿದೆ. ಈ ಮಾತು ಕಥನ ಗೀತೆಯ ಆಂತರ್ಯದಲ್ಲಿರುವ ಬಹುಮುಖೀ ಸಾಧ್ಯತೆಗಳನ್ನು ಚೆನ್ನಾಗಿ ಧ್ವನಿಸುತ್ತದೆ ಎನ್ನಬಹುದು. ಇಷ್ಟಲ್ಲದೆ ಸಾಹಿತ್ಯದ ಇಂತಹ ಮೂಲ ಪ್ರಭೇದವೊಂದು ತನ್ನ ಮೊದಲಿನ ಗುಣಗಳನ್ನು ಸಾವಿರಾರು ವರ್ಷಗಳ ಕಾಲ ಮುಂದುವರೆಸಿಕೊಂಡು ಹೋಗುವುದು ಸಾಧ್ಯವೆ? ಎನಿಸಿದರೂ, ಕಥನ ಗೀತೆಯ ಸಂದರ್ಭದಲ್ಲಿ ಅದು ನಿಜವಾಗಿಬಿಟ್ಟಿದೆ.

ಇಂತಹ ವಿಲಕ್ಷಣ ಸಾಮರ್ಥ್ಯಗಳನ್ನು ಹೊಂದಿರುವ ಕಥನ ಕವನದ ಅರ್ಥ, ಲಕ್ಷಣ ಮತ್ತು ಸ್ವರೂಪಗಳ ಸ್ಥೂಲ ಗ್ರಹಿಕೆಗಳೊಂದಿಗೆ ಪ್ರಸ್ತುತ ನಿಬಂಧಕ್ಕೆ ಒಂದು ಚೌಕಟ್ಟು, ಹಿನ್ನೆಲೆಗಳನ್ನು ರೂಪಿಸಿಕೊಳ್ಳುವುದು ಅವಶ್ಯಕವೆನಿಸುತ್ತದೆ.

ಕಥನ ಕವನದ ಅರ್ಥ

'ಕಥನ ಕವನ' ಎಂಬ ಪರಿಭಾಷೆಯು 'ಕಥನ' ಮತ್ತು 'ಕವನ' ಎಂಬ ಎರಡು ಅಂಶಗಳನ್ನು ಒಳಗೊಂಡಿರುತ್ತದೆ. 'ಕಥನ' ಎಂಬುದು 'ಕಥನ' ವಿಧಾನವನ್ನೂ, 'ಕಥೆ'ಯ ಅರ್ಥವನ್ನೂ ಬಿಂಬಿಸುತ್ತಿದ್ದರೆ, 'ಕವನ' ಎಂಬುದು 'ಕಾವ್ಯಾತ್ಮಕತೆ'ಯನ್ನು, 'ಪದ್ಯರೂಪ'ವನ್ನು ಸೂಚಿಸುತ್ತದೆ. ಆದ್ದರಿಂದ ಕಥನ ಕವನವು ಕಥನ (**Narrative Mode**), ಕಥೆ (**Story**), ಕಾವ್ಯಾತ್ಮಕತೆ (**Poetic Quality**), ಪದ್ಯರೂಪ (**Verse Poem**) ಎಂಬ ಈ ನಾಲ್ಕು ಅಂಶಗಳನ್ನು ಒಳಗೊಂಡಿದೆ. ಕಥನ ಕವನವು ಮೂಲಭೂತವಾಗಿ ಪದ್ಯರೂಪದ ರಚನೆಯಾಗಿರುವುದರಿಂದ ಕಥನದ ಧಾಟಿ ಮತ್ತು ಪದ್ಯರೂಪಗಳು ಅದರ ಅನಿವಾರ್ಯ ಲಕ್ಷಣಗಳಾಗಿವೆ ಎಂಬುದು ಸ್ಪಷ್ಟ.

'ಕಥನ ಕವಿತೆ'ಯಲ್ಲಿ ಕವಿಯು ತನ್ನ ಅನುಭವ, ಭಾವನೆ, ವಿಚಾರಗಳನ್ನು ಆತ್ಮನಿಷ್ಠ ನೆಲೆಯಲ್ಲಿ ನಿರೂಪಿಸದೆ, ಬೇರೆ ಬೇರೆ ಪಾತ್ರಗಳು ಹಾಗೂ ಘಟನೆಗಳ ಮೂಲಕ ನಿರೂಪಿಸಲು ಯತ್ನಿಸುತ್ತಾನೆ. ಆದ್ದರಿಂದಲೇ 'ಕಥನ ಕವನ'ವು ವಸ್ತುನಿಷ್ಠ ಕಾವ್ಯ ಪ್ರಭೇದವಾಗಿದೆ. ಇಲ್ಲಿ ನಿರೂಪಕ

ಆತ್ಮನಿಷ್ಠ ನೆಲೆಗಿಂತ ಸರ್ವಸಾಕ್ಷಿತ್ವ ನೆಲೆಯಲ್ಲಿ ನಿರೂಪಣೆ ಮಾಡುತ್ತಿರುತ್ತಾನೆ.

ಕಥನ ಕವನದ ಮುಖ್ಯ ಘಟಕಗಳಾಗಿ ಕಥೆ, ಕಥನ, ಕಾವ್ಯಾತ್ಮಕತೆ, ಪದ್ಯರೂಪಗಳಿರುತ್ತವೆ. ಹಲವಾರು ವಿದ್ವಾಂಸರು 'ಕಥನ ಕವನ'ದ ಅರ್ಥವನ್ನು ವಿವರಿಸಲು ಪ್ರಯತ್ನಿಸಿದ್ದಾರೆ. ಅವರಲ್ಲಿ ಎಡ್ಮಂಡ್ ಬ್ಲಂಡನ್, ಜಾರ್ಜ್-ಇ-ಟೆಟರ್, ಎ.ಸಿ.ಬ್ರಾಡ್ಲೆ, ಹಡ್ಸನ್ ಮೊದಲಾದವರ ವಿವರಣೆಗಳು ಗಮನಾರ್ಹ. ಇವರೆಲ್ಲರ ವ್ಯಾಖ್ಯೆಗಳನ್ನು ಒಟ್ಟುಗೂಡಿಸಿ ಹೇಳುವುದಾದರೆ "ಪದ್ಯರೂಪ ಮತ್ತು ಕಥನ ದಾಟಿಯಲ್ಲಿ, ಕಥೆ ಮತ್ತು ಆಕರ್ಷಕವಾದ ಪಾತ್ರಗಳನ್ನು ಬಳಸಿ, ಜೀವನ ವಿನ್ಯಾಸವೊಂದನ್ನು ಭಾವತೀವ್ರತೆಯಲ್ಲಿ ನಿರೂಪಿಸಲಾಗುವ ಕಾವ್ಯಾತ್ಮಕ ಅಭಿವ್ಯಕ್ತಿಯೇ 'ಕಥನ ಕವನ' ಎನಿಸಿಕೊಳ್ಳುತ್ತದೆ". * ೧

ಕಥನ ಕವನದ ಲಕ್ಷಣ

ವಿವಿಧ ಭಾಷೆಗಳ ಸಾಹಿತ್ಯ ಪರಂಪರೆಗಳಲ್ಲಿ ಕಥನ ಕವನವು ಮಹಾಕಾವ್ಯ, ಖಂಡಕಾವ್ಯ, ಲಾವಣಿ, ರೂಪಕ ಕಥೆ, ಪ್ರಸಂಗ ಕವಿತೆ, ದೃಷ್ಟಾಂತ ಕವಿತೆ, ಪ್ರಾಣಿ ಕವಿತೆ, ಆಖ್ಯಾನ, ಸರಳ ಕಥನ ಕವನಗಳು, ನಾಟಕೀಯ ಸ್ವಗತ ಅಥವಾ ಸಂವಾದ, ವರ್ಣನಾತ್ಮಕ ಕವಿತೆಗಳು, ಭಾವಗೀತಾತ್ಮಕ ಕಥನ ಕವನಗಳು, ಸಾಂಕೇತಿಕ ಕಥನ ಕವನಗಳು ಎಂಬ ವಿವಿಧ ವಿಸ್ತೃತ ಮತ್ತು ಮಧ್ಯಮ ಆಕಾರಗಳನ್ನು ಪಡೆದಿರುವುದುಂಟು. ಮುಖ್ಯವಾಗಿ ಪ್ರಾಚೀನ ಕಾಲದಿಂದ ಆಧುನಿಕ ಪರಧಿಯ ವ್ಯಾಪ್ತಿಯಲ್ಲಿ-ಕಾವ್ಯದ ಒಂದು ಪ್ರಭೇದವಾಗಿ 'ಕಥನ ಕವನ'ವನ್ನು ಕಥನ ಗೀತೆ, ಕಥನ ಕವಿತೆ, ಪದ್ಯಕತೆ, ನೀಳ್ಗವಿತೆ ಇತ್ಯಾದಿ ಹೆಸರುಗಳಿಂದ ಕರೆಯಲಾಗಿದೆ. ಈ ಚೌಕಟ್ಟಿನಲ್ಲಿ 'ಕಥನ ಕವನ'ದ ಕೆಲವು ಮುಖ್ಯಲಕ್ಷಣಗಳನ್ನು ಸ್ಥೂಲವಾಗಿ ವಿವರಿಸಬಹುದಾಗಿದೆ.

* ಪದ್ಯರೂಪದಲ್ಲಿ ಕತೆಯೊಂದನ್ನು ಕಥಾನಾತ್ಮಕವಾಗಿ ನಿರೂಪಿಸಿದಾಗ ಕಥನ ಕವನವಾಗುತ್ತದೆ.
* ಕಥನ ಕವನದಲ್ಲಿ ಘಟನೆಯೊಂದನ್ನು ಅಥವಾ ಅನೇಕ ಘಟನೆಗಳನ್ನು ಕಾಲಾನುಕ್ರಮಣಿಕೆಯಲ್ಲಿ ನಿರೂಪಿಸಲಾಗಿರುತ್ತದೆ.
* ಕಥನ ಕವನದಲ್ಲಿ ಕಾಲ, ದೇಶ, ನಾಮಗಳ ಅಧಿಕೃತತೆ ಸಾಮಾನ್ಯವಾಗಿ ಕಂಡುಬರುತ್ತದೆ.
* ಕಥನ ಕವನವು ವಿಸ್ತಾರ ಮತ್ತು ಹರಹಿನಲ್ಲಿ ಮಹಾಕಾವ್ಯ, ಖಂಡಕಾವ್ಯಗಳಿಗಿಂತ ಕಿರಿದಾದುದು ಸ್ವರೂಪದಲ್ಲಿ ಹೆಚ್ಚು ಸರಳವಾದುದು.

---

* ೧. ಡಾ॥ ಎಚ್.ಎಸ್.ವೆಂಕಟೇಶ್ ಮೂರ್ತಿ - ಕಥನ ಕವನ - ಪುಟ ೪

* ಕಥನ ಕವನವು ವಸ್ತುನಿಷ್ಠ ಸ್ವರೂಪ ಉಳ್ಳದ್ದಾಗಿರುತ್ತದೆ.
* ಕಥನ ಕವನದಲ್ಲಿ ಕಥೆಯು ಬದುಕಿನ ಅರ್ಥವನ್ನು ಶೋಧಿಸುವ ಒಂದು ಉಪಾಯವಾಗಿ ಬಳಕೆಯಾಗುವುದನ್ನ ಕಾಣಬಹುದು.
* ಕಥನ ಕವನದಲ್ಲಿ ಕತೆಗಿಂತ ಕಥಾಧಾಟಿಯೇ ಮುಖ್ಯವಾಗಿರುತ್ತದೆ.

ಸ್ವರೂಪ

ಕತೆಯೊಂದು ಕಥನ ದಾಟಿಯಲ್ಲಿ, ಪದ್ಯರೂಪದಲ್ಲಿ ಅಭಿವ್ಯಕ್ತಿ ಪಡೆದರೆ ಅದನ್ನು 'ಕಥನ ಕವನ'ವೆಂದು ನಿಶ್ಚಿತವಾಗಿ ಗುರುತಿಸಬಹುದು. ಹೀಗಾಗಿ 'ಕಥನ ಕವನ'ದಲ್ಲಿ ಕಥನಾತ್ಮಕತೆ ಮತ್ತು ಪದ್ಯರೂಪಗಳು 'ಕಥನ ಕವನ'ದ ಒಟ್ಟು ಸ್ವರೂಪವನ್ನು ನಿರ್ಧರಿಸುತ್ತವೆ. ಸಾಮಾನ್ಯವಾಗಿ ಕಥನ ಕವನಗಳನ್ನು ಕಥಾ ಪ್ರಧಾನ, ಭಾವ ಪ್ರಧಾನ, ಸಾಂಕೇತಿಕ ಎಂಬ ನೆಲೆಗಳಲ್ಲಿ ವಿಂಗಡಿಸಿ, ವಿವರಿಸಲು ಸಾಧ್ಯ. ಹೀಗಿದ್ದಾಗಲೂ ಕಥನ ಕವನಗಳಲ್ಲಿ ಕತೆ ಮತ್ತು ಕಾವ್ಯಾಂಶಗಳ ಹದವಾದ ಮಿಶ್ರಣವಿರುತ್ತದೆ. ಇದರ ಜೊತೆಗೆ "ಘಟನೆಗಳ ಸರಣಿಯನ್ನು ನಾದ ವಿನ್ಯಾಸದಿಂದ ಮತ್ತಷ್ಟು ಶಕ್ತಿಗೊಳಿಸುವ ಮೂಲಕ ಅರ್ಥಪೂರ್ಣತೆಯನ್ನು ಸಾಧಿಸಲಾಗುತ್ತದೆ. ಗದ್ಯ ತಲುಪಲಾಗದ ಸೂಕ್ಷ್ಮಸ್ಥಳಗಳನ್ನು ಸ್ಪರ್ಶಿಸುವುದರಲ್ಲಿ 'ಕಥನ ಕವನ'ದ ಕಾವ್ಯಾತ್ಮಕತೆ ಸಹಾಯಕ್ಕೆ ಬರುತ್ತದೆ". * ಇದು ಸಾಧ್ಯವಾಗುವುದು 'ಕಥನ ಕವನ'ಗಳಲ್ಲಿರುವ ಸಂಗೀತ ಗುಣಗಳಿಂದ ಎಂಬುವುದು ಸ್ಪಷ್ಟ.

ಕಥನ ಕವನಗಳು ಮೂಲರೂಪದಲ್ಲಿ ಸಾಮಾನ್ಯವಾಗಿ ಹಾಡುಗಬ್ಬವಾಗಿರುತ್ತವೆ. ಉದಾಹರಣೆಗೆ: ಕನ್ನಡದ ಲಾವಣಿಗಳು, ಇಂಗ್ಲಿಷಿನ ಲಿರಿಕಲ್ ಬ್ಯಾಲೆಡ್ಸ್. ಈ ಹಿನ್ನೆಲೆಯಲ್ಲಿ "ಶ್ರೇಷ್ಠವಾದ ಅನೇಕ ಕಥನ ಕವನಗಳು ತಮ್ಮ ಸ್ವರೂಪದಲ್ಲಿ ಭಾವಗೀತಾತ್ಮಕ ಗುಣಗಳಿಂದ ಕೂಡಿರುತ್ತವೆ" ಎಂಬ ಎ.ಸಿ.ಬ್ರಾಡ್ಲೆಯ ವಿವರಣೆಯು, ಇತರ ಕಥನ ಮಾರ್ಗಗಳಿಗೂ, ಭಾವಗೀತೆಗಳಿಗೂ, ಕಥನ ಕವನಗಳಿಗೂ ಒಟ್ಟು ಸ್ವರೂಪದಲ್ಲಿಯೇ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತವೆ. ಆದ್ದರಿಂದ ಕಥನ ಕವನಗಳು ಸ್ವರೂಪದಲ್ಲಿ ಭಾವಗೀತೆಗಳ ಸಮೀಪದಲ್ಲಿ ನಿಲ್ಲುತ್ತವೆ.

ಕಥನ ಕವನಗಳ ವಸ್ತು, ಭಾಷೆ, ಛಂದಸ್ಸು ಮತ್ತು ಧಾಟಿಗಳು ಉಳಿದ ಕಾವ್ಯ ಪ್ರಭೇದಗಳಿಂದ ಅದನ್ನು ಬೇರ್ಪಡಿಸುತ್ತವೆ. ಆದ್ದರಿಂದ 'ಕಥನ ಕವನ'ದ ಸ್ವರೂಪವು ಉಳಿದ ಕಾವ್ಯ ಪ್ರಕಾರಗಳಿಗಿಂತ

---

* ಟಿ.ಎಸ್. ಎಲಿಯಟ್ – ಕಾವ್ಯ ಮತ್ತು ನಾಟಕ – ಲೇಖನ – 1957

ಭಿನ್ನವಾದುದು. ಹಾಗಾಗಿಯೇ ಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟ ಸಾಹಿತ್ಯ ಪ್ರಭೇದವಾಗಿ ಅದು ತನ್ನ ಸ್ವತಂತ್ರ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ.

ಮಹಾಕಾವ್ಯದ ಕಥಾ ವಿಸ್ತಾರವಾಗಲೀ, ಗದ್ಯದ ಅಕಾವ್ಯಾತ್ಮಕತೆಯಾಗಲೀ, ಭಾವಗೀತೆಯ ಸಂಗೀತದ ಬಾಹುಳ್ಯವಾಗಲೀ, ನಾಟಕದ ನಾಟಕೀಯ ಅಂಶಗಳಾಗಲೀ 'ಕಥನ ಕವನ'ದಲ್ಲಿ ಯಾವುದೂ ಪ್ರಧಾನವಾಗುವುದಿಲ್ಲ. ಆದರೆ ಕವಿಯ ಆಶಯಕ್ಕೆ ತಕ್ಕಂತೆ 'ಕಥನ ಕವನ'ದಲ್ಲಿ ಕಥೆ, ಸಂಗೀತ, ಛಂದಸ್ಸು, ನಾಟಕೀಯ ಗುಣಗಳು ಮೇಳೈಸಿರುತ್ತವೆ. ಇವುಗಳೆಲ್ಲದರ ಸಮನ್ವಯತೆಯ, ಸರಳ ರೂಪವೇ 'ಕಥನ ಕವನ' ಎಂತಲೂ ಹೇಳಬಹುದು.

****

ಅಧ್ಯಾಯ–ಮೂರು

ಕಥನ ಕವನಗಳ ಜಾಗತಿಕ ಪರಂಪರೆ

ಕಥನ ಕವನದ ಜಾಗತಿಕ ಪರಂಪರೆ

ಜಗತ್ತಿನ ಎಲ್ಲಾ ಭಾಷೆಗಳಲ್ಲಿ ಕಥನ ಪರಂಪರೆಯು ಜೀವಂತವಾಗಿದೆ. ಮೌಖಿಕ ಸಂಪ್ರದಾಯ ಹಾಗೂ ಗ್ರಾಂಥಿಕ ಸಂಪ್ರದಾಯಗಳೆರಡರಲ್ಲೂ ಅದನ್ನು ಗುರುತಿಸಬಹುದು. ಅದೇ ರೀತಿ ವಿವಿಧ ಸಾಹಿತ್ಯ ಪ್ರಭೇದಗಳಿಗೆ ಮೂಲವಾಗಿರುವ ಕಥನ ಗೀತೆಗಳ ಸೃಷ್ಟಿಯಲ್ಲಿ ವಿಶ್ವದ ಪ್ರಾಚೀನ ಮತ್ತು ಆಧುನಿಕ ಭಾಷೆಗಳಾವುವೂ ಹಿಂದೆ ಬಿದ್ದಿಲ್ಲ. ಪ್ರಾಚೀನತೆಯ ದೃಷ್ಟಿಯಿಂದ ಅಗ್ರಸ್ಥಾನದಲ್ಲಿರುವ ಗ್ರೀಕ್, ಲ್ಯಾಟಿನ್, ಸಂಸ್ಕೃತ, ಪ್ರಾಕೃತ, ಪಾಳಿ, ತಮಿಳು, ಕನ್ನಡ ಈ ಮೊದಲಾದ ಭಾಷೆಗಳ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದರೆ, ಕಾವ್ಯದ ಒಂದು ವಿಶಿಷ್ಟ ಪ್ರಭೇದವಾಗಿ ಕಥನ ಕವನ ಪರಂಪರೆಯು ತನ್ನದೇ ಆದ ಗುಣಲಕ್ಷಣಗಳಿಂದ ಕೂಡಿ, ಸ್ವತಂತ್ರ ಅಸ್ತಿತ್ವ – ಸ್ವರೂಪಗಳನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ.

ವಸ್ತುವಿನ ಆಯ್ಕೆ, ಕಥನವಿಧಾನ, ಆಶಯಗಳ ದೃಷ್ಟಿಯಿಂದ ವಿಶ್ವದ ಕಥನ ಕವನಗಳಲ್ಲಿ ಭಾಷೆಯನ್ನು ಹೊರತುಪಡಿಸಿ–ಸಾಮ್ಯತೆಗಳೇ ಹೆಚ್ಚಿವೆ. ನಿರ್ದಿಷ್ಟ ಕಾಲವೊಂದರಲ್ಲಿ ಮಾನವರ ಚಿಂತನಾ ಕ್ರಮಗಳು ಭಾಷೆ ದೇಶಗಳನ್ನು ಮೀರಿ ಒಂದೇ ರೀತಿಯಾಗಿರುವುದುಂಟು. ಕಥನ ಕವನಗಳ ರಚನೆ, ಸ್ವರೂಪಗಳನ್ನು ನಿರ್ಧರಿಸುವ ಸಂಗತಿಗಳಲ್ಲಿ ಆಯಾ ಸಮಾಜದ ಸಾಂಸ್ಕೃತಿಕ ಅಗತ್ಯಗಳ ಜೊತೆಗೆ ಅನ್ಯಸಂಸ್ಕೃತಿ, ಭಾಷೆಗಳ ಪ್ರೇರಣೆ, ಪ್ರಭಾವಗಳು ಕೂಡ ನಿರ್ಣಾಯಕ ಪಾತ್ರವಹಿಸಿರುತ್ತವೆ ಎಂಬ ಮಾತನ್ನು ತಳ್ಳಿಹಾಕುವಂತಿಲ್ಲ.

ಗ್ರೀಕ್‌ನ ಕಥನಗೀತೆ (ಲಿರಿಕಲ್ ಬ್ಯಾಲೆಡ್ಸ್), ಕಥನಕವಿತೆ, ಪ್ರಾಣಿ ಕವಿತೆ, ಕಥಾನಕ ಸರಳರಗಳೆ, ಕನ್ನಡದ ಲಾವಣಿಗಳು ಈ ಮೊದಲಾದ ಕಥನಮಾದರಿಗಳಲ್ಲಿ ಸಾದೃಶ್ಯ ಅಂಶಗಳೇ ಅಧಿಕವಾಗಿವೆ. ಮೂಲತಃ ಹಾಡುಗಬ್ಬಗಳಾಗಿರುವ ಇವುಗಳು ಹಾಡುವ ಮೂಲಕ ಕಥೆಯನ್ನು ನಿರ್ವಹಿಸುವ ಇತರ ಸಾಹಿತ್ಯ ಪ್ರಭೇಧಗಳಲ್ಲಿ ಕಂಡುಬರದ ವಿಶಿಷ್ಟ ಅಭಿವ್ಯಕ್ತಿ ವಿಧಾನದಿಂದ ಕಥನ ವಿಧಾನ – ಒಂದು ಅನನ್ಯತೆ ಪಡೆದಿವೆ. ಎಲ್ಲಾ ಭಾಷೆಗಳ ಕಥನ ಕವನಗಳಿಗೂ ಈ ಮಾತು ಅನ್ವಯವಾಗುತ್ತದೆ. ಕಥನ ಕವನಗಳ ವಿಶ್ವಾತ್ಮಕ ಗುಣಕ್ಕೆ ಇದು ಸಾಕ್ಷಿ.

ಈ ಹಿನ್ನೆಲೆಯಲ್ಲಿ ಜಾಗತಿಕ ಭಾಷೆಗಳ ನಡುವೆ ಇರುವ ಸೂಕ್ಷ್ಮ ಅಂತರ್ ಸಂಬಂಧಗಳ ಕಾರಣಕ್ಕಾಗಿ ಅವುಗಳ ತೌಲನಿಕ ಅಧ್ಯಯನ ಮಹತ್ವದ್ದಾಗುತ್ತದೆ. ಅದರ ಮೂಲಕವೂ ಬೇರೆ ಬೇರೆ ಭಾಷೆಗಳ ಸಾಹಿತ್ಯಿಕ ಸಂಬಂಧಗಳನ್ನು ಹಾಗೂ ಪರಸ್ಪರ ಪ್ರಭಾವ ಪ್ರೇರಣೆಗಳನ್ನು ತಿಳಿಯಲು ಸಹಾಯಕವಾಗುತ್ತದೆ.

ಎಲ್ಲಾ ಬಗೆಯ ಪ್ರಾಚೀನತೆಗಳನ್ನು ಗುರುತಿಸುವಾಗ ನಾವು ಗ್ರೀಕ್ ಮೂಲಕ್ಕೇ

ಹೋಗುತ್ತೇವೆ. ಕಥನಗೀತೆಗಳ ಇತಿಹಾಸ ಕೂಡ ಗ್ರೀಕ್ ಮೂಲದಿಂದಲೇ ಪ್ರಾರಂಭವಾಗುತ್ತದೆ. ಸುಗ್ಗಿ ದೇವತೆಯಾದ ಬ್ಯಾಕಸ್ (Bacchus) ಪೂಜೆಗಾಗಿ ಊರಿನ ಜನರೆಲ್ಲಾ ದೇಗುಲದ ಮುಂದೆ ಒಟ್ಟುಗೂಡಿ, ಪೂಜೆಯ ನಂತರ ಗಾಯನ, ನರ್ತನ ಮಾಡುತ್ತಿದ್ದರು.

ಈ ಮನರಂಜನೆಗಳ ನಡುವೆ ಗ್ರೀಕ್ ಪುರಾಣ–ಇತಿಹಾಸಗಳ ವೀರರ ಕಥೆಗಳನ್ನು ಗಾಯಕನೊಬ್ಬ ತಂತ್ರೀವಾದ್ಯದೊಡನೆ ಹಾಡುತ್ತಿದ್ದ. ಇದೇ ಕಥನಗೀತೆಗಳ ಉಗಮಕ್ಕೆ ಕಾರಣವಾಯಿತು, ಲಿರಿಕಲ್ ಬ್ಯಾಲೆಡ್ ಆಯಿತು.

ಪಾಶ್ಚಾತ್ಯ ಸಮಾಜಗಳಲ್ಲಿ ಕಥನ ಕವನಗಳು ಬ್ಯಾಲೆಡ್ ರೂಪದಲ್ಲಿವೆ. ಅವುಗಳಲ್ಲಿ ಎರಡು ಬಗೆ: ಒಂದು ಜಾನಪದ ಕಥನಗೀತೆ, ಮತ್ತೊಂದು ಲಿಟರರಿ ಬ್ಯಾಲೆಡ್. ಜಾನಪದ ಕಥನಗೀತೆಗಳು ಅನಕ್ಷರಸ್ಥರಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವಂಥವು. ಗ್ರೀಕ್, ಬಾಲ್ಕನ್, ಸಿಸಿಲಿ ಪ್ರಾಂತ್ಯಗಳಲ್ಲಿ ಇವುಗಳು ಈಗಲೂ ಜೀವಂತವಾಗಿದೆ ಎಂದು ಹೇಳುತ್ತಾರೆ.

ಜಾನಪದ ಕಥನ ಗೀತೆಗಳಿಂದಲೇ ಸ್ಫೂರ್ತಿ ಪಡೆದಿರುವ ಶಿಷ್ಟ ಕಥನಗೀತೆಗಳ ಇತಿಹಾಸವು, ಇಂಗ್ಲಿಷ್‌ನಲ್ಲಿ ಜೆಫ್ರಿ ಛಾಸರ್‌ನ ಮೂಲಕ ಪ್ರವರ್ಧಮಾನಕ್ಕೆ ಬಂದಿದೆ. ತನ್ನ ಕ್ಯಾಂಟರ್ ಬರಿ ಟೇಲ್ಸ್ ಕಥೆಗಳ ಮೂಲಕ ಇಂಗ್ಲಿಷ್ ಸಾಹಿತ್ಯ ಚರಿತ್ರೆಗೆ ಮೇಲ್ಪಂಕ್ತಿಯೊಂದನ್ನು ಹಾಕಿದಲ್ಲದೆ, ಇನ್ನೂ ಪ್ರಬುದ್ಧ ಸ್ಥಿತಿಯಲ್ಲಿರದ ಇಂಗ್ಲಿಷ್ ಭಾಷೆಗೆ ಸಾಹಿತ್ಯಕ ಶಕ್ತಿ ನೀಡಿ ಕಥನ ಕವನ ಪ್ರಕಾರಕ್ಕೆ ಮಾದರಿ ಹಾಕಿಕೊಟ್ಟ. ಛಾಸರ್‌ನ ಆನಂತರದಲ್ಲಿ ಸ್ಪೆನ್ಸರ್, ಮಿಲ್ಟನ್,ವರ್ಡ್ಸ್‌ವರ್ತ್, ಸ್ಕಾಟ್, ಗಿಬ್ಬನ್, ಕೋಲ್‌ರಿಜ್, ಕೀಟ್ಸ್, ಬ್ರೌನಿಂಗ್ ಆರ್ನಾಲ್ಡ್, ಟೆನಿಸನ್, ಲೀ ಹಾಂಟ್, ಕ್ಲೋ, ವಿಲಿಯಂ ಮಾರಿಷಸ್ ಮುಂತಾದವರಿಂದ ಇಂಗ್ಲಿಷ್ ಕಥನ ಕವನ ಪರಂಪರೆಯು ವಿಶಿಷ್ಟ ಕಾವ್ಯ ಪ್ರಕಾರವಾಗಿ ಬೆಳೆಯಲು ಸಾಧ್ಯವಾಗಿದೆ. ಆಧುನಿಕ ಕಾಲದಲ್ಲೂ ಈ ಪರಂಪರೆಯನ್ನು ಹಲವು ಶ್ರೇಷ್ಠ ಕವಿಗಳು ಮುಂದುವರಿಸಿದ್ದಾರೆ.

ಇದೇ ರೀತಿ ಜಗತ್ತಿನ ಇತರ ಭಾಷೆಗಳ ಕಥನ ಕವನಗಳ ಸಮಗ್ರ ಪರಿಚಯ ಕನ್ನಡಕ್ಕೆ ಇನ್ನು ದೊರಕಬೇಕಾಗಿದೆ. ಆದರೆ, ಇಪ್ಪತ್ತನೇ ಶತಮಾನದ ಹೊತ್ತಿಗೆ ಕನ್ನಡ ಕಥನ ಕವನ ಪರಂಪರೆ ಮತ್ತು ಎಕ್ಕುಂಡಿಯವರ ಸಾಧನೆಗಳಿಗೆ ಇತರ ಭಾಷೆಗಳಿಗಿಂತ ಆಂಗ್ಲ ಕಥನಕವನಗಳ ಪ್ರೇರಣೆ, ಪ್ರಭಾವಗಳು ನೇರವಾಗಿರುವುದರಿಂದ ಈ ಅವಲೋಕನವು ಗ್ರೀಕ್ ಮತ್ತು ಆಂಗ್ಲ ಸಾಹಿತ್ಯಕ್ಕಷ್ಟೆ ಸೀಮಿತಗೊಂಡಿದೆ ಎಂದು ಹೇಳಲೇಬೇಕಾಗಿದೆ.

ಹೊಸಗನ್ನಡ ಸಾಹಿತ್ಯ ಪರಂಪರೆಗೆ ಪಾಶ್ಚಾತ್ಯ ಸಾಹಿತ್ಯದಿಂದ ಸಿಕ್ಕಿರುವ ಪ್ರೇರಣೆ, ಪ್ರಭಾವಗಳು ನಾನಾ ರೂಪದಲ್ಲಿವೆ. ನವೋದಯ ಕಾಲದ ಈ ಪ್ರಭಾವದ ಪರಿಧಿಯಲ್ಲಿ ಕನ್ನಡ

ಕಥನ ಕವನಗಳೂ ಸೇರಿಕೊಳ್ಳುತ್ತವೆ. ನವೋದಯ ಕಾಲದ ಗೋವಿಂದ ಪೈ, ಪಂಜೆ ಮಂಗೇಶರಾಯರು, ಬಿ.ಎಂ.ಶ್ರೀ, ಮಾಸ್ತಿ, ಕುವೆಂಪು, ಪು.ತಿನ., ಡಿ.ವಿ.ಜಿ., ಬೇಂದ್ರೆ, ಕೆ.ನರಸಿಂಹಶಾಸ್ತ್ರಿ, ಸೇಡಿಯಾಪು ಕೃಷ್ಣಭಟ್ಟರು, ಗೋಕಾಕ್, ಎಸ್.ವಿ.ಪರಮೇಶ್ವರಭಟ್ಟರು, ರಾಜರತ್ನಂ, ಮುಂತಾದ ಹಿರಿಯ ಕವಿಗಳೆಲ್ಲಾ ಇಂಗ್ಲಿಷ್ ಭಾಷೆಯ ಮೂಲಕ ಒದಗಿದ ಕಥನ ಕವನಗಳ ಮಾದರಿಯಲ್ಲಿ ಕನ್ನಡದಲ್ಲೂ ಅಂತಹ ಕೃತಿಗಳನ್ನು ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅವುಗಳಲ್ಲಿ ಬಹುಪಾಲು ಕಥನ ಕವನಗಳ ಅನುವಾದ ಇಲ್ಲವೇ ರೂಪಾಂತರಗಳಾಗಿದ್ದರೂ ಹೊಸಗನ್ನಡದ ಸಂಧರ್ಭದಲ್ಲಿ ಕಥನ ಕಾವ್ಯ ಪ್ರಕಾರಕ್ಕೆ ಉತ್ತಮ ನೆಲೆಗಟ್ಟು ಒದಗಿಸಿವೆ ಎಂದು ಹೇಳಲೇಬೇಕಾಗುತ್ತದೆ.

ನವೋದಯ ಕಾಲದಿಂದ ನವ್ಯೋತ್ತರ ಕಾಲದವರೆಗೆ ಅನೇಕ ಕನ್ನಡಕವಿಗಳು ಕಥನ ಕವನಗಳ ರಚನೆಯಲ್ಲಿ ಪ್ರಯೋಗ ನಡೆಸಿರುವುದುಂಟು. ಆ ಯಾರಿಗೂ ಪೂರ್ಣ ಪ್ರಮಾಣದಲ್ಲಿ ಕಥನ ಕವನಗಳನ್ನು ರಚಿಸುವುದು ಸಾಧ್ಯವಾಗಿಲ್ಲ ಎಂಬುದೊಂದು ವಾಸ್ತವ. ಆದರೆ, ನವೋದಯದ ಉತ್ಕರ್ಷ ಕಾಲದಲ್ಲಿ ಬರೆಯಲು ಪ್ರಾರಂಭಿಸಿ " ಬ್ರಿಟಿಷ್ ರಮ್ಯ ಪಂಥದ ಕೀಟ್ಸ್, ಟೆನಿಸನ್, ಸ್ವಿನ್‌ಬರ್ನ್ ಮುಂತಾದವರ ಕಾವ್ಯ ಪರಂಪರೆಯನ್ನು ಮಾದರಿಯಾಗಿಟ್ಟುಕೊಂಡು ಕನ್ನಡದಲ್ಲಿ ಎಕ್ಕುಂಡಿಯವರು ಪಡೆದಿರುವ ಯಶಸ್ಸು ಹಾಗೂ ಸಾಫಲ್ಯ ಅಪಾರ." *

ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಕಥನ ಕವಿ ಯೆಂದೇ ಎಕ್ಕುಂಡಿಯವರು ಪ್ರಸಿದ್ಧರು. ಕಥನ ಕವಿಯಾಗಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಅವರು ತಂದಿರುವ ಸಾಂಸ್ಕೃತಿಕ ಸೊಗಸು, ಸತ್ವಗಳನ್ನು ಸ್ಪಷ್ಟಪಡಿಸಿಕೊಳ್ಳುವುದು – ಈ ನಿಬಂಧದ ಉದ್ದೇಶಕ್ಕೆ ಪೂರಕವಾಗಿರುವುದರಿಂದ ಜಾಗತಿಕ ಕಥನ ಕವಿಗಳ ಸಾಧನೆಗಳ, ಪರಂಪರೆಗಳ ಸ್ಥೂಲ ಅವಲೋಕನವನ್ನ ಇಲ್ಲಿ ಮಾಡಬೇಕಾಯಿತು.

****

---

* ಸು.ರಂ.ಎಕ್ಕುಂಡಿಯವರ ಕಾವ್ಯ : ನಿಬ್ಬೆರಗು ನಲಿವುಗಳ ಪುಳಕ – ಜಿ.ಎನ್. ಮೋಹನ್ – ಲೇಖನ

ಅಧ್ಯಾಯ-ನಾಲ್ಕು

ಕಥನ ಕವನಗಳ ಕನ್ನಡ ಪರಂಪರೆ

ಅ) ಜನಪದ ಕಥನ ಪರಂಪರೆ

ಆ) ಶಾಸನ ಕಥನ ಪರಂಪರೆ

ಇ) ಅಭಿಜಾತ ಕಥನ ಪರಂಪರೆ

ಈ) ಆಧುನಿಕ ಕಥನ ಪರಂಪರೆ

ಕಥನ ಕವನಗಳ ಕನ್ನಡ ಪರಂಪರೆ

ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯವು ಹಲವು ಪ್ರಕಾರಗಳಲ್ಲಿ ಸಮೃದ್ಧಿಯನ್ನು ಕಂಡಿದೆ. ಆ ಸಮೃದ್ಧಿಯ ಪ್ರಮಾಣ ಎಷ್ಟು? ಯಾವುದರಲ್ಲಿದೆ? ಸಾಧಿಸಿದವರ್‍ಯಾರು? ಮುಂತಾದ ಹಲವು ಪ್ರಶ್ನೆಗಳಿಗೆ ಹೊಸ ಹೊಸ ದೃಷ್ಟಿಕೋನಗಳ ಸಂಶೋಧನೆಗಳಿಂದ ಮಾತ್ರ ಉತ್ತರ ಸಿಕ್ಕೀತು. ಆ ಸಮೃದ್ಧಿಯಲ್ಲಿ ಕಥನ ಕವನಗಳ ಪಾಲೂ ಇದೆ ಎಂಬ ಅಂಶವನ್ನು ಹೇಳಲೇಬೇಕಾಗುತ್ತದೆ.

"ಜೀವನೋಪಾಯಕ್ಕಾಗಿ ಕಥೆಗಳನ್ನು ರಾಗವಾಗಿ ಹಾಡಿಕೊಂಡು ಜೊತೆಯಲ್ಲಿ ವಾದ್ಯ ನುಡಿಸಿಕೊಂಡು ಊರೂರು ತಿರುಗುತ್ತಿದ್ದ ವೃತ್ತಿಗಾಯಕರು ಕನ್ನಡ ಕಥನ ಗೀತೆಗಳ ನಿರ್ಮಾಪಕರು. ಇದು ಜನರಂಜಕವಾದ ಯಾವುದಾದರೂ ಒಂದು ಕಥೆಯನ್ನು ಮನಮುಟ್ಟುವಂತೆ ಹೇಳುವ ಸಣ್ಣ ಸಣ್ಣ ಪದ್ಯಗಳಿಂದ ಕೂಡಿದ ಲಘುಕಾವ್ಯ. ಈ ಮಾದರಿಯ ಜನಪದ ಗೀತೆಗಳು ಕಾಲ ಮತ್ತು ದೇಶಗಳಿಗನುಗುಣವಾಗಿ ಗಮನಾರ್ಹ ಬದಲಾವಣೆ ಹೊಂದುತ್ತವಾದರೂ ಕೆಲವು ಲಕ್ಷಣಗಳು ಮಾತ್ರ ಸಂಪೂರ್ಣವಾಗಿ ಸ್ಥಿರವಾಗಿರುತ್ತವೆ. ಇದು ನಿರೂಪಣಾತ್ಮಕವಾದದ್ದು. ಹಾಡಲು ಬರುವಂಥದ್ದು, ತನ್ನ ಒಳವಿವರಗಳಲ್ಲಿ ಶೈಲಿಯಲ್ಲಿ ಜಾನಪದಕ್ಕೆ ಸೇರುವಂಥದ್ದು ಯಾವುದಾದರೊಂದು ಘಟನೆಯನ್ನು ಕೇಂದ್ರವಾಗಿ ಹೊಂದಿರುತ್ತದೆ. ವೈಯಕ್ತಿಕವಾದದ್ದಲ್ಲ. ಸಂಭಾಷಣೆ ಮತ್ತು ಘಟನೆಗಳಿಂದ ಕೂಡಿದ ಅದರೊಳಗಿನ ಕ್ರಿಯೆ ತನ್ನಷ್ಟಕ್ಕೇ ತಾನೇ ಅಂತ್ಯದ ಕಡೆಗೆ ರಭಸವಾಗಿ ಧಾವಿಸುತ್ತಿರುತ್ತದೆ. ಅದು ಸುಶಿಕ್ಷಿತ ಮತ್ತು ಸಾಹಿತ್ಯಕ ಪ್ರಜ್ಞೆಯುಳ್ಳ ಜನರಿಂದಲೇ ರಚಿತವಾಗಿದ್ದು ಕಾಲಾನುಕಾಲದಿಂದ ನಮ್ಮ ಸಾಂಸ್ಕೃತಿಕ ಉತ್ತರಾಧಿಕಾರಿಯಾಗಿ ಚಿರಸ್ಥಾಯಿಯಾಗಿ ಉಳಿದುಕೊಂಡು ಬಂದಿದೆ". * ಈ ವಿವರಣೆಯು ಕಥನ ಕಾವ್ಯ ಪರಂಪರೆಗೆ ನಿಜವಾದ ಮೂಲ ಯಾವುದು ಎಂಬ ವಾಸ್ತವವಾಂಶವನ್ನು ತಿಳಿಸಿಕೊಡುತ್ತಿದೆ ಹಾಗೂ ಎಲ್ಲಾ ಪ್ರಸಿದ್ಧ ಭಾಷೆಗಳ ಕಥನ ಪರಂಪರೆಯಲ್ಲಿರುವ ಸಾರ್ವತ್ರಿಕ ಗುಣಲಕ್ಷಣಗಳ ಸ್ಥಿರ ಸ್ವಭಾವದ ಚಿತ್ರಣ ನೀಡಿದೆ.

ಈ ಹಿನ್ನೆಲೆಯಲ್ಲಿ ಕನ್ನಡ ಕಥನ ಕಾವ್ಯ ಪರಂಪರೆಯು ವಿಕಾಸಗೊಂಡಿರುವ ಸ್ಥೂಲ ಅವಲೋಕನ ಮಾಡುವುದು ಅವಶ್ಯಕ. ಏಕೆಂದರೆ ಸು.ರಂ.ಎಕ್ಕುಂಡಿಯವರು ಕಥನ ಕವಿಯಾಗಿ ರೂಪುಗೊಳ್ಳಲು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಹೇಗೆ ಪ್ರೇರಣೆಗೊಳಗಾಗಿರಬಹುದು ಅಥವಾ

---

* ರಸಸಿದ್ಧಿ– ಡಾ॥ ಭೈರಮಂಗಲ ರಾಮೇಗೌಡ– ಪುಟ 131

ಇಲ್ಲ ಎಂಬ ಅಂಶವನ್ನು ಅವರ ಕಥನ ಕವಿತೆಗಳ ವಿಶ್ಲೇಷಣೆಯ ಪೂರ್ವದಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಕನ್ನಡ ಕಥನ ಕವನ ಪರಂಪರೆಯ ವಿಕಾಸದ ವಿವಿಧ ಹಂತಗಳಾಗಿ ಜನಪದ, ಶಾಸನ, ಅಭಿಜಾತ ಮತ್ತು ಆಧುನಿಕ ಎಂಬ ನಾಲ್ಕು ನೆಲೆಗಳ ಚೌಕಟ್ಟನ್ನು ನಿರ್ಮಿಸಿಕೊಳ್ಳಲಾಗಿದೆ.

ಅ) ಜನಪದ ಕಥನ ಪರಂಪರೆ:

ಶಿಷ್ಟ ಪರಂಪರೆಯ ಎಲ್ಲಾ ಕಲೆಗಳಿಗೂ ಮೂಲ ಜಾನಪದ. 'ಜನವಾಣಿ ಬೇರು ಕವಿವಾಣಿ ಹೂವು' ಎಂಬ ಬೀ.ಎಂ.ಶ್ರೀಯವರ ಮಾತು ಜನಪದ ಪರಂಪರೆಯ ಪ್ರಾಧಾನ್ಯತೆಯನ್ನು ಖಚಿತ ಪಡಿಸಿದೆ. ಇದೇ ಅರ್ಥದಲ್ಲಿ ಕನ್ನಡ ಕಥನ ಕಾವ್ಯ ಪ್ರಕಾರವು ಶಿಷ್ಟ ಸಾಹಿತ್ಯದ ಪ್ರೇರಣೆಯನ್ನಾಗಲೀ ಅಥವಾ ಅನ್ಯಭಾಷೆಗಳ ಸಾಹಿತ್ಯ ಪ್ರೇರಣೆಗಳಿಂದಾಗಲೀ ಹುಟ್ಟಿ ಬೆಳೆದುದಲ್ಲ. ಸಾವಿರಾರು ವರ್ಷಗಳ ಇತಿಹಾಸವುಳ್ಳ ಕನ್ನಡ ಭಾಷೆಯಷ್ಟೇ ಪ್ರಾಚೀನತೆ, ಅದರ ಕಥನ ಕಾವ್ಯ ಪರಂಪರೆಗೂ ಇರಲೇಬೇಕು. ಏಕೆಂದರೆ ಲಿಖಿತ ಸಾಹಿತ್ಯಕ್ಕೆ ಜನಪದವೇ ಮೂಲ.

ಶಿಷ್ಟ ಪರಂಪರೆಗಿಂತ ಮೌಖಿಕ ಪರಂಪರೆ ಅತ್ಯಂತ ಪ್ರಾಚೀನ. ಅನಕ್ಷರಸ್ಥ ಬುಡಕಟ್ಟು ವ್ಯವಸ್ಥೆ ಅಥವಾ ಕುಲ ಪದ್ಧತಿಗಳು ಎಲ್ಲಾ ಸಮಾಜಗಳ ಅತ್ಯಂತ ಪ್ರಾಚಿನ ರೂಪಗಳಾಗಿವೆ. ಅಂತಹ ಸಮಾಜದ ಜನರು ತಮ್ಮ ಬಿಡುವಿನ ವೇಳೆಯನ್ನು ಮನರಂಜನೆಗಾಗಿ ವಿನಿಯೋಗಿಸಿರುವುದು. ಮಾನವ ಶಾಸ್ತ್ರ ಅಧ್ಯಯನಗಳ ಪ್ರಕಾರ ದೃಢಪಟ್ಟಿದೆ. ಅದೇ ರೀತಿ ಸ್ಥಿರ ಸಮಾಜದ ದುಡಿಮೆಯ ಅನುಭವಗಳು, ಸಾಹಸಗಳು, ಕಲ್ಪನೆಗಳು ಕೂಡ ಹಾಡಾಗಿ, ಕಲೆಗಳಾಗಿ ಮೈದಾಳಿವೆ. ಇಂತಹ ಸನ್ನಿವೇಶದಲ್ಲಿ ಸಹಜವಾಗಿ ತಮ್ಮ ಅನುಭವಗಳನ್ನು, ಕಲ್ಪನೆಗಳನ್ನು 'ಕಥನ'ಗಳನ್ನಾಗಿ ರೂಪಿಸಿದ್ದಾರೆ.

ನಮ್ಮ ದೇಶದಲ್ಲಿ ರಾಮಾಯಣ, ಮಹಾಭಾರತದಂತಹ ರಾಷ್ಟ್ರೀಯ ಮಹಾಕಾವ್ಯಗಳ ಹುಟ್ಟಿಗೆ ಜನಪದ ಕಥನ ಗೀತೆಗಳೇ ಕಾರಣ ಎಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಹೀಗೆ ಜನಜೀವನದ ಉತ್ಕೃಷ್ಟ ಅನುಭವಗಳು ಕಥೆಯಾಗಿ ಮಾರ್ಪಟ್ಟು, ಕಲೆಗಳ ವಿವಿಧ ಪ್ರಕಾರಗಳಿಗೆ ದಾರಿ ಮಾಡಿಕೊಟ್ಟಿವೆ. ಆದರೆ ಪ್ರತಿಯೊಂದು ಕಲಾ ಪ್ರಭೇದವೂ ಪ್ರಾದೇಶಿಕ ಅಥವಾ ಭಾಷಿಕ ವೈಶಿಷ್ಟ್ಯಗಳನ್ನು ಹೊತ್ತುಕೊಂಡು ವಿಭಿನ್ನತೆಗೆ ಕಾರಣವಾಗಿದ್ದರೂ ಗುಣಲಕ್ಷಣಗಳಲ್ಲಿ ಆಶಯಗಳಲ್ಲಿ 'ಒಂದುತನ'ವನ್ನು ಪ್ರದರ್ಶಿಸಿರುವುದು ಕುತೂಹಲಕಾರಿ ಅಂಶ. ಕನ್ನಡ ಜಾನಪದ ಕಥನ ಪರಂಪರೆಯು ಸಹ ಈ ಅಭಿಪ್ರಾಯಗಳಿಗೆ ಹೊರತಾಗಿ ಉಳಿದಿಲ್ಲ.

ಕನ್ನಡ ಮೌಖಿಕ ಪರಂಪರೆಯು ಸಾವಿರಾರು ವರ್ಷಗಳ ಕಾಲ ನಿರಂತರವಾಗಿ ಸಾಗಿ ಬಂದಿದ್ದರೂ ಬೇರೆ ಬೇರೆ ಕಾಲಘಟ್ಟಗಳಲ್ಲಿ ಅದು ಯಾವ ಯಾವ ಸ್ಥಿತಿಯಲ್ಲಿದ್ದಿರಬಹುದು ಎಂದು

ನಿರ್ದಿಷ್ಟವಾಗಿ ಖಚಿತ ಪಡಿಸಲು ದಾಖಲೆಗಳಿಲ್ಲ. ತಲೆಮಾರಿನಿಂದ ತಲೆಮಾರಿಗೆ, ಸ್ಥಳದಿಂದ ಸ್ಥಳಕ್ಕೆ, ಜನರ ಬಾಯಲ್ಲಿ ಮುಂದುವರೆದುಕೊಂಡು ಬಂದಿರುವ, ಆ ರೀತಿ ಮುಂದುವರೆದುಕೊಂಡು ಬರುವ ಅನಿವಾರ್ಯತೆಯಲ್ಲಿ ಬದಲಾವಣೆಗೆ ಒಳಪಟ್ಟಿರುವ ಕನ್ನಡ ಮೌಖಿಕ ಪರಂಪರೆಯ ಸಂಗ್ರಹ, ಪ್ರಕಟಣೆ, ವಿಶ್ಲೇಷಣೆಗಳು ೨೦ನೇ ಶತಮಾನದಲ್ಲಷ್ಟೇ ಸಾಧ್ಯವಾಗಿರುವಂತಹ ಕಾರ್ಯಗಳು. ಇದರಿಂದಾಗಿ ಜಾನಪದ ಸಾಹಿತ್ಯವು ಸಂಗ್ರಹಣೆಯ ಹೊತ್ತಿಗೆ (ಆಧುನಿಕ ಕಾಲ) ಅವುಗಳು ಪಡೆದಿದ್ದ ರೂಪ-ಸ್ಥಿತಿಗಳನ್ನಷ್ಟೇ ಆಧರಿಸಿ ಕನ್ನಡ ಜಾನಪದ ಕಥನ ಕವನಗಳ ಪರಂಪರೆಯನ್ನು ನಿರ್ಧರಿಸಬೇಕಾದ ಅನಿವಾರ್ಯತೆಯುಂಟಾಗಿದೆ. ಇಂತಹ ಸಂಗ್ರಹಿತ ರೂಪದಲ್ಲಿ ಮತ್ತು ಜನ ಸಮುದಾಯಗಳ ಬಾಯಲ್ಲಿ ನೂರಾರು ಸಂಖ್ಯೆಯ ಕಥನ ಗೀತೆಗಳು ಕನ್ನಡ ನಾಡಿನ ತುಂಬು ಜೀವಂತವಾಗಿವೆ. ಈ ನಿಬಂಧದ ಪುಟ ಮಿತಿಯ ಕಾರಣಕ್ಕಾಗಿ ಅಂತಹ ಕಥನ ಕವನಗಳನ್ನು ಹೆಸರಿಸಲು ಮಾತ್ರ ಸಾಧ್ಯವಾಗುತ್ತದೆ.

ಜನಪದ ಕಥನ ಗೀತೆಗಳ ಸೃಷ್ಟಿಗೆ ಪುರಾಣಗಳು, ರಾಮಾಯಣ, ಮಹಾಭಾರತದ ರಸವತ್ತಾದ ಪ್ರಸಂಗಗಳು ವಸ್ತು ಸಾಮಗ್ರಿಗಳನ್ನು ಒದಗಿಸಿವೆ. ಉದಾ: ಅರ್ಜುನ, ದ್ರೌಪದಿ, ಅಭಿಮನ್ಯು, ಕುಂತಿ, ಗಂಗೆ – ಗೌರಿ, ಮೈದಾಳ ರಾಮ. ಇವರಿಗೆ ಸಂಬಂಧಿಸಿದ ಕಥಾನಕಗಳನ್ನು ಉಲ್ಲೇಖಿಸಬಹುದು. ಜನಪದ ದೈವಗಳಾದ ಮಂಟೇಸ್ವಾಮಿ, ಮಲೈಮಹದೇಶ್ವರ, ಬಿಳಿಗಿರಿರಂಗ, ಮೈಲಾರ ಲಿಂಗ, ನಂಜುಂಡೇಶ್ವರ, ಬೆಟ್ಟದ ಚಾಮುಂಡಿ, ಜುಂಜಪ್ಪ ಮುಂತಾದವರ ವಿವಿಧ ಕಥಾ ಪ್ರಸಂಗಗಳು ಕಥನ ಗೀತೆಗಳ ನಿರ್ಮಾಣಕ್ಕೆ ಮೂಲ ಆಕರಗಳಾಗಿವೆ. ಹೀಗೆ ಕನ್ನಡ ನಾಡಿನ ಬೇರೆ ಬೇರೆ ಸ್ಥಳಗಳಲ್ಲಿ ಸ್ಥಳೀಯ ಜನಪದ ದೇವರುಗಳ ಕಥನ ಗೀತೆಗಳು ಚಾಲ್ತಿಯಲಿದ್ದು ಅವುಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಈ ಕಥನ ಗೀತೆಗಳ ಸಾಲಿನಲ್ಲಿ ಕಳಸವಿಟ್ಟಂತೆ ಕಾಣುವ 'ಗೋವಿನ ಹಾಡು' ಅಥವಾ 'ಪುಣ್ಯ ಕೋಟಿ', 'ಕೆರೆಗೆ ಹಾರ', 'ದೊಂಬರ ಚೆನ್ನಿ', 'ಲಕ್ಕಣ್ಣ ಈರಣ್ಣ', 'ಸಾಕ್ಷಿಕಲ್ಲು' 'ನುಚ್ಚಾಯ್ತು ನೀರ ಹೊಳೆಯಾಗೆ' ಮುಂತಾದವುಗಳು ಕನ್ನಡಕ್ಕೆ ವಿಶಿಷ್ಟವಾದ ನೀತಿ, ಆದರ್ಶಗಳನ್ನು ಎತ್ತಿ ಹಿಡಿಯುವ ಮಹತ್ವದ ಕಥನ ಗೀತೆಗಳಾಗಿವೆ.

ಜನಪದ ಕಥನ ಗೀತೆಗಳಲ್ಲಿ ಪುರಾಣ ಮತ್ತು ಜನಪದದ ದೈವಿಕ ಪುರುಷರುಗಳಷ್ಟೇ ಅಲ್ಲದೆ ಇತಿಹಾಸ ಪ್ರಸಿದ್ಧ ವೀರ ಪುರುಷರ ಸಾಹಸಗಳು, ಬಲಿದಾನಗಳು ಕೂಡ ಲಾವಣಿ ರೂಪಗಳನ್ನು ತಾಳಿರುವುದು ಕಂಡು ಬರುತ್ತದೆ. ಅವುಗಳಲ್ಲಿ ಕುಮಾರರಾಮ, ಪಿರಿಯಾಪಟ್ಟಣದ ಕಾಳಗ, ಕರಿಭಂಟನ ಕಾಳಗ, ಮದಕರಿನಾಯಕ, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿರಾಯಣ್ಣ,

ಕೆಂಪೇಗೌಡ, ಟಿಪ್ಪುಸುಲ್ತಾನ್, ವೀರದಿಮ್ಮವ್ವ ಮುಂತಾದವರನ್ನು ಕುರಿತ ಲಾವಣಿಗಳು ಗಮನಾರ್ಹ.

ಇಂತಹ ಎಷ್ಟೋ ಕಥನ ಗೀತೆಗಳನ್ನು ನಮ್ಮ ಜಾನಪದ ವಿದ್ವಾಂಸರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಅವರಲ್ಲಿ ಬಿ.ಎಸ್.ಗದ್ದಿಗಿಮಠ, ಬೆಟಗೇರಿ ಕೃಷ್ಣಶರ್ಮ, ಕ.ರಾ.ಕೃ., ಜೀ.ಶಂ.ಪ., ಹೆಚ್.ಎಲ್.ನಾಗೇಗೌಡ, ಪಿ.ಕೆ.ರಾಜಶೇಖರ್, ಮಹದೇವನಾಯ್ಕ, ಡಿ.ಲಿಂಗಯ್ಯ, ಕ್ಯಾತನಹಳ್ಳಿ ರಾಮಣ್ಣ, ಸುಶೀಲ ಪಟ್ಟಣ ಶೆಟ್ಟಿ, ಸೋಮಶೇಖರ ಇಮ್ರಾಪುರ, ಬಿ.ನಂ.ಚಂದ್ರಯ್ಯ, ಗೊ.ರು. ಚನ್ನಬಸಪ್ಪ, ಹಾ.ತಿ.ಕೃಷ್ಣೇಗೌಡ, ಚಂದ್ರು ಕಾಳೇನಹಳ್ಳಿ, ಬಿ.ಸಿದ್ದಗಂಗಯ್ಯ, ಅಂಬಳಿಕೆ ಹಿರಿಯಣ್ಣ, ಎಲ್.ಆರ್.ಹೆಗಡೆ, ಕೃಷ್ಣಮೂರ್ತಿ ಹನೂರು ಮುಂತಾದ ಪ್ರಸಿದ್ಧ ವಿದ್ವಾಂಸರನ್ನು ಇಲ್ಲಿ ಹೆಸರಿಸಬಹುದಾಗಿದೆ.

(ಆ) ಶಾಸನ ಕಥನ ಪರಂಪರೆ

"ಕನ್ನಡ ಸಾಹಿತ್ಯದ ಪ್ರಾಚೀನ ರೂಪ ಕಥನ ಕಾವ್ಯ. ಇದರ ಬೀಜಾಂಶವನ್ನು ಕನ್ನಡ ನಾಡಿನ ಅಸಂಖ್ಯಾತ ಶಾಸನಗಳ ಸ್ತುತಿ ಪದ್ಯಗಳಲ್ಲಿ ಗುರುತಿಸಬಹುದು" * ಎಂದು ಹೇಳಲಾಗಿದೆ. ಈ ಅಭಿಪ್ರಾಯವು ಮೌಖಿಕ ಪರಂಪರೆಯ ಕಥನ ಗೀತೆಗಳ ಉಗಮಕ್ಕೆ ಸಂಬಂಧಿಸಿದಂತೆ ತದ್ವಿರುದ್ಧವಾದ ನಿಲುವನ್ನು ಹೊಂದಿರುತ್ತದೆ. ಏಕೆಂದರೆ ಲಿಖಿತ ಪರಂಪರೆಯ ಎಲ್ಲಾ ಅಭಿವ್ಯಕ್ತಿ ವಿಧಾನಗಳಿಗೂ ಜನಪದದಲ್ಲೇ ಸಾಕಷ್ಟು ಮಾದರಿಗಳಿವೆ. ಶಾಸನಗಳಲ್ಲಿ ಕಂಡುಬರುವ ಕಥನಗಳು ಜನಪದ ಕಥನ ಮಾರ್ಗಗಳನ್ನು ಅನುಸರಿಸಿ ಬೆಳೆದಿರಲೇಬೇಕು.

ಕನ್ನಡ ನಾಡಿನ ಸಾವಿರಾರು ಶಾಸನಗಳಲ್ಲಿ ರಾಜ-ರಾಣಿಯರ ಶೌರ್ಯ, ಸಾಹಸ, ತ್ಯಾಗ, ಬಲಿದಾನ, ಸತಿಸಹಗಮನ, ದಾನ, ಸೇವಾ ವೃತ್ತಿ ಈ ಮೊದಲಾದ ವಿಚಾರಗಳನ್ನು ವರ್ಣಿಸಲಾಗಿದೆ. ಈ ವರ್ಣನೆಗಳೆಲ್ಲವೂ ಕಥನಾ ಮಾರ್ಗದಲ್ಲಿದ್ದು ಕಥನ ಕವನಗಳ ಉತ್ತಮ ರಚನೆಗಳಾಗಿವೆ.

ಉದಾ:- ಬಾದಾಮಿ ಶಾಸನ, ಅಬಲೂರಿನ ಶಾಸನ.

(ಇ) ಅಭಿಜಾತ ಕಥನ ಪರಂಪರೆ

ಕನ್ನಡದ ಅಭಿಜಾತ ಕಾವ್ಯಗಳ ಕಥನ ಮಾರ್ಗವು ಮಹಾಕಾವ್ಯ ಮತ್ತು ಗದ್ಯ ರೂಪಗಳಲ್ಲಿ ಯಶಸ್ವಿಯಾಗಿ ಅಭಿವ್ಯಕ್ತಗೊಂಡಿದೆ. ಕನ್ನಡಕ್ಕೆ ವಿಶಿಷ್ಟವಾದ ಚಂಪೂ ಮಾರ್ಗವು ಗದ್ಯ ಪದ್ಯಗಳ ಸಮ್ಮಿಶ್ರವಾಗಿದ್ದು, ಕಥನ ಮಾರ್ಗದ ವೈಲಕ್ಷಣ್ಯವನ್ನು ಪ್ರತಿನಿಧಿಸುತ್ತದೆ. ಇದೊಂದು ಸಮನ್ವಯ

ಡಾ॥ ಎಚ್.ಎಸ್. ವೆಂಕಟೇಶ ಮೂರ್ತಿ - ಕನ್ನಡದಲ್ಲಿ ಕಥನ ಕವನಗಳು - ಪುಟ - ೧೩

ಕಥನ ಮಾರ್ಗ ಎಂದೇ ಹೇಳಬಹುದು. ಇವೆಲ್ಲವೂ ಶಿಷ್ಟ ಕವಿಗಳು ಅನುಸರಿಸಿದ ಪ್ರಾರಂಭಿಕ ಕಥನ ವಿಧಾನಗಳು. ಆದರೆ ಕಥನ ಕವಿತೆಗಿರುವ ಆಧುನಿಕ ಅರ್ಥದಲ್ಲಿ ಕನ್ನಡದ ಅಭಿಜಾತ ಕಾವ್ಯ ಪರಂಪರೆಯ ಮೊದಲ ಕಥನ ಗೀತೆಗಳೆಂದರೆ ಹರಿಹರನ ರಗಳೆಗಳು. ಅವುಗಳಲ್ಲಿ ಬಸವದೇವ ರಾಜ ರಗಳೆ, ಅಕ್ಕಮಹಾದೇವಿ ರಗಳೆ, ತಿರುನೀಲಕಂಠ ರಗಳೆ, ಗುಂಡಯ್ಯನ ರಗಳೆ ಮುಂತಾದವುಗಳನ್ನು ಹೆಸರಿಸಬಹುದು. ಮುಂದೆ ಹೆಳವನಕಟ್ಟೆ ಗಿರಿಯಮ್ಮನ "ಚಂದ್ರಹಾಸ ಸಾಂಗತ್ಯ" ಕನಕದಾಸರ "ರಾಮಧಾನ್ಯ ಚರಿತೆ", "ನಳಚರಿತೆ", ಲಕ್ಷ್ಮೀಶನ ಜೈಮಿನಿ ಭಾರತದ "ಉಪಕತೆಗಳು", ಸಂಚಿ ಹೊನ್ನಮ್ಮನ "ಹದಿಬದೆಯ ಧರ್ಮ", ದಾಸ ಪರಂಪರೆಯ ಪ್ರಾಣೇಶ ವಿಠಲರ "ಸೇತು ಸ್ವಯಂವರ", "ಗೋಪಿಕಾ ವಿಳಾಸ", "ಕಾಳಿಂಗ ಮಂಥನ", ಮುಂತಾದ ಮಧ್ಯಮ ಮತ್ತು ಕಿರುಗಾತ್ರದ ಕಥನ ಕಾವ್ಯಗಳು ಕಥನ ಗೀತೆ ಪರಂಪರೆಯನ್ನು ಬದಲಾದ ಮನೋಧರ್ಮಕ್ಕನು – ಗುಣವಾಗಿ ನಿರ್ವಹಿಸಿಕೊಂಡು ಬಂದಿರುವುದಕ್ಕೆ ಪ್ರಮುಖ ನಿದರ್ಶನಗಳಾಗಿವೆ.

(ಈ) ಆಧುನಿಕ ಕಥನ ಪರಂಪರೆ

ಕನ್ನಡ ಕಥನ ಪರಂಪರೆಯಲ್ಲೇ ಇದ್ದ ಕಥನ ಕಾವ್ಯ ಪ್ರಕಾರವು ಇಪ್ಪತ್ತನೇ ಶತಮಾನದ ಮೊದಲ ದಶಕದಲ್ಲಿ ಅನುವಾದದ ರೂಪದಲ್ಲಿ ಬಂದ ಇಂಗ್ಲಿಷ್ ಕಥನ ಕವನಗಳ ಪ್ರಭಾವದಿಂದ ಹೊಸ ಹೊಸ ದೃಷ್ಟಿಕೋನಗಳನ್ನ ಪಡೆಯಿತು.

ಭಾಷೆ, ವಸ್ತು, ಛಂದಸ್ಸಿನ ದೃಷ್ಟಿಯಿಂದ ನವೋದಯ ಪರಂಪರೆಯ ಮೊದಲ ತಲೆಮಾರಿನ ಪಂಜೆ ಮಂಗೇಶರಾಯರು, ಎಸ್.ಜಿ.ನರಸಿಂಹಚಾರ್, ಹಟ್ಟಿಯಂಗಡಿ ನಾರಾಯಣರಾವ್, ಅವರ ಕಥನ ಕವನಗಳು ಆಧುನಿಕ ಎನಿಸಿದರೂ ರೂಪದ ದೃಷ್ಟಿಯಿಂದ ನವೋದಯ ಪೂರ್ವದ ಅನೇಕ ಕಾವ್ಯ ಲಕ್ಷಣಗಳನ್ನು ಅನುಸರಿಸಿವೆ. ಆದರೂ ಬಿ.ಎಂ.ಶ್ರೀ. ನಂತರದ ಕನ್ನಡ ಕಥನ ಕವಿಗಳ ಸಾಧನೆಗೆ ಇವರ ಅನುವಾದ ರೂಪದ ಕಥನ ಗೀತೆಗಳು ಉತ್ತಮ ಮಾದರಿಗಳನ್ನು ಒದಗಿಸಿವೆ ಎಂದು ಹೇಳಲೇಬೇಕಾಗುತ್ತದೆ.

ಆಧುನಿಕ ಕನ್ನಡ ಸಾಹಿತ್ಯದ ರೂಪ – ಸ್ವರೂಪಗಳಿಗೆ ಭೂಮಿಕೆ ಒದಗಿಸಿದ 'ಶ್ರೀ'ಯವರ ಇಂಗ್ಲಿಷ್ ಗೀತೆಗಳು (೧೯೨೧) ಕೃತಿಯು, ಆಧುನಿಕ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಮಾದರಿಯಾದಂತೆ, ಆಧುನಿಕ ಕನ್ನಡ ಕಥನ ಕವನ ಪ್ರಕಾರದ ಬೆಳವಣಿಗೆಗೂ ಶ್ರೇಷ್ಠ ಮಾದರಿಗಳನ್ನು ಒದಗಿಸಿದೆ. ಈ ಸಂಗ್ರಹದ ಬ್ಲೇನ್ ಹೀಮ್ ಕದನ, ಕಾರಿ ಹೆಗ್ಗಡೆಯ ಮಗಳು, ಏಳು ಜನ ಸಹೋದರಿಯರು, ಕನಕಾಂಗಿ, ಈ ಮೊದಲಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಕಥಾ ಸಾಹಿತ್ಯದಲ್ಲಿ ಅಗ್ರಸ್ಥಾನವನ್ನು ಪಡೆದಿರುವ ಮಾಸ್ತಿಯವರು 'ಗೌಡರ ಮಲ್ಲಿ', 'ಮದಲಿಂಗನ ಕಣಿವೆ', 'ಮೂಕನ ಮಕ್ಕಳು', 'ರಾಮ ನವಮಿ', 'ಕುರುಬರ ಹಂಪಣ್ಣ', ಇಂತಹ ಕವನಗಳಲ್ಲದೇ, ಜೆಫ್ರಿ ಛಾಸರ್‌ನ ಕ್ಯಾಂಟರ್ ಬರಿ ಕಥೆಗಳ ಮಾದರಿಯಲ್ಲಿ 'ನವರಾತ್ರಿ' ಕೃತಿಯನ್ನು ರಚಿಸುವ ಮೂಲಕ ಶ್ರೀಯವರಿಂದ ಪ್ರಾರಂಭವಾದ ಕಥನ ಕಾವ್ಯ ಪರಂಪರೆಗೆ ಉತ್ತಮ ಭೂಮಿಕೆ ಒದಗಿಸಿದರು.

ಇದೇ ಸಂದರ್ಭದಲ್ಲಿ ಕಡೆಂಗೋಡ್ಲು ಶಂಕರಭಟ್ಟರ 'ಹೊನ್ನಿಯ ಮದುವೆ', 'ಮುರಲೀನಾದ', 'ಮಾದ್ರಿಯ ಚಿತೆ', 'ಹೆಣ್ಣು', 'ಭೂತಾಳ ಪಾಂಡ್ಯ' ಈ ಕಥನ ಕವಿತೆಗಳು ತಮ್ಮ ಅಪೂರ್ವವಾದ ಕಾವ್ಯ ಶಕ್ತಿಯಿಂದ, ಜೀವನದ ಅರ್ಥಗಳ ಶೋಧನೆಗಳಿಂದ ಗಮನಾರ್ಹವಾಗುತ್ತವೆ. ಹಾಗೆಯೇ ಸೇಡಿಯಾಪು ಕೃಷ್ಣ ಭಟ್ಟರ 'ಪುಣ್ಯ ಲಹರಿ', 'ಶ್ವ ಮೇಧ', 'ನಾಯಿ ಬಸದಿ', 'ಕೃಷ್ಣ ಕುಮಾರಿ', 'ತರುಣ ಧಮನಿ', ಕವಿತೆಗಳು ರಾಷ್ಟ್ರೀಯತೆಯ ಆಶಯಗಳಿಂದ ಗಮನ ಸೆಳೆಯುತ್ತವೆ.

ಪ್ರಖರವಾದ ಸಾಮಾಜಿಕ ದೃಷ್ಟಿಯುಳ್ಳ ಕಥನ ಗೀತೆಗಳನ್ನು ರಚಿಸುವಲ್ಲಿ ಕುವೆಂಪು ಅವರು ಯಶಸ್ವಿಯಾಗಿದ್ದಾರೆ. ಮಕ್ಕಳಿಗಾಗಿ ಬರೆದಿರುವ ಕಿಂದರಿ ಜೋಗಿ, ಕರಿಸಿದ್ದ, ಘಂಟಾ ಕರ್ಣ, ತಾನಾಜಿ, ರಕ್ತ ರಜನಿ, ಡೂಲಿ, ನಾಗಿ, ಪ್ರತಾಪ ಸಿಂಹ ಮುಂತಾದ ಸ್ವತಂತ್ರವಾದ, ಭಾವಾನುವಾದದ ಉತ್ತಮ ಕಥನ ಗೀತೆಗಳನ್ನು ರಚಿಸಿ ಸಾಹಿತ್ಯ ಕೃತಿಗಳ ವಸ್ತು ವಿಷಯಗಳಿಗೆ ಸಾಮಾಜಿಕ ವಾಸ್ತವಿಕತೆಯ ಸ್ಪರ್ಶ ನೀಡಿದ್ದಾರೆ.

ಗೋವಿಂದ ಪೈ ಅವರ ಕಥನ ಕವನಗಳು ಸಾಮಾಜಿಕ ದೃಷ್ಟಿ, ಕರುಣೆ, ಅಹಿಂಸೆ, ಮುಂತಾದ ಮೌಲ್ಯಗಳ ದೃಷ್ಟಿಯಿಂದ ಗಮನ ಸೆಳೆಯುತ್ತವೆ. ಅವರ ಗೋಲ್ಗೊಥಾ, ವೈಶಾಖಿ, ಮಾತಂಗಿ, ಶೂದ್ರರ್ಷಿ ಕವಷ, ವಾಸವದತ್ತೆ, ಹುಲ್ಲುಕಟಿಗ, ಹಳ್ಳಿಯ ಹುಡುಗಿ ಇಂತಹ ಕವಿತೆಗಳು ವಿಶಿಷ್ಟ ದೃಷ್ಟಿಕೋನಗಳಿಂದಾಗಿ, ಅವುಗಳು ಪ್ರತಿನಿಧಿಸುವ ಸಾಂಸ್ಕೃತಿಕ ಮೌಲ್ಯಗಳಿಂದಾಗಿ ಕನ್ನಡ ಕಥನ ಕವನ ಪರಂಪರೆಗೆ ಹಲವು ನೂತನ ವೈಶಿಷ್ಟ್ಯತೆಗಳನ್ನು ತಂದುಕೊಟ್ಟಿವೆ.

ನವೋದಯ ಪರಂಪರೆಯ ಪ್ರಮುಖ ಕವಿಯಾದ ಪು.ತಿ.ನ.ರವರ ಗಣೇಶ ದರ್ಶನ, ನನ್ನ ನಾಯಿ, ನಾಳೀಜಂಘ, ಕಣಿವೆಯ ಮುದುಕ, ಪತಿತಪಾವನ, ರಂಗವಲ್ಲಿ, ರಾಮಿಯ ಗಂಡು, ಮುಂತಾದ ಕಥನ ಕವನಗಳು ಆಧುನಿಕ ಕಾಲದ ಉದಾರವಾದಿ ದೃಷ್ಟಿದೋರಣೆಗಳನ್ನು ನಿರೂಪಿಸುತ್ತವೆ.

ಮೈಸೂರು ಮಲ್ಲಿಗೆಯ ಕವಿ ಕೆ.ಎಸ್.ನರವರು ಭಾವ ಪ್ರಧಾನವಾದ ಕೆರೆಯ ದಾರಿಯಲ್ಲಿ, ಮಾವನ ಮನೆಯಲ್ಲಿ, ಶಾನುಭೋಗರ ಮಗಳು, ಬಳೆಗಾರನ ಹಾಡು, ಕಾಮನ ಕಥೆ ಇತ್ಯಾದಿ

ಕಥನ ಕವಿತೆಗಳಲ್ಲಿ ಕಥನ ಗೀತೆಗಳ ಗೇಯಗುಣಕ್ಕಿರುವ ಸಾಧ್ಯತೆಗಳನ್ನು ತೋರಿಸಿಕೊಟ್ಟಿದ್ದಾರೆ. ತಮ್ಮ ಭಾಷಾ ಪ್ರಯೋಗದಿಂದ ವಿಶಿಷ್ಟವೆನಿಸಿರುವ ಜಿ.ಪಿ. ರಾಜರತ್ನಂ ಅಲ್ಲಾನ ಕರುಣೆ, ತಾರೆ, ಮುತ್ತೈದಿ ಸಾವು, ದೇವಭೂಮಿ ಯಾಮತೋ ಕವಿತೆಗಳ ಮೂಲಕ ಗಮನ ಸೆಳೆಯುತ್ತಾರೆ.

ಕೌಟುಂಬಿಕ ನೋವು-ನಲಿವುಗಳ ದಟ್ಟ ಚಿತ್ರಣ ನೀಡಿರುವ ಬೇಂದ್ರೆಯವರ 'ಸಖಿ ಗೀತ'ವು, ಆತ್ಮ ಕಥನದ ಅತ್ಯುತ್ತಮ ಮಾದರಿಯಾಗಿದೆ. ಅವರ ಮೂರ್ತಿ, ಪುಟ್ಟ ವಿಧವೆ, ಕಥೆಯಾದಳು ಹುಡುಗಿ, ದುರ್ವಾಸ ಮುಂತಾದ ಕಥನ ಗೀತೆಗಳು ಇಲ್ಲಿ ಉಲ್ಲೇಖಾರ್ಹ.

ಆಧುನಿಕ ಕನ್ನಡ ಕಥನ ಕವನಗಳ ರಚನೆಯಲ್ಲಿ ಈ ಮೊದಲು ಹೆಸರಿಸಿರುವ ಕವಿಗಳಲ್ಲದೆ, ರಂ.ಶ್ರೀ.ಮುಗಳಿ, ಆನಂದಕಂದ, ವೀ.ಸಿ.ಗೋಕಾಕ್, ಎಸ್. ಅನಂತನಾರಾಯಣ, ಎಸ್.ವಿ.ಪರಮೇಶ್ವರ ಭಟ್ಟರು, ಜಿ.ವರದರಾಜ್, ಡಿ.ಎಸ್.ಕರ್ಕಿ, ರಾಘವ ಈ ಮೊದಲಾದ ಹಿರಿಯ ವಿದ್ವಾಂಸ - ಕವಿಗಳು ತಮ್ಮ ಕಥನ ಗೀತೆಗಳ ಮೂಲಕ ಕನ್ನಡಕ್ಕೆ ವಿಶಿಷ್ಟವೆನಿಸುವ ಅನುಭವಗಳನ್ನು ನಿರೂಪಿಸುವುದರಲ್ಲಿ ಯಶಸ್ವಿಯಾಗಿದ್ದಾರೆ.

ನವ್ಯ ಕಾಲದ ಚಂದ್ರಶೇಖರ ಕಂಬಾರರ 'ಹೇಳತೇನ ಕೇಳ', 'ಬುಗುರಿಸಿದ್ದ', ಸುಮತೀಂದ್ರ ನಾಡಿಗರ 'ಅಬ್ದುಲ್ ಹಮೀದ್', ಎ.ಕೆ. ರಾಮಾನುಜನ್ನರ 'ಅಂಗುಲ ಹುಳುವಿನ ಪರಕಾಯ ಪ್ರವೇಶ', ನಿಸಾರ್ ಅಹಮದ್‌ರ 'ಅಮ್ಮ ಆಚಾರ ಮತ್ತು ನಾನು', 'ರಾಮನ್ ಸತ್ತ ಸುದ್ದಿ', ಲಕ್ಷ್ಮಿನಾರಾಯಣ ಭಟ್ಟರ 'ಸವಾರಿ', ಕೆ.ವಿ.ತಿರುಮಲೇಶ್ವರ 'ಶಾಪ', 'ಪೆಂಟಯ್ಯನ ಅಂಗಿ', ಬಿ.ಆರ್. ಲಕ್ಷ್ಮಣರಾವ್ ಅವರ 'ಗೋಪಿ ಮತ್ತು ಗಾಂಡಲೀನಾ', 'ಕಡಲ ತೀರದಲ್ಲಿ', ಶ್ರೀಕೃಷ್ಣ ಆಲನಹಳ್ಳಿಯವರ 'ಕರಿಯ', ಹೆಚ್.ಎಸ್. ವೆಂಕಟೇಶಮೂರ್ತಿಯವರ 'ಸಿಂದಾಬಾದ್‌ನ ಆತ್ಮಕಥೆ', 'ಕಂಚಿನತೇರು' ಮುಂತಾದ ಕವಿತೆಗಳು ಹಾಗೂ ಸಮನ್ವಯ ಕವಿ ಜಿ.ಎಸ್.ಎಸ್. ಅವರ ಭೀಮಾಲಾಪ ಹಾಗೂ ಚನ್ನಬಸಪ್ಪರವರ "ಲೀಡನ್ ಮುತ್ತಿಗೆ", ಹೆಚ್.ಎಸ್.ಶಿವಪ್ರಕಾಶರ ಸಮಗಾರ ಭೀಮವ್ವ, ದೇಶಕುಲಕರ್ಣಿಯವರ ಇದು ಬರೀ ಬೆಳಗಲ್ಲೋ ಅಣ್ಣಾ, ಸಿದ್ದಲಿಂಗಯ್ಯ ಅವರ ಕತ್ತೆ ಮತ್ತು ಧರ್ಮ, ಸಿದ್ದಲಿಂಗ ದೇಸಾಯಿ ಅವರ ನೆನಪಿಡುವ ಕಥೆಯೊಂದಾ, ಕಾಳೇಗೌಡ ನಾಗವಾರರ ಕರಾವಳಿಯಲ್ಲಿ ಗಂಗಾ ಲಗ್ನ, ಬರಗೂರು ರಾಮಚಂದ್ರಪ್ಪನವರ ಮಾದಿಗರ ಹುಡುಗಿ, ಚೆನ್ನಣ್ಣ ವಾಲೀಕಾರರ ಮಾದರ ಸಾಬವ್ವನ ಗೋರಿ ಗೀತೆ ಕನ್ನಡ ಕಥನ ಕಾವ್ಯ ಪರಂಪರೆಯ ಕ್ಷಿತಿಜವನ್ನು ವಿಸ್ತರಿಸಿರುವ ಉತ್ತಮ ರಚನೆಗಳಾಗಿವೆ.

ನವೋದಯ, ಪ್ರಗತಿಶೀಲ ನವ್ಯ, ನವ್ಯೋತ್ತರ - ಈ ವ್ಯಾಪ್ತಿಯ ಒಂದು ಶತಮಾನದ ಕಥನ ಕಾವ್ಯವು ತನ್ನ ಬಹುಮುಖಿ ಸಾಧ್ಯತೆಗಳನ್ನು ಪ್ರದರ್ಶಿಸಿದೆ. ಆ ಕಾಲದ ಮೌಲ್ಯಗಳಾದ

ರಾಷ್ಟ್ರೀಯತೆ, ಸ್ವಾತಂತ್ರ್ಯ, ಅಹಿಂಸೆ, ಧರ್ಮನಿಷ್ಠೆ, ಸಾಮಾಜಿಕ ಸಾಮರಸ್ಯ, ವೈಜ್ಞಾನಿಕತೆ, ಜಾತ್ಯತೀತತೆ, ವೈಚಾರಿಕತೆ, ಧರ್ಮ ಸಹಿಷ್ಣುತೆ, ಸಾಮಾಜಿಕ ನ್ಯಾಯ, ಮಾನವೀಯ ದೃಷ್ಟಿಕೋನ, ನಿಸರ್ಗ ಪ್ರೇಮ ಇಂತಹ ಎಷ್ಟೋ ವಿಷಯಗಳು ಈ ಕಥನ ಕಾವ್ಯಗಳಿಗೆ ವಸ್ತು ವೈವಿಧ್ಯತೆಗಳನ್ನು ತಂದಿವೆ.

ಭಾಷೆಯ ದೃಷ್ಟಿಯಿಂದ ಮೊದ ಮೊದಲಿಗೆ ಹಳಗನ್ನಡದ ಬಳಕೆ ಸಹಜವಾಗಿ ಕಂಡುಬಂದರೂ ಮಾಸ್ತಿ, ಕುವೆಂಪು ನಂತರ ಆಡುಮಾತಿನ ಕನ್ನಡಕ್ಕೆ ಪ್ರಾಶಸ್ತ್ಯ ಬಂದಿರುವುದನ್ನು ಕಾಣುತ್ತೇವೆ. ಛಂದಸ್ಸಿನ ದೃಷ್ಟಿಯಿಂದ ಪ್ರಾಚೀನ ರೂಪಗಳು (ಉದಾಹರಣೆಗೆ: ಷಟ್ಪದಿ, ಚೌಪದಿ, ವೃತ್ತ, ಕಂದ, ಪಿರಿಯಕ್ಕರ, ರಗಳೆ) ಬಳಕೆಗೊಂಡರೂ ಕ್ರಮೇಣ ಕನ್ನಡ ಜಾಯಮಾನಕ್ಕೆ ಹೊಂದುವ ಜನಪದೀಯ ಲಯಗಳನ್ನು ಪಳಗಿಸಿ, ಪರಿಷ್ಕರಿಸಿ ವಸ್ತುವಿಗೆ ತಕ್ಕ ಲಯಗಳಲ್ಲಿ ಕಥನಗಳನ್ನು ನಿರ್ವಹಿಸುವ ಪ್ರಯತ್ನ ನಡೆಯಿತು.

ಇದರಿಂದಾಗಿ ಆಧುನಿಕ ಕನ್ನಡ ಕಥನ ಕಾವ್ಯವು ಕನ್ನಡದ ವಿಶಿಷ್ಟ ಪ್ರಕಾರವಾಗಿ ಬೆಳೆದು ಸಮೃದ್ಧಿಗೊಳ್ಳಲು ಸಾಧ್ಯವಾಗಿದೆ. ಈ ಹಿನ್ನೆಲೆ ಮತ್ತು ಸಾಹಿತ್ಯಕ ಪರಿಸರಗಳ ಸಾರವನ್ನು ಹೀರಿಕೊಂಡಂತೆ ಸು.ರಂ. ಎಕ್ಕುಂಡಿಯವರು ಕನ್ನಡದ ವಿಶಿಷ್ಟ ಕಥನ ಕವಿಯಾಗಿ ಬೆಳೆದಿದ್ದಾರೆ. ನವೋದಯದ ಉತ್ಕರ್ಷದಲ್ಲಿ ಬರೆಯಲು ತೊಡಗಿದ ಎಕ್ಕುಂಡಿಯವರು ಶ್ರೇಷ್ಠವಾದ ಕಥನಗೀತೆಗಳನ್ನು ರಚಿಸಿ, ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಗೆ ಹಲವು ವೈಶಿಷ್ಟ್ಯಗಳನ್ನು ತಂದಿದ್ದಾರೆ. ಇಂತಹ ಕವಿಯ ಸಾಹಿತ್ಯದ ಅಧ್ಯಯನ ಮತ್ತು ವಿಶ್ಲೇಷಣೆಗಳು ನಿಜಕ್ಕೂ ಸವಾಲಿನ ವಿಷಯಗಳೇ ಸರಿ.

****

ಅಧ್ಯಾಯ-ಐದು

ಸು.ರಂ. ಎಕ್ಕುಂಡಿಯವರ ಕಥನ ಕವನಗಳ ವಸ್ತು ಮತ್ತು ಆಶಯಗಳ ವರ್ಗೀಕರಣ

ಎಕ್ಕುಂಡಿಯವರ ಕಥನ ಕವನಗಳ ವಸ್ತು ಮತ್ತು ಆಶಯಗಳ ವರ್ಗೀಕರಣ

ಕನ್ನಡದ 'ಕಥನ ಕವಿ' ಎಂಬ ವಿಶಿಷ್ಟ ಗೌರವಕ್ಕೆ ಪಾತ್ರರಾಗಿರುವ ಸು.ರಂ. ಎಕ್ಕುಂಡಿಯವರು ಬರೆಯಲು ಪ್ರಾರಂಭಿಸಿದ್ದು ನವೋದಯದ ಉತ್ಕರ್ಷ ಕಾಲದಲ್ಲಿ. ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯವು ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಎಂಬ ನಾಲ್ಕು ಪ್ರಧಾನ ಚಿಂತನಾ ಧಾರೆಗಳಲ್ಲಿ ಬೆಳೆದು ಸಮೃದ್ಧಗೊಂಡಿದೆ. ಈ ಕಾವ್ಯ ಸಂದರ್ಭಗಳ ಬಹುಪಾಲು ದೃಷ್ಟಿ ಧೋರಣೆಗಳ ಪ್ರಭಾವಕ್ಕೊಳಗಾಗಿದ್ದರೂ ಆ ಯಾವುದೇ ಪಂಥ, ಪ್ರಣಾಳಿ, ವರ್ಗಪ್ರಜ್ಞೆ, ಭದ್ಧತೆಗಳ ಪರವಾಗಿ ಎಕ್ಕುಂಡಿಯವರು ಕಾವ್ಯ ರಚಿಸಿದವರಲ್ಲ. ಜನತೆಯ ನೆಮ್ಮದಿ ಸಂತೋಷಗಳಿಗಾಗಿ ಜೀವನ ಸೌಂದರ್ಯ, ಬಾಳಿನ ಅರ್ಥ ಪೂರ್ಣತೆಗಳನ್ನು ದರ್ಶಿಸುವ ಧ್ಯೇಯವಿಟ್ಟುಕೊಂಡು ಕಾವ್ಯ ರಚಿಸಿದವರು. ಈ ಅಂಶವು ಎಕ್ಕುಂಡಿಯವರ ಸಮಗ್ರ ಸಾಹಿತ್ಯದ ಒಟ್ಟು ದರ್ಶನವಾಗಿದೆ.

'ಸಹಜ ಕವಿ' ಎಂಬ ಬಿರುದು ಎಲ್ಲರಿಗೂ ದಕ್ಕುವುದಿಲ್ಲ. ಹಿರಿಯ ಕವಿ ಪು.ತಿ.ನ. ಅವರು ಎಕ್ಕುಂಡಿಯವರನ್ನು 'ಸಹಜ ಕವಿ' ಎಂದು ಪ್ರಶಂಸಿಸಿರುವುದು ಉತ್ಪ್ರೇಕ್ಷೆ ಎನಿಸುವುದಿಲ್ಲ. ಎಕ್ಕುಂಡಿಯವರ ನೂರಾರು ಕವಿತೆಗಳು ಮತ್ತು ಕಥನ ಕವನಗಳು ಅವರ ಪ್ರತಿಭಾ ಸಾಮರ್ಥ್ಯ ದರ್ಶಿಸುತ್ತವೆ. ಅದರಲ್ಲೂ "ಕಥನ ಕವನಗಳಲ್ಲಿ ಸು.ರಂ.ಎಕ್ಕುಂಡಿಯವರು ನಡೆಸಿದ ಪ್ರಯೋಗಗಳು ಆ ಕ್ಷೇತ್ರಕ್ಕೊಂದು ನಾವಿನ್ಯವನ್ನು ತಂದುಕೊಟ್ಟಿದೆ. ಕಥನ ಕವನವೇ ಹೊಸ ಅರ್ಥ ಪಡೆಯುವಂತಹ ಪ್ರಯೋಗಗಳನ್ನು ಎಕ್ಕುಂಡಿಯವರು ನಡೆಸಿದ್ದಾರೆ. ಕಥನ ಕವನದ ಪಾರಂಪರಿಕ ವ್ಯಾಖ್ಯೆಯು ಶ್ರೀ ಎಕ್ಕುಂಡಿಯವರಲ್ಲಿ ಬದಲಾಗಿದೆ" * ೧ ಎಂಬ ಮಾತುಗಳು ಹೊಸಗನ್ನಡ ಸಾಹಿತ್ಯದ ವಿಶಿಷ್ಟ ಕವಿಯಾದ ಎಕ್ಕುಂಡಿಯವರ ವಿಶಿಷ್ಟ ಸಾಧನೆಗಳನ್ನು ಉತ್ತಮ ರೀತಿಯಲ್ಲಿ ನಮ್ಮ ಗ್ರಹಿಕೆಗೆ ತಂದುಕೊಡುತ್ತಿವೆ ಎನ್ನಬಹುದು.

ಎಕ್ಕುಂಡಿಯವರು ಕತೆ, ವಿಶ್ಲೇಷಣೆ, ವಿಮರ್ಶೆ, ಬಿಡಿ ಕವಿತೆಗಳನ್ನು ರಚಿಸಿ ಸಹೃದಯರು, ಅಧ್ಯಯನಾಸಕ್ತರ ಗಮನ ಸೆಳೆದಿದ್ದರೂ, ಕಥನ ಕವನಗಳು ಅವರ ಒಟ್ಟು ಸಾಹಿತ್ಯದಲ್ಲಿ ವಿಶಿಷ್ಟ ರಚನೆಗಳಾಗಿ ನಿಲ್ಲುತ್ತವೆ. ಆ ಕಾರಣಕ್ಕಾಗಿಯೇ ಈ ನಿಬಂಧದ ಅಧ್ಯಯನ ವಿಷಯವನ್ನು ಕಥನ ಕವನಗಳಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಈ ಕಥನ ಕವನಗಳು ಪುರಾಣ, ಇತಿಹಾಸ, ಸಾಮಾಜಿಕ ಸಂದರ್ಭದ ವಸ್ತು ವಿಷಯಗಳನ್ನು ಬದುಕಿನ ಹಾಡಾಗಿ ನಿರೂಪಿಸುತ್ತವೆ. ಹೀಗಾಗಿ ಲೋಕ

೧. ಡಾ॥ ಕೆ.ವಿ.ನಾರಾಯಣ್ – ಬಕುಲದ ಹೂವುಗಳು ಮುನ್ನುಡಿಯಲ್ಲಿ – ೧೯೯೧

[illegible]

ಜೀವನದ, ನಿಸರ್ಗದ ಅಂತರಾಳದಲ್ಲಿರುವ ಸುಖ ಸೌಂದರ್ಯಗಳನ್ನು ದರ್ಶಿಸುವುದು ಎಕ್ಕುಂಡಿಯವರಿಗೆ ಮುಖ್ಯವಾಗುತ್ತದೆ. ಅದಕ್ಕನುಗುಣವಾಗಿ ಅವರು ತಮ್ಮ ಕಥನ ಕವನಗಳ ವಸ್ತು ವಿಷಯಗಳನ್ನು ವಿನ್ಯಾಸಗೊಳಿಸಿದ್ದಾರೆ. ಈ ಕಾರಣದಿಂದ ಅದರ ಕಥನ ಕವನಗಳನ್ನು ಅಧ್ಯಯನ ಸೌಕರ್ಯಕ್ಕಾಗಿ ವಿವಿಧ ನೆಲೆಗಳಲ್ಲಿ ವರ್ಗೀಕರಿಸಿ ವಿಶ್ಲೇಷಿಸುವ ಪ್ರಯತ್ನ ನನ್ನದು.

ಪ್ರಸ್ತುತ ಅಧ್ಯಯನವು ಎಕ್ಕುಂಡಿಯವರ ಕಥನ ಕವನಗಳು (ಪ್ರಕಟಣೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ೧೯೮೪) ಕೃತಿಯನ್ನು ಆಧರಿಸಿರುತ್ತದೆ. ಅವುಗಳಲ್ಲಿರುವ ವಸ್ತು ವಿಷಯಗಳಿಗನುಗುಣವಾಗಿ ಪೌರಾಣಿಕ, ಚಾರಿತ್ರಿಕ, ಪ್ರೇಮ–ಪ್ರಣಯ, ಸಾಮಾಜಿಕ ಮತ್ತು ಜೀವನ ಜಿಜ್ಞಾಸೆ, ವೈಚಾರಿಕ ಎಂಬ ಉಪ ಶೀರ್ಷಿಕೆಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ. ಈ ಸಂಕಲನದಲ್ಲಿರುವ ಕವಿತೆಗಳು ಸಾಮಾನ್ಯವಾಗಿ ಈ ವರ್ಗೀಕರಣಕ್ಕೆ ಹೊಂದಿಕೊಳ್ಳುತ್ತವೆ ಎಂಬ ವಿಶ್ವಾಸ ಹೊಂದಿದ್ದೇನೆ.

ಎಕ್ಕುಂಡಿಯವರ ಕಥನ ಕವನಗಳಲ್ಲಿ ಪ್ರಧಾನವಾಗಿ ಪುರಾಣ, ಭಾಗವತ, ರಾಮಾಯಣ, ಮಹಾಭಾರತಗಳ ವಿಶಿಷ್ಟ ಸಂಗತಿಗಳು ವಸ್ತು ವಿಷಯಗಳಾಗಿ ಬಂದಿವೆ. ಆದ್ದರಿಂದ ಅವುಗಳನ್ನು ಪೌರಾಣಿಕ ಚೌಕಟ್ಟಿನಲ್ಲಿ ಒಟ್ಟುಗೂಡಿಸಬಹುದಾಗಿದೆ. ಅವುಗಳಲ್ಲಿ ಅವಧೂತ, ವಸ್ತ್ರಾಪಹರಣ, ಮತ್ಸ್ಯಗಂಧಿ ಸತ್ಯವತಿ, ಬುಟ್ಟಿ ಮತ್ತು ಬೀಗದ ಕೈ, ಅತಿಥಿ, ಗುರು ಹಸಾದ ಸಮೀರ, ಸಂಪಾತಿ, ಶಬರಿ, ಬಲಿದಾನ, ಊರ್ವಶಿ, ಮಿಸುನಿಜಿಂಕೆ, ಮಿಥಿಲೆ, ದಡ ಸೇರಬೇಕಲ್ಲ, ಕೊಡ ಮತ್ತು ಹಾವು, ಹುಂಜ ಮತ್ತು ಕಮಂಡಲ, ಕವಷ ಐಲೂಷಾ, ಕುಬ್ಜಾಂಗನಾ, ಕಂಡಿರೇನು ಕಂದನಾ, ದೂರು, ಪಯಣ, ಕಾಲಿಯಾ ಮರ್ದನ, ಉಭಯ ಸರಸ್ವತಿ, ಕುಚೋಲೋಪಾಖ್ಯಾನ, ಗಜೇಂದ್ರ ಮೋಕ್ಷ, ಹಾವಾಡಿಗರ ಹುಡುಗ ಇತ್ಯಾದಿ. ಭಕ್ತಿ, ದೈವಾನುಗ್ರಹ, ದೈವನಿಷ್ಠೆ, ಆತ್ಮೋನ್ನತಿಯಂತಹ ಅಲೌಕಿಕ ಆದರ್ಶಗಳು ಈ ಕವಿತೆಗಳ ಪ್ರಧಾನ ಆಶಯಗಳಾಗಿವೆ.

ಚಾರಿತ್ರಿಕ ಕಥನ ಕವನಗಳ ಗುಂಪಿನಲ್ಲಿ ಬುದ್ಧದೇವ, ಭಗವಂತನು ನೀರೆರೆದನು, ಯೋಧ ಮತ್ತು ಹೆಂಗಸು, ಅಂಡರ್ಸನ್ ಬೀದಿ ಲಂಡನ್ನಿನಲ್ಲಿ, ಇಂತಹ ಕವನಗಳನ್ನು ವಿಶ್ಲೇಷಿಸಲಾಗುವುದು. ಈ ಕವಿತೆಗಳ ವಸ್ತು, ಸಾಮಗ್ರಿಗಳು ಚಾರಿತ್ರಿಕ ಪುರುಷರ ಉದಾತ್ತ ಬದುಕು, ಅವರು ಪ್ರತಿಪಾದಿಸಿದ ವೈಚಾರಿಕತೆ, ನೀಡಿದ ಸಂದೇಶಗಳು, ತಲುಪಿದ ಔನ್ನತ್ಯ ಇವುಗಳ ಪ್ರಮುಖ ಆಶಯಗಳಾಗಿವೆ.

ಪ್ರೀತಿ–ಪ್ರೇಮ–ಪ್ರಣಯ ಕಥನ ಕವನಗಳ ಗುಂಪಿನಲ್ಲಿ ಮಹಾಶ್ವೇತೆ, ಶ್ವೇತಕೇತು ದೇವರ್ಷಿ, ಪರಿಗ್ರಹಿಸಿರಿ ಪಾರಿಜಾತ, ನಾಗಿಯ ಕತೆ, ವಸ್ತ್ರಾಪಹರಣ, ಮಿಸುನಿ ಜಿಂಕೆ ಪ್ರಧಾನವಾಗುತ್ತವೆ. ಭಕ್ತಿಗೂ ಪ್ರಣಯಕ್ಕೂ ಅಭೇದವನ್ನು ಕಲ್ಪಿಸಿ ಪ್ರಣಯಕ್ಕೆ ಆಧ್ಯಾತ್ಮಿಕ ಔನ್ನತ್ಯದ ಅರ್ಥ ಆಶಯಗಳನ್ನು

ತುಂಬಿವೆ.

ಪೌರಾಣಿಕದಷ್ಟೇ ಪ್ರಧಾನ ಎನಿಸುವ ಸಾಮಾಜಿಕ ವಸ್ತು ವಿಷಯಗಳು ಎಕ್ಕುಂಡಿಯವರ ಲೇಖನಿಯಲ್ಲಿ ತುಂಬಾ ಕಲಾತ್ಮಕವಾಗಿ ನಿರೂಪಣೆಗೊಂಡಿವೆ. ಆ ಕಥನ ಕವನಗಳೆಂದರೆ ಪಾರಿವಾಳ, ಬಂಡೆ, ಬೆಸ್ತ ಮತ್ತು ಹುಡುಗ, ಹಿಟ್ಟು ಮತ್ತು ಮಲ್ಲಿಗೆ, ಏಣಿ ಮತ್ತು ದೀಪ, ಕಲ್ಲು ಮತ್ತು ನಕ್ಷತ್ರಗಳು, ಕಿಟಕಿ ಮತ್ತು ಗಾಲಿಗಳು, ರೊಟ್ಟಿ ಮತ್ತು ಕೋವಿ, ಕಣಗೀಲು ಗಿಡದಲ್ಲಿ ಹುಡುಗ, ಮುಖ್ಯವಾದವುಗಳು. ಈ ಕವಿತೆಗಳಲ್ಲಿ ಕವಿ ಹಸಿವು ಬಡತನ, ಕ್ರೌರ್ಯ ಮುಂತಾದ ಸಾಮಾಜಿಕ, ವಸ್ತು ಸ್ಥಿತಿಗಳನ್ನು ನಿರೂಪಿಸುತ್ತಾ ಅವುಗಳಿಂದ ಮಾನವ ಪಾರಾಗಬಹುದಾದ, ಬಿಡುಗಡೆಯ ಸಾಧ್ಯತೆಗಳನ್ನು ಕಂಡುಕೊಳ್ಳುವ ಮಾನವೀಯ ಆಶಯಗಳನ್ನು ನಿರೂಪಿಸಿರುವುದು ಕಂಡು ಬರುತ್ತದೆ.

ವೈಚಾರಿಕ ಎನ್ನಬಹುದಾದ ಕಥನ ಕವನ "ದಾಸಿಮಯ್ಯ ಮತ್ತು ಬೆಕ್ಕು" ಈ ಕವಿತೆಯಲ್ಲಿ ಭಕ್ತಿಯ ಕಪಟತನ ಮತ್ತು ವೈಚಾರಿಕ ಅಸಂಗತತೆಯನ್ನು ತೀಕ್ಷ್ಣವಾಗಿ ವಿಮರ್ಶಿಸಿರುವುದು ಕಂಡು ಬರುತ್ತದೆ. ವಿಚಾರ ಮತ್ತು ನಡೆ-ನುಡಿಗಳಲ್ಲಿ ಇರಬೇಕಾದ ಪ್ರಾಮಾಣಿಕತೆಗೆ ಈ ಕಥನ ಕವನ ಒತ್ತುಕೊಡುತ್ತದೆ. ಅದರ ಪ್ರಮುಖ ಆಶಯ ಕೂಡ ಇದೇ ಆಗಿದೆ.

****

ಅಧ್ಯಾಯ-ಆರು

ಸು.ರಂ. ಎಕ್ಕುಂಡಿಯವರ ಕಥನ ಕವನಗಳ ವಿಶ್ಲೇಷಣೆ

ಅ) ಪೌರಾಣಿಕ

ಆ) ಪ್ರೀತಿ - ಪ್ರಣಯ

ಇ) ಚಾರಿತ್ರಿಕ

ಈ) ಸಾಮಾಜಿಕ

ಉ) ಜೀವನ ಜಿಜ್ಞಾಸೆ

ಊ) ವಿಡಂಬನೆ ಮತ್ತು ವೈಚಾರಿಕತೆ

ಸು.ರಂ.ಎಕ್ಕುಂಡಿಯವರ ಕಥನ ಕವನಗಳ ವಿಶ್ಲೇಷಣೆ

ಹೊಸಗನ್ನಡ ಸಾಹಿತ್ಯದ ಸಮೃದ್ಧಿಯು ಬಹು ವಿಧದಲ್ಲಿ ಕಾಣ ಸಿಗುತ್ತದೆ. ವಸ್ತು, ಪ್ರಕಾರ, ವೈಚಾರಿಕತೆ, ಸಿದ್ಧಾಂತಗಳು, ಆಶಯಗಳು ಮತ್ತು ಮೌಲ್ಯಗಳು, ಸಾಮಾಜಿಕ ಬದಲಾವಣೆ, ಸಂಸ್ಕೃತಿಯ ಹೀಗೆ ಹಲವು ನಿಟ್ಟಿನಲ್ಲಿ ಆ ಸಮೃದ್ಧಿಯನ್ನು ಗುರುತಿಸಬಹುದು. ಈ ಗುರುತಿಸುವಿಕೆಯ ಕಾರ್ಯ ಈಗಾಗಲೇ ಸಂಶೋಧನೆ, ವಿಮರ್ಶೆ, ಸಂಸ್ಕೃತಿ ಅಧ್ಯಯನ, ಶೈಕ್ಷಣಿಕ ಉದ್ದೇಶಗಳಿಗಾಗಿ ಬೇರೆ ಬೇರೆ ಪ್ರಮಾಣದಲ್ಲಿ ನಡೆದುಕೊಂಡು ಬರುತ್ತಿದೆ. ಹೀಗಿದ್ದರೂ ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯದ ಒಟ್ಟು ಅಧ್ಯಯನವು ಇಡಿಯಾಗಿ ಪೂರ್ಣಗೊಂಡಿದೆ ಎಂದು ಹೇಳುವಂತಿಲ್ಲ.

ಮೇಲಿನ ಹಲವು ದೃಷ್ಟಿಕೋನಗಳಲ್ಲಿ ಒಂದಾದ ಸಾಹಿತ್ಯ ಪ್ರಭೇದಗಳ ಸಮಗ್ರ ವಿಶ್ಲೇಷಣೆಯು ಸಾಹಿತ್ಯಾಸಕ್ತರಿಗೆ ಇನ್ನೂ ದೊರಕಬೇಕಾಗಿದೆ. ಆಧುನಿಕ ಕನ್ನಡ ಸಾಹಿತ್ಯವು ಮಹಾಕಾವ್ಯ, ಕಾದಂಬರಿ, ಭಾವಗೀತೆ, ಸಣ್ಣ ಕತೆ, ಖಂಡ ಕಾವ್ಯ, ನೀಳ್ಗತೆ, ಚುಟುಕುಗಳು, ಕಥನ ಕಾವ್ಯ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಪ್ರಬಂಧ, ವಿಮರ್ಶೆ, ಸಂಶೋಧನೆ ಈ ಮೊದಲಾದ ವಿವಿಧ ಸಾಹಿತ್ಯ ರೂಪಗಳಾಗಿ ಕವಲೊಡೆದು ವಿಶಾಲ ವೃಕ್ಷದಂತೆ ಬೆಳೆದಿರುವುದು ಸತ್ಯ. ಕನ್ನಡ ಕಾವ್ಯ ಪರಂಪರೆಯ ನಿರಂತರತೆಯು ಈ ಬಗೆಯ ವೈವಿಧ್ಯಗಳನ್ನು ಕಾಲಕಾಲಕ್ಕೆ ಮೈಗೂಡಿಸಿಕೊಂಡೇ ಮುಂದುವರೆಯುತ್ತಿದೆ. 'ಸು.ರಂ. ಎಕ್ಕುಂಡಿಯವರ ಕಥನ ಕವನಗಳ ಒಂದು ಅಧ್ಯಯನ' ಎಂಬ ವಿಷಯವನ್ನು ನನ್ನ ನಿಬಂಧಕ್ಕಾಗಿ ಆರಿಸಿಕೊಂಡಿದ್ದೇನೆ. ಇದು ಪರೋಕ್ಷವಾಗಿ ಕನ್ನಡ ಕಥನ ಕವನಗಳ ವೈಶಿಷ್ಟ್ಯತೆಗಳನ್ನು ಸ್ಥೂಲವಾಗಿ ಅವಲೋಕಿಸುವ ಅವಕಾಶಗಳನ್ನು ಒದಗಿಸಿಕೊಟ್ಟಿದೆ.

ಎಕ್ಕುಂಡಿಯವರು ಆಧುನಿಕ ಕಾಲದ ಕನ್ನಡದ ಮಹತ್ವದ ಕವಿಗಳಲ್ಲಿ ಒಬ್ಬರಾಗಿದ್ದಾರೆ. ವಿಶೇಷವಾಗಿ ಅವರು ಕಥನ ಕವನಗಳನ್ನು ರಚಿಸುವುದರಲ್ಲಿ ಅಗ್ರಗಣ್ಯರು. ಕನ್ನಡ ಕಥನ ಕಾವ್ಯ ಪರಂಪರೆಯ ನಿರಂತರೆಯನ್ನು ಜಾನಪದ, ಶಾಸನ, ಅಭಿಜಾತ ಮತ್ತು ಆಧುನಿಕ ಎಂಬ ನಾಲ್ಕು ನೆಲೆಗಟ್ಟಿನಲ್ಲಿ ಗುರುತಿಸಬಹುದು. ಈ ವಿಗಂಡಣೆಯು ಕಥನ ಕವನ ಪ್ರಕಾರವನ್ನು ತಮ್ಮ ಅಭಿವ್ಯಕ್ತಿಯ ವಿಶಿಷ್ಟ ಮಾಧ್ಯಮವಾಗಿ ಎಕ್ಕುಂಡಿಯವರು ಆಯ್ದುಕೊಳ್ಳಲು ಕಾರಣವಾಗಿರುವ ಹಿನ್ನೆಲೆಯನ್ನು ಒದಗಿಸಿಕೊಡುತ್ತದೆ ಎಂದು ಕೊಂಡಿದ್ದೇನೆ. ಇಲ್ಲಿ ಎಕ್ಕುಂಡಿಯವರ ಸಮಗ್ರ ಕಥನ ಕವಿತೆಗಳನ್ನು ವಸ್ತು, ವಿಷಯಗಳ ಆಧಾರದ ಮೇಲೆ ವರ್ಗೀಕರಿಸಿ, ವಿಶ್ಲೇಷಣೆ ನಡೆಸಲಾಗಿದೆ.

ಸ್ವತ: ಎಕ್ಕುಂಡಿಯವರೇ ಹೇಳಿಕೊಂಡಂತೆ "ಅಭಿವ್ಯಕ್ತಿಯ ತಕ್ಕಡಿಗೆ ಎರಡು ಪರಡಿಗಳಿವೆ: ಒಂದು ಜೀವನ, ಇನ್ನೊಂದು ಪ್ರಕೃತಿ", * ಅವರ ಕಾವ್ಯಕ್ಕೆ ಪುರಾಣ, ನಿಸರ್ಗ, ಜೀವನ– ಈ

* ಸು.ರಂ.ಎಕ್ಕುಂಡಿ – ನಾನು ನನ್ನ ಕವಿತೆ – ಲೇಖನ

ಎಲ್ಲವೂ ವಸ್ತು ಸಾಮಗ್ರಿಗಳನ್ನು ಒದಗಿಸಿವೆ. ಈ ಮೂರೂ ನೆಲೆಯ ಭವ್ಯತೆ ಮತ್ತು ಚೆಲುವುಗಳನ್ನು ದರ್ಶಿಸುವುದು ತನ್ನ ಉದ್ದೇಶವೆಂದು ಕವಿಯೇ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಅಧ್ಯಯನ ಸೌಕರ್ಯಕ್ಕಾಗಿ ಮಾಡಿಕೊಂಡಿರುವ ಮೇಲ್ಕಂಡ ವರ್ಗೀಕರಣಕ್ಕೆ ಈ ಕೆಲವು ಅಂಶಗಳು ತಾವಾಗಿಯೇ ಒಂದು ಚೌಕಟ್ಟನ್ನು ನಿರ್ಮಿಸಿಕೊಟ್ಟಿವೆ.

ಅ) ಪೌರಾಣಿಕ ಕಥನ ಕವನಗಳು

ನವೋದಯ ಮತ್ತು ಪ್ರಗತಿಶೀಲ ಧೋರಣೆಗಳ ಸಮನ್ವಯತೆಯ ಪ್ರತೀಕವಾಗಿರುವ ಎಕ್ಕುಂಡಿಯವರ ಬಹುಪಾಲು ಕವಿತೆಗಳ ವಸ್ತು – ವಿಷಯಗಳು ಪುರಾಣ, ಭಾಗವತ, ರಾಮಾಯಣ, ಮಹಾಭಾರತ, ಹರಿದಾಸ ಪರಂಪರೆಯಿಂದ ಆರಿಸಿಕೊಂಡವುಗಳಾಗಿವೆ. ಈ ಪ್ರಸಂಗಗಳು ಭಕ್ತಿ, ದೈವನಿಷ್ಠೆ, ದೈವಾನುಗ್ರಹ, ಅನುರಾಗ, ಧರ್ಮನಿಷ್ಠೆ, ಧರ್ಮಾನುಸರಣೆ, ಆತ್ಮೋನ್ನತಿಯಂತಹ ಅಲೌಕಿಕ ಆದರ್ಶಗಳನ್ನು ಬಿಂಬಿಸುವ ಘಟನೆಗಳಾಗಿವೆ.

ಇವುಗಳು ಪುರಾಣ, ಇತಿಹಾಸ ಕಾಲದ ಮಾನವರಿಗಷ್ಟೇ ಸೀಮಿತವಲ್ಲ ಆಧುನಿಕ ಮಾನವರಿಗೂ ಈ ಅಲೌಕಿಕ ಆದರ್ಶಗಳು ಸುಸಂಗತ ಎಂಬುದೇ ಕವಿಯ ಗಾಢ ನಂಬಿಕೆ. ಹಾಗಾಗಿ ವಸ್ತು – ವಿಷಯಗಳು ಪುರಾಣವೇ ಆದರೂ ಅಲ್ಲಿರುವ ಭಾವಗಳು, ವಿಚಾರಗಳು, ಮೌಲ್ಯಗಳು ಸಾರ್ವಕಾಲಿಕ ಹಾಗೂ ಸಾರ್ವತ್ರಿಕ ಎಂಬಂತಹ ವಿಶೇಷ ನಿಲುವು ಎಕ್ಕುಂಡಿಯವರದು. ಕವಿಯಲ್ಲಿ ಅಡಗಿರುವ 'ಆಧುನಿಕ ಪ್ರಜ್ಞೆ'ಯು 'ಗತ'ವನ್ನು ನೋಡಿರುವುದೇ ಹೀಗೆ. ಅವರ ಕವಿತೆಯ ವಿಷಯಗಳಿಗೆ ಈ ವಿಧದಲ್ಲಿ ಪ್ರಸ್ತುತತೆಯ ಗುಣ ಲಭಿಸಿ ಬಿಡುತ್ತದೆ. ಈ ಹಿನ್ನೆಲೆಯಲ್ಲಿ ಅವರ ಪೌರಾಣಿಕ ಕಥನ ಕವನಗಳ ವಿಶ್ಲೇಷಣೆ ಕುತೂಹಲಕಾರಿಯಾದುದು.

ಎಕ್ಕುಂಡಿಯವರ ಕಥನ ಕವನಗಳ ಬಹುಭಾಗವು ದೈವ ಮತ್ತು ಮಾನುಷಗಳ ಸಂಯೋಗದ ಸಾರ್ಥಕತೆಯನ್ನು ನಿರೂಪಿಸುವ ನಿಯಮಕ್ಕೆ ಬದ್ಧವಾಗಿದೆ. ನವೋದಯ ಮತ್ತು ಪ್ರಗತಿಶೀಲ ಧೋರಣೆಗಳ ಬಹಳಷ್ಟು ಲೇಖಕರು ದೈವ ಕೇಂದ್ರಿತ ನೆಲೆಗಳ ಆಚೆ ನಿಂತು ತಮ್ಮ ಕೃತಿ ರಚನೆ ಮಾಡಿದ್ದಾರೆ. ಆದರೆ ನವೋದಯ ಕಾಲದ ಕವಿಗಳಲ್ಲಿ ಪು.ತಿ.ನ ಮತ್ತು ಸು.ರಂ. ಎಕ್ಕುಂಡಿಯರ ಬಹುಪಾಲು ಚಿಂತನೆಗಳು ದೈವ ಕೇಂದ್ರಿತವಾಗಿರುವುದು ತುಂಬಾ ವಿಶಿಷ್ಟವಾಗಿ ಕಾಣುತ್ತದೆ.

ಆಧುನಿಕ ಕಾಲದ ಈ ಇಬ್ಬರೂ ಕವಿಗಳಲ್ಲಿ ದೈವನಿಷ್ಠ ಚಿಂತನೆಗಳು ಆಧುನಿಕ ಮನೋಧರ್ಮಕ್ಕೆ ತಕ್ಕಂತೆ ಉದಾರವಾದಿ ಧೋರಣೆಗಳ ಸ್ವರೂಪ ಧರಿಸಿವೆ. ಈ ಕಾರಣಕ್ಕಾಗಿ ಇವರಿಬ್ಬರ ನಡುವೆ ಸಾಮ್ಯತೆಗಳು ಹೆಚ್ಚು. "ಇಬ್ಬರ ಆಶಯಗಳು ಒಂದೇ ಆದರೂ ಸಖ್ಯಭಾವಕ್ಕಿಂತ,

ದಾಸಭಾವವು ಪು.ತಿ.ನ ಅವರ ಕೇಂದ್ರ ಕಾಳಜಿಯೂ ಆಗಿದೆ. ಹೊಸ ಜಗತ್ತಿನ ಮನುಷ್ಯ ಪು.ತಿ.ನ ಅವರ ಪುರಾಣ, ಪ್ರತೀಕಗಳನ್ನೂ ಸ್ವೀಕರಿಸಿದ ಕಾವ್ಯದಲ್ಲಿ ಇಲ್ಲವಾಗುತ್ತಾನೆ. ಆದರೆ, ಎಕ್ಕುಂಡಿಯವರಲ್ಲಿ ಅವನು ಕೇಂದ್ರ ನೆಲೆಗೆ ತಲುಪುತ್ತಾನೆ. ಎಕ್ಕುಂಡಿ ಅವರಲ್ಲಿ ದೈವ ಮತ್ತು ಮಾನುಷಗಳು ಎರಡೂ ಕೂಡ ಪರಸ್ಪರ ಹುಡುಕಾಟದಲ್ಲಿ ತೊಡಗುತ್ತವೆ. ಪು.ತಿ.ನ ಅವರ ಒಟ್ಟು ಸೃಜನಶೀಲ ನೆಲೆಯಲ್ಲಿ ಗೆಲುವು ದೈವಕ್ಕೇ ಹೊರತು, ಮಾನುಷಕ್ಕಲ್ಲ. ಆದರೆ ಈ ಸಂಘರ್ಷವು ಎಕ್ಕುಂಡಿಯವರಲ್ಲಿ ಇಲ್ಲವಾಗುತ್ತದೆ". * ಈ ತೌಲನಿಕ ವಿಶ್ಲೇಷಣೆಯು ಪು.ತಿ.ನ ಮತ್ತು ಎಕ್ಕುಂಡಿಯವರು 'ಭಕ್ತಿ' ನಿರೂಪಣೆಯಲ್ಲಿ ಹೇಗೆ ಪರಸ್ಪರ ಭಿನ್ನ ಆಶಯಗಳನ್ನ ಪ್ರತಿನಿಧಿಸಿದ್ದಾರೆಂಬುದರ ಸ್ಪಷ್ಟತೆ ನೀಡುತ್ತದೆ.

ಭಾಗವತ ಶ್ರದ್ಧೆ, ಮಧ್ವಮತನಿಷ್ಠೆ, ಹರಿದಾಸ ಪರಂಪರೆಯ ಬಗೆಗಿನ ಪ್ರೀತಿಗಳು ಎಕ್ಕುಂಡಿಯವರ ಕಥನ ಕವನಗಳಲ್ಲಿ ವರ್ಣಿತವಾಗಿರುವ 'ಭಕ್ತಿತತ್ವ' ಕ್ಕೆ ಬೇರೆ ಬೇರೆ ಆಯಾಮಗಳನ್ನು ಒದಗಿಸಿವೆ. ಅದರಿಂದಾಗಿಯೇ ಎಕ್ಕುಂಡಿಯವರು ಕೃಷ್ಣ ವ್ಯಕ್ತಿತ್ವವನ್ನು ಭಿನ್ನ ಭಿನ್ನ ಪ್ರತಿಮೆಗಳಲ್ಲಿ ಅನಾದೃಶ್ಯವಾಗಿ ನಿರೂಪಿಸಿದ್ದಾರೆ. 'ಭಕ್ತಿ' ಎಂದರೆ 'ಕೃಷ್ಣ ಭಕ್ತಿ' ಎನಿಸುವಷ್ಟರ ಮಟ್ಟಿಗೆ ಎಕ್ಕುಂಡಿಯವರು ಆ ವಿಷಯದ ವರ್ಣನೆಯಲ್ಲಿ ದಣಿವಾಗದ ಉತ್ಸಾಹ ತೋರಿದ್ದಾರೆ.

ಇಂತಹ ಭಕ್ತಿಯನ್ನು ಹಿಡಿದಿಡುವ ಕಥನ ಕವನಗಳನ್ನ ಪ್ರಾತಿನಿಧಿಕವಾಗಿ ಆಯ್ದುಕೊಳ್ಳಲಾಗಿದೆ. ಹಾವಾಡಿಗರ ಹುಡುಗ, ಗಜೇಂದ್ರ ಮೋಕ್ಷ, ಕುಬ್ಜಾಂಗನಾ, ಕುಚೇಲೋಪಖ್ಯಾನ, ಭಗವಂತನು ನೀರೆರೆದನು, ಅತಿಥಿ, ಬುಟ್ಟಿ ಮತ್ತು ಬೀಗದ ಕೈ ಮುಖ್ಯವಾಗುತ್ತವೆ.

ಭಕ್ತಿಯು ಮಾನವರಲ್ಲಿ ನಂಬಿಕೆ, ನಿಷ್ಠೆಯಂತಹ ಸಹಜ ನಡಾವಳಿಗಳಲ್ಲಿ ಬಿಂಬಿತವಾಗುವಂತಹುದು. ನಂಬಿಕೆ ನಿಷ್ಠೆಗಳಿದ್ದರೆ ಪ್ರೀತಿ ಸಹಜವಾಗಿ ಹುಟ್ಟುತ್ತದೆ. ಹೀಗೆ ಭಕ್ತಿಯು 'ಅನುರಾಗ'ದ ವಿಶಿಷ್ಟ ರೂಪವಾಗುತ್ತದೆ. ಭಕ್ತಿಯ ಮೂಲಕ ಮಾನವ ತನ್ನ ಲೌಕಿಕ ಬದುಕಿನ ಕಷ್ಟ – ಕೋಟಲೆಗಳಿಂದ ಬಿಡುಗಡೆ ಪಡೆದು, ದೈವಾನುಗ್ರಹಕ್ಕೆ ಒಳಗಾಗುವ ಮುಕ್ತಿಯ ಮಾರ್ಗ, ಆತ್ಮೋದ್ಧಾರದ ವಿಧಾನ. ಇಂತಹ ಅಲೌಕಿಕವಾದ ಅನುಭವ ವಿಶೇಷವನ್ನು ಎಕ್ಕುಂಡಿಯವರು ತಮ್ಮ ದೇಸಿ ಚಿಂತನೆಯಲ್ಲಿ ಸಾಕಾರಗೊಳಿಸುವ ರೀತಿಯೇ ವಿಸ್ಮಯಕಾರಿಯಾದುದು.

'ಹಾವಾಡಿಗರ ಹುಡುಗ' ಕಥನ ಗೀತೆಯು, ಆತ್ಮವು ಭಕ್ತಿಯ ಮೂಲಕ ಸಾಧಿಸಿದ ಆತ್ಮೋನ್ನತಿಯ ಅದ್ಭುತ ಚಿತ್ರಣ ನೀಡುವ ಕಲಾತ್ಮಕ ಕವನ. ಆತ್ಮವು ಅಹಂಕಾರದ ಸರ್ಪಗಾವಲಿನಲ್ಲಿ ಅವನತ ಸ್ಥಿತಿಯಲ್ಲಿದ್ದು ದೈವಿಕ ಆಗಮನ, ಸ್ಪರ್ಶಗಳಿಂದ ರತ್ನಮಾಲೆಯಾಗಿ ಪರಿವರ್ತನೆಗೊಂಡು

---

* ಮಲ್ಲೇಪುರಂ ಜಿ.ವೆಂಕಟೇಶ್ – ಎಕ್ಕುಂಡಿಯವರ ಕಾವ್ಯದಲ್ಲಿ ಪರಂಪರೆಯ ನೋಟ – ಅಡಿ ಟಿಪ್ಪಣಿ – ಪುಟ – 12 (ಕೃತಿ – ಸು.ರಂ.ಎಕ್ಕುಂಡಿಯವರ ಕಾವ್ಯ – ಕರ್ನಾಟಕ ಸಾಹಿತ್ಯ ಅಕಾಡೆಮಿ)

ದೈವದ ಕೊರಳನ್ನಲಂಕರಿಸುವ ಮೂಲಕ ಔನ್ನತ್ಯದ ತುರಿಯಾವಸ್ಥೆಯನ್ನು ತಲುಪಿ ಬಿಡುವ ಅದ್ಭುತ ಪವಾಡ ನಡೆದು ಹೋಗುತ್ತದೆ.

ಮಾನವ ಶರೀರ ಮತ್ತು ಆತ್ಮಗಳ ದುರವಸ್ಥೆಯನ್ನು ಕವಿತೆಯ ಪ್ರಾರಂಭದಲ್ಲಿಯೇ ವರ್ಣಿಸಲಾಗಿದೆ. ಅಲ್ಲೊಂದು ಮನೆಯಿದೆ, ಅದಕ್ಕೆ ಒಂಭತ್ತು ಬಾಗಿಲುಗಳಿವೆ, ಒಂಭತ್ತು ಉಪ್ಪರಿಗೆಗಳಿವೆ. ಅದರ ರಹಸ್ಯ ನೆಲೆಯಲ್ಲಿ ಒಂಭತ್ತು ಕೊಪ್ಪರಿಗೆ ನಿಧಿ ಇದೆ. ಶರೀರದೊಳಗೆ ಆತ್ಮ ಹೀಗೆ ಬಂಧಿಯಾಗಿ ಉನ್ನತಿಯನ್ನು ಕಾಣದಿದೆ.

" ಬಿಡಿಗಾಸು ಕೂಡ ಹೊರ
ಬಿಡದಂತೆ ಹಗಲಿರುಳು
ನಿಧಿಯ ಕಾಯುವ ಸರ್ಪ"

ಅದರ ಕಾವಲಿಗಿದ್ದು, ಸದಾ ಜಾಗೃತವಾಗಿದೆ. ಹಣದ ಮೇಲಿನ ಮೋಹ 'ಜೀವ'ಕ್ಕೆ ಲೌಕಿಕ ತೃಪ್ತಿ ಸಂತೋಷ ನೀಡುವುದರಲ್ಲಿ ಅನುಮಾನವಿಲ್ಲ. ಇಂತಹ ಸ್ಥಿತಿಯೇ 'ಜೀವ'ಕ್ಕೆ ಆಪ್ಯಾಯ ಮಾನವಾದದ್ದು. ಅದಕ್ಕಿಂತ ಉತ್ತಮಸ್ಥಿತಿ – ಸಂತಸಗಳನ್ನು ಸಂಪಾದಿಸಬಹುದೆಂಬ ಅರಿವಿಲ್ಲ ಜೀವಿಗೆ! ಕವಿ ಆ ಲೌಕಿಕ ವಾಸ್ತವವನ್ನು ಹೀಗೆ ಅದ್ಭುತವಾಗಿ ಧ್ವನಿಸುತ್ತಾರೆ.

" ನಿಧಿಯ ಕಾಯುವ ಹಾವಿಗಿನ್ನೇನು ಗೊತ್ತು?"

ಮಾನವ ಅರಿವು – ಬದುಕಿನ ಮಿತಿಯೇ ಇದು ಎಂಬ, ಈ ಸ್ಥಿತಿಯ ಉಲ್ಲಂಘನೆಯಲ್ಲಿ ನಿಜವಾದ ಸಂತೋಷ – ಉನ್ನತಿಯಿದೆ ಎಂಬ ಜ್ಞಾನೋದಯ ಆತ್ಮನಿಗಾಗುವುದಿಲ್ಲ. ಅದಕ್ಕೆ ದೈವದ ಸ್ಪರ್ಶ ಆಗಲೇಬೇಕು.

"ಒಂದು ದಿನ ಮುಂಜಾವು
ಘಮಘಮಿಸಿದವು ಹೂವು
ದಿವ್ಯ ಸೌಗಂಧಿಕ
ಸಹಸ್ರ ಸೌರಭ ತಾಳಿ
ಬರಿದ ದಿಕ್ಕುಗಳಿಂದ
ಬೀಸಿದವು ಗಾಳಿ"

ಅಹಂಕಾರ, ಮೋಹಗಳ ಸೆರೆಯಾಳಾಗಿರುವ ಆತ್ಮಕ್ಕೆ, ದೈವ ಸಾಮೀಪ್ಯದ ಅದೃಷ್ಟ ಒದಗಿ ಬರುವ ಮುನ್ಸೂಚನೆಯನ್ನು ನಿರಾಕಾರ ಪರಿಮಳದ ಆಗಮನ ಸೂಚಿಸುತ್ತದೆ.

ಮಾನುಷ ಸ್ಥಿತಿಯಲ್ಲೇ ಉಳಿಯಬೇಕೆನ್ನುವ ಅದಮ್ಯ ಆಸೆ ಜೀವಕ್ಕಿದೆ. ಆಕಸ್ಮಿಕವೋ ಎಂಬಂತೆ ಆ ಜೀವಕ್ಕೆ ಲೌಕಿಕ ಮೋಹಗಳಿಂದ ಬಿಡುಗಡೆ ತರುವ ಶುಭ ಘಳಿಗೆ ಬಂದೇ ಬಿಡುತ್ತದೆ; 'ಹಾವಾಡಿಗರ ಪುಟ್ಟ'ನ ರೂಪದಲ್ಲಿ ದೈವದ ಆಗಮನ ಆಗಿಬಿಡುತ್ತದೆ. ಜೀವ ಎಂದಿನಂತೆಯೇ ಇದ್ದು, ಬದಲಾವಣೆ, ಪರಿವರ್ತನೆಗೆ ಪ್ರಯತ್ನಿಸುವ ದೈವದೆದುರು

" ನಿಧಿಯ ಕಾಯುವ ಸರ್ಪ
ಘೂತ್ಕರಿಸತೊಡಗಿತ್ತು
ಹೆಡೆಯೆತ್ತಿ ಕಣ್ಣು ಬಿಟ್ಟು" – ಪ್ರತಿಭಟಿಸುತ್ತದೆ.

ಆದರೆ ಮಾನುಷ ಶಕ್ತಿ – ಸಾಮರ್ಥ್ಯಗಳಿಗೆ ಮಿತಿಯಿದೆ, ದೈವದ ಶಕ್ತಿ ಅಪರಿತವಾದುದು. ಅದರಿಂದಾಗಿಯೇ

"ಗರುಡವಾಹನನಿತ್ತ
ಗಾರುಡಿಗ ಸ್ಪರ್ಶಕ್ಕೆ
ಹಾವಾಯ್ತು ರತ್ನಮಾಲೆ"

ದೈವದ ಮಾಂತ್ರಿಕ ಸ್ಪರ್ಶಕ್ಕೆ ನಿಧಿಯ ಮೋಹದ ಸರ್ಪ, ದೇವರ ಕೊರಳಿಗೆ 'ರತ್ನಮಾಲೆ'ಯಾಗಿ, ದೇವರ ಆಭರಣವಾಗಿ ರೂಪಾಂತರಗೊಳ್ಳುತ್ತದೆ. ಆ ಮೂಲಕ ಶಾಶ್ವತ ಸ್ಥಾನ – ಮಾನ ಹೊಂದುತ್ತದೆ.

ನಶ್ವರದ ನೆಲೆಯಲ್ಲಿ ಅವನತ ಸ್ಥಿತಿಯಲ್ಲಿದ್ದ ಆತ್ಮವು ದೈವಾನುಗ್ರಹದಿಂದ 'ಅಮರತ್ವ'ಕ್ಕೇರುವ ಇಲ್ಲಿಯ ಕ್ರಿಯಾ ಪರಂಪರೆಗಳು ಸಹಜವೆಂಬಂತೆ ಫಲಿಸುತ್ತವೆ. ಅಹಂಕಾರವೆಂಬ ಸರ್ಪದ ಚಟುವಟಿಕೆಗಳು, ಬಾಲಕೃಷ್ಣನ ಆಗಮನ, ಆತ್ಮದ ಉದ್ಧಾರಕ್ಕಾಗಿ ಅನುಗ್ರಹ ತೋರುವ ದೈವದ ಆಸಕ್ತಿ, ದೈವದ ಸಂಸ್ಪರ್ಶವನ್ನು ವಿರೋಧಿಸುತ್ತಲೇ ದೈವಕ್ಕೆ ತಲೆಬಾಗುವ ಆಶ್ಚರ್ಯಕರ ಬೆಳವಣಿಗೆ, ಕೊನೆಗೆ ಲಭಿಸುವ ಔನ್ನತ್ಯ ಇವೆಲ್ಲವೂ ಸಾವಯವ ಸಂಬಂಧಗಳಂತೆ ವರ್ಣಿತವಾಗಿವೆ.

ಮನೆ, ಬಾಗಿಲು, ನಿಧಿ, ಸರ್ಪಗಳಂತಹ ಪ್ರತಿಮೆಗಳ ಮೂಲಕ 'ಜೀವ'ದ ನಶ್ವರ ಸ್ಥಿತಿಯ ಜತೆ ಹಾವಾಡಿಗರ ಹುಡುಗ, ಗರುಡ, ಪರಿಮಳದ ಗಾಳಿ, ರತ್ನಮಾಲೆಯಂತಹ ಪ್ರತಿಮೆಗಳ ಜೋಡಣೆಯ ಮೂಲಕ ಅಲೌಕಿಕ ಸ್ಥಿತಿಯ ಅಮರತ್ವದ ಸಂಯೋಗವನ್ನು ಕವಿ ಮಿಲನಗೊಳಿಸಿದ್ದಾರೆ.

ಆತ್ಮ ಅಮರವಾದರೂ, ದೈವದ ಸಾಕ್ಷಾತ್ಕಾರವಿಲ್ಲದೆ ಅದರ ಉನ್ನತಿ ಸಾಧ್ಯವಿಲ್ಲವೆಂಬ ಆಧ್ಯಾತ್ಮಿಕ ಸತ್ಯದ ದರ್ಶನ ಮಾಡಿಸುತ್ತದೆ ಈ ಕಥನ ಕವನ. ದೈವದತ್ತ ಒಲವು ದೈವಾನುಗ್ರಹಗಳ ಸಂಯೋಗದಿಂದ 'ಭಕ್ತಿ'ಗೆ ಪೂರ್ಣಾರ್ಥ ಲಭಿಸುತ್ತದೆ ಎಂಬ ಅಂತರ್‌ದೃಷ್ಟಿ ಈ ಕವಿತೆಯಲ್ಲಿದೆ.

ಭಕ್ತಿ, ದೈವಾನುಗ್ರಹ, ಆಧ್ಯಾತ್ಮಿಕ ಔನ್ನತ್ಯದಂತಹ ಅಮೂರ್ತ ಭಾವಗಳಿಗೆ ಕಲೆಯ ಆಕಾರ ಕೊಡುವುದು ವಿಸ್ಮಯಕಾರಿಯಾದ ಕಲೆಗಾರಿಕೆಯೇ ಸರಿ. ಎಕ್ಕುಂಡಿಯವರು ಈ ಕಥನ ಕವನದಲ್ಲಿ ಅದನ್ನು ಸಾಧಿಸಿದ್ದಾರೆ.

'ದೈವ ಸ್ಪರ್ಶಕ್ಕಷ್ಟೇ ಮಹತ್ವ ಕೊಡದೆ ಮನುಷ್ಯನ ಹುಡುಕಾಟ, ಯೋಗ್ಯತೆ, ಆಕಾಂಕ್ಷೆ ಮತ್ತು ಪ್ರಯತ್ನಗಳಿಗೂ ತಮ್ಮ ಕಾವ್ಯಲೋಕದಲ್ಲಿ ಜಾಗಕೊಡುತ್ತಾರೆ. ದೈವ ಮತ್ತು ಮಾನುಷಗಳೆರಡರ ನಡುವೆ ಸಂಘರ್ಷಕ್ಕೆ ಅವಕಾಶ ಕೊಡದೆ. ಅವೆರಡನ್ನು ಸಾಪೇಕ್ಷ ನಿಲುವಿನಲ್ಲಿ ಕೊಡಿಸುತ್ತಾರೆ...... ಹೀಗಾಗಿ ದೈವ ಮತ್ತು ಮಾನುಷಗಳೆರಡೂ ಆಪ್ತವಾಗಿ ಸದಸದ್ವಿವೇಕದಲ್ಲಿ ಕೂಡುತ್ತವೆ". * ೧ ವ್ಯಕ್ತಿಯ ಜೀವನಕ್ಕೆ ಭಕ್ತಿಯು ಈ ಬಗೆಯ ಧನ್ಯತೆಯನ್ನು ತಂದುಕೊಡುತ್ತದೆ ಎಂಬ ದರ್ಶನವು 'ಅತಿಥಿ' ಕವನದಲ್ಲಿ ಸಿಗುತ್ತದೆ.

ಕಡು ಲೋಭಿಯಾದ ಶ್ರೀನಿವಾಸ ನಾಯಕ ಆಕಸ್ಮಿಕಗಳಿಂದ ಹರಿಭಕ್ತನಾಗಿ, ಪುರಂದರ ದಾಸನಾಗಿ ಬಿಡುವ ಬೆರಗಿನ ವಸ್ತು 'ಅತಿಥಿ' ಮತ್ತು 'ಬುಟ್ಟಿ ಮತ್ತು ಬೀಗದ ಕೈ' ಗೀತೆಗಳದ್ದು. ಈ ಗೀತೆಗಳು ಭಕ್ತಿಯ ಕಾರಣಕ್ಕಾಗಿ ಪುರಾಣ, ಚರಿತ್ರೆ, ಸಮಕಾಲೀನ ವ್ಯಾಪ್ತಿಯ ವಿಸ್ತಾರ ಪಡೆಯುತ್ತವೆ. ಭಕ್ತಿಭಾವ ಪುರಾಣ ಕಾಲದ ಜನರಿಗಷ್ಟೇ ಸೇರಿದ್ದಲ್ಲ. ಈಗಿನವರಿಗೂ, ಮುಂದಿನ ಎಷ್ಟೋ ಪೀಳಿಗೆಗಳಲ್ಲೂ ಇರುವಂತಹ ಗುಣ! ಯಾಕೆಂದರೆ: ದೇವರು-ಧರ್ಮಗಳಿಲ್ಲದ ಸಮುದಾಯ ಜೀವನ ಭೂಮಿಯ ಮೇಲೆ ಒಂದು ಅಸಾಧ್ಯ ಸ್ಥಿತಿಯೇ ಹೌದು. ಈ ದೃಷ್ಟಿಯಿಂದ 'ಅತಿಥಿ' ಮತ್ತು 'ಬುಟ್ಟಿ ಮತ್ತು ಬೀಗದ ಕೈ' ಕವನಗಳಲ್ಲಿರುವ ಭಕ್ತಿ ನಿರೂಪಣೆಗೆ ಕವಿ ಸಾರ್ವಕಾಲಿಕ ಅರ್ಥ ತುಂಬಿದ್ದಾರೆ. ಇದೊಂದು ಅದ್ಭುತ ಕಲೆಗಾರಿಕೆ.

"ಅಂತರಂಗದ ತುಡಿತಕ್ಕೆ, ಕರೆಗೆ ಓಗೊಟ್ಟು ಸಾಧನೆಯ ಶಿಖರ ಏರಿದ ಚೈತನ್ಯವೊಂದರ ಸಂದೇಶ ತಲುಪಿಸುವುದರ ಕಡೆಗೇ ಇವರ ಗಮನ. 'ಅತಿಥಿ' ಮತ್ತು 'ಬುಟ್ಟಿ ಮತ್ತು ಬೀಗದ ಕೈ' ಕವಿತೆಗಳ ಕಥೆ ಒಂದೇ". * ೨

ಜೀವಮಾನವೆಲ್ಲ ತಕ್ಕಡಿ ತೂಗಿ ರತ್ನ ವ್ಯಾಪಾರ ಮಾಡಿ, ಒಂಭತ್ತು ಕೊಪ್ಪರಿಗೆಯಷ್ಟು ನಾಣ್ಯಗಳನ್ನು ಗಳಿಸಿ, ಗಳಿಸಿದ್ದನ್ನು 'ನೆಲಮನೆ'ಯಲ್ಲಿ ಮರೆಮಾಚಿ, ಆ ರಾಶಿಯನ್ನು ನೋಡಿ ಮುದ್ದಾಡಿ, ಹಿರಿಹಿರಿ ಹಿಗ್ಗುವುದರಲ್ಲಿ 'ಆಯುಷ್ಯರಾಶಿ'ಯನ್ನು ಕಳೆಯುತ್ತಾ, ಜೀವಮಾನವನ್ನು ನಿರರ್ಥಕವಾಗಿ ಮುಗಿಸುತ್ತಿದ್ದ ಶ್ರೀನಿವಾಸ ನಾಯಕರು ಅಂತರಂಗದ ಕರೆಗೆ ಓಗೊಟ್ಟಿದ್ದು ಆಕಸ್ಮಿಕ.

---

* ೧. ಮಲ್ಲೇಪುರಂ ಜಿ.ವೆಂಕಟೇಶ್ – ಎಕ್ಕುಂಡಿಯವರ ಕಾವ್ಯದಲ್ಲಿ ಪರಂಪರೆಯ ನೋಟ – ಪುಟ: ೧೦ – ೧೧
* ೨. ಜಿ.ಪಿ.ಬಸವರಾಜು – ಎಕ್ಕುಂಡಿಯವರ ಕಾವ್ಯ – ೧೯೯೬

“ಸೂರ್ಯ ಚಂದ್ರರ ದೀಪ ಉರಿದರೂ–ಕಾಣದು
ಅಂಬೆಗಾಲಿಡುವ ಮಗು ಕರೆದರೂ–ಕೇಳದು”

ಲೋಭಿಯಾದ ಜೀವಕ್ಕೆ ಯಾವುದೂ ಬೇಡವಾಗಿದೆ – ಕೂಡಿಡುವ ಲಾಲಸೆ ಬಿಟ್ಟು! ಆದ್ದರಿಂದ ಮಗುವಿನ ರೂಪದ ದೈವ ಮನೆಬಾಗಿಲಿಗೆ ಬಂದು ಮತ್ತೆ ಮತ್ತೆ,

“ಎತ್ತಿಕೊ! ಎತ್ತಿಕೊ! ಎತ್ತಿಕೊ ಕರೆದು
ಒಮ್ಮೆಯಾದರು ಎತ್ತಿಕೊ ಕದವ ತೆರೆದು” ಎಂದು ಆಗ್ರಹ ಪಡಿಸಿದರೂ, ಅತೀವ ಮೋಹವುಳ್ಳ ಜೀವದ ಬಾಹ್ಯ ಇಂದ್ರಿಯಗಳಿಗೆ ಕಾಣಿಸುವುದಿಲ್ಲ. ಆದರೆ ದೈವ ಆ ಕರೆಯನ್ನು ‘ಅಂತರಂಗದ ಕಿವಿ’ಗೆ ಕೇಳಿಸದೆ ಬಿಡುವುದಿಲ್ಲ. ಮಗುವಿನ ಕರೆ ತಾಯಿಯಾದವಳಿಗೆ ಕೇಳಿಸುತ್ತದೆ. ಆ ಕರೆಯಲ್ಲೇನೋ ವಿಶೇಷವಿದೆ ಎಂದು ಗಮನಿಸಿದ ಶ್ರೀನಿವಾಸ ನಾಯಕರ ಹೆಂಡತಿ, ಗಂಡನನ್ನು ನಯವಾಗಿ ತರಾಟೆಗೆ ತೆಗೆದುಕೊಳ್ಳುತ್ತಾಳೆ “ನಿಮಗೆಂಥ ಗ್ಲಾನಿ?” ಎಂದು.

ಅಂತರಂಗ ಕಲಕುವ ಅವಳ ಮಾತು ಶ್ರೀನಿವಾಸ ನಾಯಕರ ಬದುಕಿನ ‘ತಿರುವು ಬಿಂದು’ ಆಗಿಬಿಡುತ್ತದೆ. ಹೆಂಡತಿಯ ಪ್ರಿಯ ಮಾತುಗಳಿಂದ ಹಣದ ಹುಚ್ಚು ಇಳಿದು; ಕಲ್ಲು ಮನಸ್ಸು ಮೃದುವಾಗುತ್ತದೆ. ಲೌಕಿಕ ಲೋಭ – ಮೋಹಗಳು ಕರಗಿ, ಅಂತರಂಗದಲ್ಲಿ ಸುಪ್ತವಾಗಿದ್ದ ದೈವಿಕ ಒಲವು ಉದ್ದೀಪನಗೊಳ್ಳುತ್ತದೆ. ಆ ಅಂತರಂಗ ಪರಿವರ್ತನೆಯ ಸನ್ನಿವೇಶವನ್ನು ಕವಿ ತುಂಬಾ ನಾಟಕೀಯವಾಗಿ ಚಿತ್ರಿಸುತ್ತಾರೆ.

“ಕೊನೆಗೊಮ್ಮೆ ಯಜಮಾನ ಬಾಗಿಲಿಗೆ ಬಂದು
ಕರೆದುಕೊಳ್ಳುವೆ ಮಗುವ ಮನೆಯೊಳಗೆ ಎಂದು
ಕದವ ತೆರೆಯಲು ಕಾಣಲಿಲ್ಲ ಮಗು ಹೊರಗೆ”.

ಬಾಲಮುಕುಂದನ ಸ್ವರೂಪಿಯಾದ ದಿನವೂ ಕರೆಯುತ್ತಿದ್ದ ಮಗುವನ್ನು ಸ್ವಪ್ರೇರಣೆಯಿಂದ ಮನೆಯೊಳಗೆ ಆಹ್ವಾನಿಸಲು ಮುಂದಾಗುವ ಶ್ರೀನಿವಾಸ ನಾಯಕರಿಗೆ ಕಂಡಿದ್ದು; “ಶ್ರುತಿ ಹಿಡಿದ ತಂಬೂರಿ” ಮಾತ್ರ.

ಏನಾಶ್ಚರ್ಯ! ಆಗ ಶ್ರೀನಿವಾಸ ನಾಯಕರ ಮನಸ್ಸಿನ ಕತ್ತಲೆ ಹರಿದು, ಅಲ್ಲಿ ಬೆಳಕಿನ ಮಿಂಚಿನ ಸಂಚಾರವಾಗುತ್ತದೆ. ಬಾಗಿಲಲ್ಲಿದ್ದ ತಂಬೂರಿ ಕೈಗೆ ಬರುತ್ತದೆ. ಅದಕ್ಕಾಗಿ ಹಿಡಿಸಲಾರದಷ್ಟು ಹಿಗ್ಗು ಹೃದಯದಲ್ಲಿ ಮೂಡುತ್ತದೆ. ಆ ತಂಬೂರಿ ಸಾಮಾನ್ಯವಾದುದಲ್ಲ ‘ನಾದಲೋಕದ ಅತಿಥಿ’.

“ನಾದಲೋಕದ ಅತಿಥಿ ಬರಲು ಮನೆಯೊಳಗೆ
ಮರುದಿನವೆ ಯಜಮಾನ ನಡೆದಿದ್ದ ಹೊರಗೆ”

ಶ್ರೀನಿವಾಸ ನಾಯಕರು ಪುರಂದರ ದಾಸರಾಗಿ ರೂಪಾಂತರ ಪಡೆದ ಉತ್ಕಟ ಸನ್ನಿವೇಶವಿದು. ಎಲ್ಲವೂ ಆಕಸ್ಮಿಕವೆಂಬಂತೆ ನಡೆದು ಹೋಗುತ್ತದೆ. ಲೋಭಿಯೊಬ್ಬ ವಿರಕ್ತನಾಗಿ ವಿಕಾಸ ಪಡೆಯುವ ಅದ್ಭುತ ಕ್ರಿಯೆಯಿದು.

ಮುಂದೆ ಪುರಂದರರು, ಲೌಕಿಕ ಸಂಪತ್ತು – ಸಂಸಾರ ಸುಖ ತೊರೆದು, ಹರಿಕೀರ್ತನೆ ಮಾಡುತ್ತ ನಾಡಿನ ಉದ್ದಗಲಕ್ಕೂ ಸಂಚರಿಸಿ, ಭಕ್ತಿಭಾವದ ಕೊಪ್ಪರಿಗೆ ಹಣಕ್ಕಿಂತಲೂ ಅಮೂಲ್ಯ ನಿಧಿಯಾದ 'ಕೀರ್ತನೆ'ಗಳ ಮೂಲಕ 'ಹರಿ'ಯನ್ನು ಕೀರ್ತಿಸಿದ್ದಾರೆ. 'ದೇವರು ವೇದ ಪ್ರಿಯ ಅಲ್ಲ ನಾದಪ್ರಿಯ' – ಎಂಬ ನಾಣ್ನುಡಿಯು ಪುರಂದರರ ಜೀವನದ ಔನ್ನತ್ಯದಲ್ಲಿ ನಿಜವಾಗಿದೆ. ಸಾಮಾನ್ಯವಾಗಿ ಮಾನವರ ಅಂತರಂಗದಲ್ಲಿ ಸದಾ ತುಡಿಯುವುದು ಲೌಕಿಕ ಭೋಗದ 'ಅನುರಕ್ತಿ'. ಈ ಅನುರಕ್ತಿಯ ನಿಸ್ಸಾರತೆಯ ಅರಿವು ಮೂಡಿಸುವ ಶಕ್ತಿ ಇರುವುದು 'ದೈವ'ಕ್ಕೆ ಮಾತ್ರ. 'ಭಕ್ತಿ'ಯು ಹೀಗೆ ಪುರಂದರರ ಜೀವನದಲ್ಲಿ 'ನಾದಲೋಕ ತಂಬೂರಿ'ಯ ರೂಪ ಧರಿಸಿ ಬರುತ್ತದೆ.

ಸಾಮಾನ್ಯವಾಗಿ ಅತಿಥಿಗಳು ಹೊರಗಿನವರಾಗಿರುತ್ತಾರೆ. ಅದರಂತೆ ಪುರಂದರರ ಪೂರ್ವ ಜೀವನದ ವಿವರಗಳಲ್ಲಿ 'ದೈವ ಭಕ್ತಿ'ಯು, ಲಾಭದ ಆಸೆಯಿಂದ ಉದ್ದೇಶ ಪೂರ್ವಕವಾಗಿ ಹೊರಗಿದ್ದ ವ್ಯಕ್ತಿಯಾಗಿರುತ್ತದೆ ಅಷ್ಟೆ. ಈ ಪ್ರಮಾದವನ್ನು ತಿಳಿಯಪಡಿಸಲು ಶ್ರೀನಿವಾಸ ನಾಯಕರಿಗೆ 'ಹೆಂಡತಿ'ಯ ಸಲಹೆಗಳು, ಆಗ್ರಹಗಳು ನೆಪವಾಗಬೇಕಾಯಿತು. ಹಿಂದೆ ಆಗಿರುವ ಪ್ರಮಾದವನ್ನು ಸರಿಪಡಿಸಿಕೊಳ್ಳುತ್ತಾರೆ – ಪುರಂದರರು ನಾದಲೋಕದ ಅತಿಥಿಯನ್ನ ಬರಮಾಡಿಕೊಳ್ಳುವುದರ ಮೂಲಕ.

'ಬುಟ್ಟಿ ಮತ್ತು ಬೀಗದ ಕೈ' – ಕವಿತೆಯ ಘಟನಾವಳಿಗಳು, 'ಅತಿಥಿ' ಕವನದ ಘಟನಾವಳಿಗಳು–ಭಾವಗಳು ಬೇರೆ ಬೇರೆ ಅಲ್ಲ. ಆದರೆ ಪುರಂದರ ಜೀವನದ ಔನ್ನತ್ಯದ ಆಕರ್ಷಣೆಯಿಂದಾಗಿ, ಕೃಷ್ಣ ಭಕ್ತಿಯಿಂದಾಗಿ ಅದು ಕವಿ ಎಕ್ಕುಂಡಿಯವರಲ್ಲಿ ದಣಿಯದ ಉತ್ಸಾಹವಾಗಿ ಉಳಿದು ಬಿಟ್ಟಿದೆ. ಹೀಗಾಗಿ ಭಿನ್ನ ಭಿನ್ನ ವರ್ಣನೆ, ನಿರೂಪಣೆಗಳ ಮೂಲಕ ಆ ಉತ್ಸಾಹಕ್ಕೆ ತಣಿವನ್ನು ತಂದಿದ್ದಾರೆ.

ಅತಿಥಿಯಲ್ಲಿ ಮುಕ್ತಿಯ ಸಾಧನವಾಗಿ ತಂಬೂರಿಯ ಪ್ರತಿಮೆಯಿದ್ದರೆ, 'ಬುಟ್ಟಿ ಮತ್ತು ಬೀಗದ ಕೈ' ಕವಿತೆಯಲ್ಲಿ ಮುಕ್ತಿ ನೆಲೆಯ ಕದವ ತೆರೆವ ಸಾಧನಗಳಾಗಿ ಕೀಲಿಕೈ, ಬುಟ್ಟಿಗಳ ಪ್ರತಿಮೆಗಳು ಸೃಷ್ಟಿಯಾಗಿವೆ. ಬ್ರಾಹ್ಮಣರು ಮತು ಹೆಂಡತಿಯ ರೂಪದಲ್ಲಿ ಮುಚ್ಚಿದ್ದ ಅಂತರಂಗದ ಕದವು ತೆರೆಯುತ್ತದೆ.

"ಅಕ್ಷಯದ ಅಕ್ಷರದ ನಿಧಿಯ ಸುರಿದು

ಬೆರಳುಗಳ ಬುಟ್ಟಿಯನು ತುಂಬಿರಲು"

ನಾಯಕರಿಗೆ ಜ್ಞಾನೋದಯವಾಗುತ್ತದೆ.

"ಹೊಂಬೆಳಗು ಕಾದಿಹವು ನಮ್ಮ ನುಡಿಗೆ" ಎಂದು ತನ್ನ ಶ್ರೇಷ್ಠ ದಾರ್ಶನಿಕ ಜೀವನಕ್ಕೆ ಸಾಧನವಾದ ಹೆಂಡತಿಯ ಆತ್ಮ ಪ್ರಕಾಶದ ಮಾತುಗಳಿಂದ ತನ್ನಲಾಗಿರುವ ಪರಿವರ್ತನೆಗೆ ಸಾಕ್ಷ್ಯ ಒದಗಿಸುತ್ತಾರೆ.

ಹೀಗೆ ಭಕ್ತಿಗೆ ವಿಶಿಷ್ಟವಾದ ಅಲೌಕಿಕಾರ್ಥಗಳನ್ನ ತುಂಬುವ ಎಕ್ಕುಂಡಿಯವರ 'ಹಾವಾಡಿಗರ ಹುಡುಗ', 'ಅತಿಥಿ', 'ಬುಟ್ಟಿ ಮತ್ತು ಬೀಗದ ಕೈ' – ಕವನಗಳು ಪುರಂದರ ದಾಸರ ಅದ್ಭುತ ಚರಿತದ ಚಿತ್ರಣ ನೀಡುವ ಮೂಲಕ ಭಕ್ತಿಗೆ ಕಲೆಯ ಸಹಜ ಚೆಲುವನ್ನು ಮೂಡಿಸಿವೆ.

" ಅಂತರಂಗದ ಹೂವನಿತ್ತರೇ ತನ್ನನೆ ತಾನೀವನು" ಎಂಬ ಭಕ್ತಿಲೋಕದ ಗಾಢ ನಂಬಿಕೆಯನ್ನೂ ನಿಜ ಮಾಡಿಸುವ ಆಶಯವುಳ್ಳ 'ಗಜೇಂದ್ರ ಮೋಕ್ಷ' ಕವನವು, ಶಾಪ ಗ್ರಸ್ತನಾದ ಭಕ್ತನೊಬ್ಬ ತನ್ನ ನಿರ್ಮಲ ಭಕ್ತಿಯಿಂದ ಶಾಪ ವಿಮೋಚನೆ ಪಡೆದ ಕಥೆಯನ್ನು ವರ್ಣಿಸುತ್ತದೆ. ಪೂರ್ವ ಜನ್ಮದಲ್ಲಿ ಇಂದ್ರದ್ಯುಮ್ನ – ಅಗಸ್ತ್ಯ ಮಹರ್ಷಿಯನ್ನು ಗೌರವಿಸದ ಕಾರಣಕ್ಕೆ 'ಗಜೇಂದ್ರ'ನಾಗುವ ಶಾಪ ಹೊರುತ್ತಾನೆ. ಗಜೇಂದ್ರ ಜನ್ಮದಲ್ಲಿ ಆನೆಗೆ ಸಹಜವಾದ ನೀರಾಟದಲ್ಲಿದ್ದಾಗ ಮೊಸಳೆಯೊಂದು ಅದರ ಕಾಲುನುಂಗಿ ತೀವ್ರ ಸಂಕಷ್ಟಕ್ಕೆ ಗುರಿಯಾಗಬೇಕಾಗುತ್ತದೆ.

"ಕೂಗಿ ಕರೆಯಿತು ಬನದ ಗಜಗಳ ಯಾರು ಬರುವಿರಿ ನೆರವಿಗೆ" ಈ ಆರ್ತಕೂಗಿಗೆ ದೊರೆತದ್ದು 'ಕಾಡಿನ ಮೌನ'ದ ಪ್ರತಿಕ್ರಿಯೆ ಮಾತ್ರ. ಸಾವು ಸಮೀಪಿಸಿತು ಎನ್ನುವ ಹೊತ್ತಿನಲ್ಲಿ ಆನೆ ಕಣ್ಣೀರು ಸುರಿಸುತ್ತ, ಪೂರ್ವ ಸಂಸ್ಕಾರ ಬಲದಿಂದ ವಿಷ್ಣುವನ್ನು ಸ್ಮರಿಸಿ,

"ಬಾರೊ ಕರುಣಾನಿಧಿ ಕೇಶವ

ಬಾರೊ ಮಾಧವ ಸಲಹು ಬಾ" ಎಂದು ಮೊರೆಯಿಡುತ್ತದೆ.

ಕೊಳದ ತಾವರೆಯನ್ನು ಹಿಡಿದು ಕೂಗಿದ ಆನೆಯ ಅಂತಃಕರಣದ ಭಕ್ತಿಗೆ ತೃಪ್ತನಾಗಿ ಶ್ರೀ ಹರಿಯು ಚಕ್ರಧಾರಿಯಾಗಿ ಆನೆಯಿದ್ದಲ್ಲಿಗೆ ಬಂದು, ಮೊಸಳೆಯನ್ನು ಕತ್ತರಿಸುತ್ತಾನೆ. ಗಜೇಂದ್ರನನ್ನು ಅಪ್ಪಿಕೊಂಡು ಅದರ ಶಾಪ ವಿಮೋಚನೆಗೆ ಕಾರಣನಾಗುತ್ತಾನೆ.

ನಿರ್ಮಲ ಭಕ್ತಿಯ ಪ್ರತೀಕವಾಗಿ 'ಅಂತರಂಗದ ಹೂವನಿತ್ತರೆ ಸಾಕು ದೇವರು ಒಲಿದು, ಉದ್ಧರಿಸಲು ಭಕ್ತರ ಬಳಿಗೇ ಬರುವ ಕರುಣಾನಿಧಿ' ಎಂಬ ಅನುಭವ ಈ ಸಂದರ್ಭದಲ್ಲಿ ಮೂಡುತ್ತದೆ.

ಗಜೇಂದ್ರನ ದಯನೀಯ ಸ್ಥಿತಿ, ಮೊಸಳೆಯ ಕ್ರೌರ್ಯ, ದೈವದ ಕಾರುಣ್ಯಗಳನ್ನು ವರ್ಣಿಸಲು ತಕ್ಕುದಾದ ಪದ ಪ್ರಯೋಗದಲ್ಲಿ ಕವಿ ಯಶಸ್ವಿಯಾಗಿದ್ದಾರೆ. ಇದು ಈ ಕವನದ ಯಶಸ್ಸು ಕೂಡ

ಆಗಿದೆ.

'ಕುಚೇಲೋಪಖ್ಯಾನ'ವು ಕೃಷ್ಣ ಭಕ್ತಿಗೆ ಸಂದ ದಿಗ್ವಿಜಯವನ್ನು ವರ್ಣಿಸುತ್ತದೆ. ಕಡು ಬಡವನಾದ ಕುಚೇಲ ಮತ್ತು ಶ್ರೀಕೃಷ್ಣರಿಬ್ಬರೂ ವಿದ್ಯಾಭ್ಯಾಸ ಕಾಲದಲ್ಲಿ ಪರಮಾಪ್ತರು. ಇದರಿಂದಾಗಿ ಅವರಿಬ್ಬರ ನಡುವೆ ಸೋದರ ಪ್ರೀತಿ ಬೆಳೆಯುತ್ತದೆ.

ವಿದ್ಯಾಭ್ಯಾಸದ ನಂತರ ಅವರಿಬ್ಬರೂ ಬೇರ್ಪಟ್ಟು, ಕೃಷ್ಣ ದ್ವಾರಕೆಗೆ ಹೋಗುತ್ತಾನೆ. ಕುಚೇಲ ತನ್ನ ಬಡ ಕುಟೀರದಲ್ಲಿ ವಾಸಿಸುತ್ತಾನೆ. ಬಡತನಕ್ಕೆ ತಕ್ಕಂತೆ ಅಧಿಕ ಮಕ್ಕಳು. ಹೀಗೆ ಸಂಸಾರ ನಡೆಸುತ್ತಿರುತ್ತಾನೆ.

ಇದ್ದಕ್ಕಿದ್ದಂತೆ ಜಡಿಮಳೆ ಸುರಿದು ಮುರುಕು ಗುಡಿಸಲು ಮಳೆಯಲ್ಲಿ ತೋಯ್ದು ತಪ್ಪಡಿಯಾಗುತ್ತದೆ. ಧೋ ಎಂದು ಸುರಿಯುವ ಸುರಿಮಳೆಗೆ ತತ್ತರಿಸಿ ಹೆಂಡತಿ, ಮಕ್ಕಳು ಕಂಗಾಲಾಗುತ್ತಾರೆ. ಕುಚೇಲ ಮಾತ್ರ ಅದು ಸಮಸ್ತ ಲೋಕ ಹಿತಕ್ಕಾಗಿ ಸುರಿಯುತ್ತಿದೆ ಎಂದು ಭಾವಿಸಿ

"ಇದು ಭಾಗ್ಯವಿದು ಭಾಗ್ಯವಿದು ಭಾಗ್ಯವೆಮಗೆ
ಮುಗಿಲ ಕಪಿಲೆಯು ಕರೆಯುತಿಹುದು ಮನೆಯೊಳಗೆ" ಎಂದು

ಹೃದಯ ಶ್ರೀಮಂತಿಕೆ ಪ್ರದರ್ಶಿಸುತ್ತಾನೆ.

ಹಿಂದೆ ಗುರುಕುಲದಲ್ಲಿದ್ದಾಗ ಕೃಷ್ಣ–ಕುಚೇಲರು ಮಳೆಗೆ ಸಿಕ್ಕಿ ಅನುಭವಿಸಿದ ಕಡು ಕಷ್ಟಕ್ಕಿಂತ ಎಷ್ಟೋ ವಾಸಿ ಎಂಬ ಸಮಾಧಾನದ ಚಿತ್ತ ಕುಚೇಲನದು ಆದರೆ ಮಡದಿ–ಮಕ್ಕಳು ಮಳೆಯಿಂದಾಗಿ ಕಷ್ಟವನ್ನು ಸಹಿಸಲಾರರು. ಶ್ರೀಕೃಷ್ಣನ ಸಹಾಯಕ್ಕಾಗಿ ಆಗ್ರಹಿಸುತ್ತಾರೆ. ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದ ಕುಚೇಲ ಒಮ್ಮೆ ಕೃಷ್ಣನನ್ನು ನೋಡಿಬರಲು ಮನಸ್ಸು ಮಾಡುತ್ತಾನೆ.

ಬಹಳ ದಿನದ ನಂತರ ಸ್ನೇಹಿತನ ಭೇಟಿಗಾಗಿ ಹೋಗುತ್ತಿರುವ ಕುಚೇಲ ಸುಮ್ಮನೆ ಹೋಗುವುದಿಲ್ಲ. "ಬೇಡಿ ತಂದೆರಡು ಹಿಡಿಭತ್ತವನ್ನು ಕುಟ್ಟಿ" ಆತನ ಹೆಂಡತಿಯು ಅವಲಕ್ಕಿ ಗಂಟು ಕಟ್ಟಿ ಕಳುಹಿಸುತ್ತಾಳೆ. ಕುಚೇಲ ದ್ವಾರಕೆ ಹಾದಿ ಹಿಡಿದು ಹೊರಡುತ್ತಾನೆ. ದೀರ್ಘವಾದ 'ದ್ವಾರಕಾ ಪಯಣ'ವು ಕುಚೇಲನಿಗೆ ಶ್ರೀಕೃಷ್ಣನ ವೈಭವದ, ಅಲ್ಲಿನ ಜೀವನದ ಶ್ರೀಮಂತಿಕೆಯನ್ನು ಚೆನ್ನಾಗಿಯೇ ದರ್ಶಿಸುತ್ತದೆ.

ಕೊನೆಗೂ ಶ್ರೀಕೃಷ್ಣನ ಅರಮನೆ ತಲುಪುತ್ತಾನೆ ಕುಚೇಲ. ಆದರೆ ಇವನ 'ಜೀರ್ಣಾವಸ್ಥೆ'ಯ ಬಟ್ಟೆಗಳನ್ನು ನೋಡಿ ಕೃಷ್ಣನ ಸಹಪಾಠಿ ಎಂದರೂ ನಂಬದೆ ದ್ವಾರಪಾಲಕರು ಪ್ರವೇಶಕ್ಕೆ ತಡೆಯೊಡ್ಡುತ್ತಾರೆ. ದಣಿದು ಬಂದ ಕುಚೇಲನ ಆರ್ತ ಕರೆಗೆ ಶ್ರೀಕೃಷ್ಣ ಓಡೋಡಿ ಬರುತ್ತಾನೆ.

ಸ್ನೇಹಿತ ಕುಚೇಲನನ್ನು ಕಂಡ ಕೃಷ್ಣ ನಿಡಿದೋಳು ನೀಡಿ ಬಾಚಿ ತಬ್ಬಿಕೊಂಡು, ಕಣ್ತುಂಬಿ ನಲಿಯುತ್ತಾನೆ.

ಆದರ ಸತ್ಕಾರಗಳಿಂದ ತೃಪ್ತನಾದ ಕುಚೇಲನ ಬಳಿಯಿದ್ದ ಹರಕು ಗಂಟನು ಕಂಡು 'ಅತ್ತಿಗೆಯು ಕಳಿಸಿರುವ ಕಾಣಿಕೆಯನ್ನು ತಾ' ಎಂದು ಅದರಲ್ಲಿದ್ದ ಅವಲಕ್ಕಿ ಪಡೆದು ಸವಿಯುತ್ತಾನೆ. ಇದು ಶ್ರೀಕೃಷ್ಣನಿಗೂ ಭಾಗ್ಯವಾಗುತ್ತದೆ.

ಅರಮನೆಯ ಸತ್ಕಾರ ಪಡೆದು ಹಿಂತಿರುಗಿದ ಕುಚೇಲ ಕೃಷ್ಣನ ದಿವ್ಯ ಸ್ಮರಣೆಯಲ್ಲೇ ಮನೆಗೆ ಬರುತ್ತಿದ್ದಾನೆ. ಮೊದಲಿನ ಗುರುತೇ ಸಿಕ್ಕದಂತೆ ಅವನ ಗುಡಿಸಲು ಅರಮನೆಯಾಗಿ ಪರಿವರ್ತನೆಗೊಂಡಿರುತ್ತದೆ. ಮನೆಗೆ ಬಂದ ಕುಚೇಲನಿಗೆ ಮುತ್ತು ರತ್ನ ಧರಿಸಿದ, ಪೀತಾಂಬರವುಟ್ಟ ಮಡದಿ ಮಕ್ಕಳು ಎದುರಾಗುತ್ತಾರೆ. ಮುತ್ತಿನಾರತಿಯ ಸ್ವಾಗತ ಸಿಗುತ್ತದೆ.

"ಶ್ರೀ ಕೃಷ್ಣನನ್ನು ಸ್ಮರಿಸಿ
ಹೃತ್ಕಮಲದಲಿ ದಿವ್ಯ ನೆನಪುಗಳನಿರಿಸಿ
ಇದು ಭಾಗ್ಯವಿದು ಭಾಗ್ಯ, ಶ್ರೀ ಹರಿಯ ಕರುಣೆ
ಪದುಮನಾಭನ ಪಾದ ಪದುಮಗಳ ಸ್ಮರಣೆ" ಎಂಬ ಸಮಚಿತ್ತ

ಪ್ರದರ್ಶಿಸುತ್ತಾನೆ.

ಸ್ನೇಹರೂಪಿಯಾದ ಗುಪ್ತಭಕ್ತಿಗೆ ಸಂದ ದಿವ್ಯ ಫಲ ಎಂಬಂತೆ ಸುಧಾಮನ ಬಡತನದ ಬದುಕು ಕೊನೆಗೆ ಸಮೃದ್ಧಿಯ ಔನ್ನತ್ಯವನ್ನು ತಲುಪುವುದು ಭಗವಂತನ ಔದಾರ್ಯದಿಂದ ಎಂಬ ತಿಳಿವಳಿಕೆ ಕಥನದಿಂದ ಮೂಡುತ್ತದೆ.

ಸುಪ್ರಸಿದ್ಧ ಕುಚೇಲ–ಕೃಷ್ಣರ ಸ್ನೇಹದ ಕಥೆಯನ್ನು ಎಕ್ಕುಂಡಿಯವರು ಸನ್ನಿವೇಶಕ್ಕೆ ತಕ್ಕಂತೆ ಚೊಕ್ಕವಾಗಿ ನಿರ್ವಹಿಸಿದ್ದಾರೆ. ಭಕ್ತಿ–ಭಗವಂತರ ನಡುವೆ ಅಂತರಗಳಿಲ್ಲ ಎಂಬ ವಸ್ತುಸ್ಥಿತಿ ನಿರ್ಮಿಸಲು ಹದವಾದ ಭಾವ–ಭಾಷೆಗಳ ಬಳಕೆ ಮಾಡುವಲ್ಲಿ ಕವಿ ಯಶಸ್ವಿಯಾಗಿದ್ದಾರೆ.

ಮುಗ್ಧ ಭಕ್ತಿಯ ವಿಶಿಷ್ಟಾನುಭವಕ್ಕೆ ಹೆಸರಾದ 'ಶಬರಿ'ಯ ಕಥೆ ಎಲ್ಲರಿಗೂ ಚಿರಪರಿಚಿತವಾದುದು. ಕಾಡಿನಲ್ಲಿ ವಾಸಿಸುತ್ತಿರುವ ಮುಗ್ಧ ಹೃದಯದ ಶಬರಿ, ಬಹಳಷ್ಟು ಕಾಲ ರಾಮನ ದರ್ಶನಕ್ಕಾಗಿ ಹಂಬಲಿಸುತ್ತಾ, ಆತನ ಆಗಮನವನ್ನೇ ಪ್ರತಿದಿನವೂ ಪ್ರತೀಕ್ಷೆ ಮಾಡುತ್ತಿದ್ದಾಳೆ. ಇವಳ ರಾಮ ಭಕ್ತಿಯಿಂದ, ಅವಳ ಉದ್ಗಾರದಿಂದ ಅವಳಿದ್ದ ಇಡೀ ಪರಿಸರವೇ ಪ್ರಭಾವಗೊಂಡು ಶ್ರೀರಾಮ ಸ್ಮರಣೆಯನ್ನು ಪ್ರತಿಧ್ವನಿಸುತ್ತದೆ.

ಕವಿ ಎಕ್ಕುಂಡಿಯವರು ಕಾಡಿನ ದಿವ್ಯ ಮೌನದ ನಡುವೆ ಅನುರಣಿಸುತ್ತಿರುವ ಶಬರಿಯ ಭಕ್ತಿಯ ಚಿತ್ರಣ ನೀಡುತ್ತಿರುವ ಪರಿಯೇ ವಿಶಿಷ್ಟವಾಗಿದೆ. ಅಲ್ಲಿಯ ಸಮಸ್ತ ಗಿಡ-ಮರ, ಪಶು-ಪಕ್ಷಿಗಳ ಪ್ರತಿ ಸ್ಪಂದನದಲ್ಲಿ ಕಾಡಿಗೆ ಕಾಡೇ ಹಾಡಿದ ಅನುಭವವಾಗುತ್ತದೆ. ಕೊನೆಗೂ ರಾಮ ಶಬರಿಯ ಉತ್ಕಟ-ಮುಗ್ಧ ಭಕ್ತಿಗೆ ಒಲಿದು ಆಕೆಯಿದ್ದ ಸ್ಥಳಕ್ಕೆ ಆಗಮಿಸುತ್ತಾನೆ.

ಆ ಆಗಮನದ ಚಿತ್ರವು

"ಕಾಡಿನೊಲವ ಕೈಕೊಳ್ಳುತ ಬಂದನು ಕಾಡಿಗೆ ಶ್ರೀರಾಮ"

ಎಂಬ ಮಾತುಗಳಲ್ಲಿ ಸೊಗಸಾಗಿ ಮೂಡಿಬಂದಿದೆ. ಶಬರಿಯ ಪ್ರತೀಕ್ಷೆಯಂತೆ ರಾಮಾಗಮನ - ವಾಗುತ್ತದೆ.

"ತಿಳಿದ ಕಣ್ಣಿನಲ್ಲಿ ಹೊಳೆದ ಬೆಳಗು ಮೈತಳೆದು ಬಂದಿರಿಂದು"

ಎಂದು ತನಗಾದ ಆನಂದಾತಿಶಯಗಳನ್ನು ಮನದುಂಬಿ ಬಣ್ಣಿಸಿದ ಮೇಲೆ, ತನ್ನ ಭಕ್ತಿಯ ಕಾಣಿಕೆಯಾಗಿ ತಾನೇ ರುಚಿನೋಡಿ ಆಯ್ದ ಹಣ್ಣುಗಳನ್ನು ರಾಮನಿಗೆ ಅರ್ಪಿಸುತ್ತಾಳೆ.

"ಭಕ್ತ ವತ್ಸಲನು ತಿಂದನೆಂಜಲನು ಬುಟ್ಟಿ ತುಂಬ ಹಣ್ಣು
ನೋಡುತ್ತಿತ್ತು, ಹನಿಗೂಡುತ್ತಿತ್ತು, ಲಕ್ಷ್ಮಣನ ಬೆರಗುಗಣ್ಣು"

ಲಕ್ಷ್ಮಣನಿಗೆ ಆ ವಿಲಕ್ಷಣ ಭಕ್ತಿ ಕಂಡು ಬೆರಗು!

"ಭಕ್ತ ವತ್ಸಲನ ಕರುಣೆ ಪ್ರೀತಿಗಳಿಗಿಲ್ಲ ಅಂತಪಾರ
ಒಲಿದು ಬಂದನಿವ, ತಿಂದನೆಂಜಲವ, ಒಲಮೆಗೆ ಎಂಜಲಿಲ್ಲ"

ಭಕ್ತಿಯ ಪರಾಕಾಷ್ಠೆಯ ಚಿತ್ರಣ ಇಲ್ಲಿದೆ.

ಶಬರಿಯ ಮುಗ್ಧ ಭಕ್ತಿ ನಿರೂಪಣೆಗೆ ಕವಿ ಅನುಸರಿಸುವ ವರ್ಣನಾ ವಿಧಾನ ಆಕರ್ಷಕವಾಗಿದೆ. ಕಥೆ ಹಳೆಯದಾದರೂ ಕವಿತೆಯು ನಿರ್ಮಿಸುವ 'ಭಾವಸಂಪುಟ' ಭಕ್ತಿಯ ಭವ್ಯತೆಯನ್ನು ಚೆನ್ನಾಗಿ ಧ್ವನಿಸುತ್ತದೆ. ಈ ಕಾರಣಕ್ಕಾಗಿ ಇದು ಎಂದಿಗೂ ಮನೋಹರವಾದ ಕಥನ.

ಶಬರಿಯ ಮುಗ್ಧಭಕ್ತಿಯ ಚಿತ್ರಣದಂತೆಯೇ 'ಕುಬ್ಜಾಂಗನಾ' - ಕವಿತೆಯು, ಶುದ್ಧಾಂತಃಕರಣದ ಸೇವೆಯಿಂದ ತನ್ನ ವಕ್ರತೆಯನ್ನು ಕಳೆದುಕೊಂಡು, ದಿವ್ಯ ಸೌಂದರ್ಯ ಧಾರಣ ಮಾಡುವ ಪ್ರಸಂಗವನ್ನು ನಿರೂಪಿಸುತ್ತದೆ.

ಕಂಸನ ದಾಸಿ ಕುಬ್ಜಾಂಗನಾ. ಕಂಸನಿಗಾಗಿ ಚಂದನವನ್ನು ಕೊಂಡೊಯ್ಯುವ ಹೊತ್ತಿನಲ್ಲಿ ಆಕೆಗೆ ಶ್ರೀಕೃಷ್ಣನ ದರ್ಶನವಾಗುತ್ತದೆ. ತ್ರಿವಕ್ರ ರೂಪದ, ಜನ್ಮಾಂತರದ ವಿಕಾರಗಳಿಂದ

ಕುಬ್ಜಾಂಗನೆಯಾಗಿರುವ ಅವಳು,

"ಪ್ರಕೃತಿಯ ದಿಗ್ಬಂಧನಗಳ ಮರೆಗೆ
ಪಲ್ಲಟಿಸುವ ಸುಖ ದುಃಖದ ಕರೆಗೆ
ದೈವದ ದಾರುಣ ಸೆರೆಗೆ
ಕಳವಳಿಸುವ ಮಾನವ ಜೀವನದಾಕ್ರಂದನಂತೆ"

ಶ್ರೀಕೃಷ್ಣನಿಗೆ ಕಾಣಿಸುತ್ತಾಳೆ. ಅವಳ ದೈನ್ಯತೆ, ಕಣ್ಣೀರು, ಮೂಕವೇದನೆಗಳು ಅವನ ಅಂತರಂಗವನ್ನು ಕಲಕುತ್ತವೆ. ಕ್ರಮೇಣ ಅವಳ ಸೇವಾ ವೃತ್ತಿಯ ಪರಿಚಯವಾಗುತ್ತದೆ. ತನ್ನ ವಿಷಾದ ಪೂರ್ಣ ಬದುಕಿನ ನಿರರ್ಥಕ ಸೇವೆಯ

"ವಿಷವಡವಾಗ್ನಿಯ ದೈತ್ಯ ಶರೀರಕೆ
ಚಂದನ ಲೇಪನ ಫಲವೇನು?"

ಎಂಬ ಕುಬ್ಜಾಂಗನೆಯ ಮಾತುಗಳು ಅವಳ ಬದುಕಿನ ಯಥಾಸ್ಥಿತಿಯನ್ನು ಧ್ವನಿಸುತ್ತಿವೆ. ಕೃಷ್ಣನನ್ನು ಮನದುಂಬಿ ಹಾಡಿ, ಕಂಸನ ಸೇವೆಗಾಗಿ ತಂದಿದ್ದ ಶ್ರೀಗಂಧವನ್ನು ಶ್ರೀಕೃಷ್ಣನಿಗೆ ಲೇಪಿಸಿಬಿಡುತ್ತಾಳೆ. ಅವಳ ದೀನಾವಸ್ಥೆಗೆ ಕೃಷ್ಣ ಕನಿಕರಿಸಿ,

"ಕಳವಳಿಸದಿರೇ ಕುಬ್ಜಾಂಗನೆ
ನಾ ಬಂದುದೆ ಬಿಡುಗಡೆಗಾಗಿ"– ಎಂದು ಹೇಳಿ ಆಕೆಯನ್ನು ಆಲಂಗಿಸಿತ್ತಾನೆ.

ಶ್ರೀಕೃಷ್ಣನ ಕಾರುಣ್ಯದ ಆ ದಿವ್ಯ ಸ್ಪರ್ಶದಿಂದ ಆಕೆಯ ತ್ರಿವಕ್ರತೆ ಮಾಯವಾಗಿ ಅಪ್ಸರೆಯಂತಾಗಿ ಬಿಡುತ್ತಾಳೆ! ದೈವದ ಸಂಸರ್ಗದಿಂದ ಪುನೀತಗೊಂಡು, ಶಾಪ ಅಳಿಯುತ್ತದೆ. ಕುಬ್ಜಾಂಗನೆಯ ಬಿಡುಗಡೆಯ ಹಂಬಲವನ್ನು ಪತಿತೋದ್ಧಾರಕನಾದ ಶ್ರೀಕೃಷ್ಣ ಈಡೇರಿಸುತ್ತಾನೆ. ಭಕ್ತರ ಆಕ್ರಂದನ, ನೋವುಗಳು ದೈವಾನುಗ್ರಹದಿಂದ ನಾಶವಾಗುತ್ತವೆ ಎಂಬ ಸರಳ ನಂಬಿಕೆಯ ತರ್ಕವನ್ನು ಈ ಕವನವು ಸಮರ್ಥವಾಗಿ ಹಿಡಿದಿಟ್ಟಿದೆ.

ಕಂಸನ ಕ್ರೌರ್ಯ, ಅವನ ಸೇವೆಯಿಂದೊದಗುವ ವಿಷಾದ, ಸಾರ್ಥಕ ಸೇವೆಗೆ ಸಲ್ಲುವ ಪ್ರತಿಫಲಗಳ ಮುಖಾಮುಖಿಯ ಚಿತ್ರಣ ನೀಡುವಲ್ಲಿ ಕವಿ ಸಫಲರಾಗಿದ್ದಾರೆ. ಇಲ್ಲಿನ ಭಾವ ಸಂವಹನಕ್ಕೆ ಸೂಕ್ತವಾದ ಭಾಷೆ, ಅಲಂಕಾರಗಳ ಬಳಕೆಯಿಂದಾಗಿ ಕಥನಕ್ಕೆ ಸಾಹಿತ್ಯಕ ಸೊಗಸು ತಾನಾಗಿಯೇ ಒದಗಿ ಬಂದಿದೆ.

ಅತಿಥಿ ಕವಿತೆಯಲ್ಲಿ ಐತಿಹಾಸಿಕ ವ್ಯಕ್ತಿ ಶ್ರೀನಿವಾಸ ನಾಯಕರು ಪುರಂದರದಾಸರಾದ ವಿಶಿಷ್ಟ ಬಗೆಯನ್ನು ವರ್ಣಿಸಿದ್ದರೆ, ಪುರಂದರ ದಾಸರ ಸಮಕಾಲೀನರಾದ ಕನಕದಾಸರ ಕೃಷ್ಣ

ಭಕ್ತಿಯನ್ನು 'ಭಗವಂತನು ನೀರೆರೆದನು' ಕವಿತೆಯಲ್ಲಿ ಎಕ್ಕುಂಡಿಯವರು ನಿರೂಪಿಸಿದ್ದಾರೆ. ಕನಕದಾಸರ ಭಕ್ತಿಯು ಸುಪ್ತವಾದುದು. ಭಕ್ತಿಯು ಆಂತರಿಕ ಮತ್ತು ಖಾಸಗಿಯಾದುದು. ಅದು ಬಹಿರಂಗ ಪ್ರದರ್ಶನದ ಚಟುವಟಿಕೆ ಅಲ್ಲ. ಇದೇ ತಿಳುವಳಿಕೆಯಲ್ಲಿ ಕನಕದಾಸರು ಧ್ಯಾನಲೀನರಾಗಿದ್ದಾರೆ. ಇಂತಹ ಕನಕನ ದಿವ್ಯ ಭಕ್ತಿಗೆ ಸಿಗುವ ಪ್ರತಿಫಲ,

"ದಲವ ತರುವ ಭಕ್ತವನಕೆ ಜಲವ ತರುವ ಪ್ರೀತಿಯು
ಹೂವು ಕೊಂಡು ಹಣ್ಣು ಕೊಡುವನೆಂಬ ಪರಂಜ್ಯೋತಿಯು"

ಎಂಬಂತಾಗುತ್ತದೆ.

ದೈವವೇ ಕನಕನ ಗುಡಿಸಲ ಬಳಿಗೆ ಬಂದು ಅಲ್ಲಿರುವ ತುಳಸೀ ವನಕ್ಕೆ ನೀರೆರೆಯುತ್ತದೆ. ದೈವಾನುಗ್ರಹಕ್ಕೆ ಒಳಗಾದ ತುಳಸೀ ವನ ಚೆಲುವಿನಿಂದ ಅರಳುತ್ತದೆ. ದೇವರ ಸರ್ವಾಂತರ್ಯಾಮಿತ್ವವನ್ನು ಸಾಧಿಸಿ ತೋರಿಸಿದ ಕನಕದಾಸರ ಭಕ್ತಿಯು ವಾದಿರಾಜ ಯತಿಯಿಂದ ಪ್ರಶಂಸೆಗೆ ಒಳಗಾಗುತ್ತದೆ. ಕವಿತೆಯ ಕೊನೆಯ "ಗುಡಿಸಲದೊಳಗಿರುವ ಬೆಳಕು ಗುಡಿಯೊಳಿಲ್ಲ" ಸಾಲಿನಲ್ಲಿ ಮೂಡಿರುವ ದರ್ಶನವು ಭಕ್ತಿಗೆ ಸಾಮಾಜಿಕ ಅಂತರಗಳಿಲ್ಲ ಎಂಬ ವಸ್ತು ಸ್ಥಿತಿಯನ್ನು ಬಿಂಬಿಸುತ್ತದೆ.

ಮೇಲ್ಕಂಡ ಕಥನ ಕವಿತೆಗಳು ಭಕ್ತಿಯ ವಿವಿಧ ಮುಖಗಳನ್ನು ದರ್ಶಿಸುತ್ತವೆ. ನಿಬಂಧದ ಉದ್ದೇಶಕ್ಕನುಗುಣವಾಗಿ ಅವುಗಳನ್ನು ಪ್ರಾತಿನಿಧಿಕವಾಗಿ ಇಲ್ಲಿ ವಿಶ್ಲೇಷಣೆಗೆ ಆರಿಸಿಕೊಳ್ಳಲಾಗಿದೆ. ಈ ಕವಿತೆಗಳಲ್ಲದೆ, ಇನ್ನು ಹಲವಾರು ಕವಿತೆಗಳು ಭಕ್ತಿ ವಸ್ತು ವಿಷಯಗಳನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿವೆ. ಅವುಗಳಲ್ಲಿ ವಸ್ತ್ರಾಪಹರಣ, ಕಾಳಿಯಾ ಮರ್ದನ ಮುಖ್ಯವಾದವುಗಳು.

ಭಕ್ತಿಯಂತಹ ಸೂಕ್ಷ್ಮ, ಅಮೂರ್ತ ಭಾವಗಳನ್ನು ಸೃಷ್ಟಿಸಲು ತಕ್ಕುದಾದ ಪದಗಳ ಬಳಕೆಯಲ್ಲಿ ಎಕ್ಕುಂಡಿಯವರು ಸನ್ನಿವೇಶಕ್ಕೆ ತಕ್ಕ ಪದ ಪ್ರಯೋಗ ಮಾಡಿ, ಕವಿತೆಯ ವಸ್ತುವಿಗೆ ಅನುಗುಣವಾಗಿ ಸಹಜ ಲಯಗಳನ್ನು ನಿರ್ಮಿಸಿದ್ದಾರೆ. ಹೀಗಾಗಿ ಅವರ ಕಥನ ಕವಿತೆಗಳಿಗೆ ಯೋಗ್ಯವಾದ ಪ್ರಾಸ-ವಿನ್ಯಾಸ, ಛಂದಸ್ಸು-ಸ್ವರೂಪ ಸಾಹಿತ್ಯಕ ಗುಣ ಒದಗಿಬಂದಿದೆ.

ಸಂಗೀತ ಪರಿಣಿತರಾದ ಎಕ್ಕುಂಡಿಯವರು ತಮ್ಮ ಕವಿತೆಗಳ ಭಕ್ತಿ ವರ್ಣನೆಗೆ ತಾವೇ ಸೃಷ್ಟಿಸಿದ ಲಯಗಳ ಮೂಲಕ ಒಂದು ಬಗೆಯ ಗೇಯ ಗುಣವನ್ನು ಸಹ ಸಹಜವಾಗಿ ತಂದುಕೊಟ್ಟಿದ್ದಾರೆ. ಇದು ಅವರ ಕಥನ ಕವಿತೆಗಳು ಇತರ ಕವಿಗಳ ರಚನೆಗಳಿಗಿಂತ ಭಿನ್ನ ಮತ್ತು ಆಕರ್ಷಕ ಎನಿಸಲು ಮುಖ್ಯ ಕಾರಣವಾಗುತ್ತದೆ.

ಆ) ಪ್ರೀತಿ–ಪ್ರಣಯ ಕಥನ ಕವನಗಳು

ಅನುರಾಗದ ಅಭಿವ್ಯಕ್ತಿಗಳಲ್ಲಿ ಭಕ್ತಿ, ಪ್ರೀತಿ, ಪ್ರಣಯದಂಥ ಭಿನ್ನ ಭಾವಗಳು ಸೇರುತ್ತವೆ. ಜೀವ ಜಗತ್ತಿನ ಮೂಲ ಪ್ರವೃತ್ತಿಗಳಲ್ಲಿ ಒಂದಾದ ಪ್ರೀತಿ–ಪ್ರಣಯವು ಮಾನವ ಸಮಾಜದ ಭಾವನಾತ್ಮಕ ಸಂಬಂಧಗಳನ್ನು ಬೆಸೆದು, ಅವರ ಜೀವನಕ್ಕೆ ವ್ಯವಸ್ಥೆಯನ್ನು ರೂಪಿಸಿದ ಪ್ರಧಾನ ತತ್ವ. ಇದು ಇತರ ಭಾವಗಳಿಗಿಂತಲೂ ಆದಿಮ ಮತ್ತು ವಿಶ್ವವ್ಯಾಪಕ.

ಜಗತ್ತಿನ ಬಹುಪಾಲು ಸಾಹಿತ್ಯ ಕೃತಿಗಳು ಶೃಂಗಾರ ಪ್ರಧಾನವಾದ ವಸ್ತು ವಿಷಯಗಳನ್ನೇ ನಿರೂಪಿಸುತ್ತವೆ. ಸ್ತ್ರೀ–ಪುರುಷರಿಬ್ಬರನ್ನೂ ಸಮಾನವಾಗಿ ಪ್ರಭಾವಿಸುವ ವಿಷಯವಿದು. ಇದಕ್ಕೆ ಕಾಲ, ದೇಶ, ವ್ಯಕ್ತಿಗಳ ಪರಿಮಿತಿ ಇಲ್ಲದೆ ಕಲೆಯ ಎಲ್ಲಾ ಪ್ರಕಾರಗಳಲ್ಲಿ ಅದು ಅಭಿವ್ಯಕ್ತಿಗೊಂಡಿದೆ.

ನವೋದಯ ಕಾಲದ ಕನ್ನಡ ಸಾಹಿತ್ಯಕ್ಕೆ ರಸಪರ ಧೋರಣೆ ರೂಪಿಸಿದ ತತ್ವಗಳಲ್ಲಿ ನಿಸರ್ಗದಷ್ಟೇ ಶೃಂಗಾರ ತತ್ವವು ಮುಖ್ಯವಾಗುತ್ತದೆ. ಸು.ರಂ.ಎಕ್ಕುಂಡಿಯವರು ನವೋದಯದ ಈ ರಸಪರ ಧೋರಣೆಯನ್ನು ಒಪ್ಪಿಕೊಂಡವರು. ಅವರ ಹಲವಾರು ಕಥನ ಕವನಗಳು ಈ ರಸಪರ ಧೋರಣೆಯನ್ನೇ ಅಭಿವ್ಯಕ್ತಿಸಿವೆ.

ಭಕ್ತಿ ತತ್ವಕ್ಕೆ ಕೊಟ್ಟ ಪ್ರಾಧಾನ್ಯತೆಯನ್ನೇ ಪ್ರೀತಿ–ಪ್ರಣಯದಂತಹ ವಿಷಯಗಳಿಗೂ ಎಕ್ಕುಂಡಿಯವರು ನೀಡಿದ್ದಾರೆ. ಭಕ್ತಿಯನ್ನು ತನ್ಮಯತೆಯಿಂದ ವರ್ಣಿಸುವಷ್ಟೇ ಈ ವಿಷಯವನ್ನೂ ಅವರು ರಸಪೂರ್ಣವಾಗಿ ಕಥನ ಮಾಡುತ್ತಾರೆ. ಅದಕ್ಕೆ ಅವರ 'ಮಹಾಶ್ವೇತೆ', 'ಪರಿಗ್ರಹಿಸಿರಿ ಪಾರಿಜಾತ', 'ಮತ್ಸ್ಯಗಂಧಿ ಸತ್ಯವತಿ', 'ಮಿಸುನಿ ಜಿಂಕೆ', 'ಶ್ವೇತಕೇತು ದೇವರ್ಷಿ', 'ವಸ್ತ್ರಾಪಹರಣ', 'ಊರ್ವಶಿ', 'ದೂರು' ಮುಂತಾದ ಕವಿತೆಗಳು ಸಾಕ್ಷಿಯಾಗುತ್ತವೆ.

ಈ ಕವಿತೆಗಳ ಕಾಲ, ಪಾತ್ರ, ಸನ್ನಿವೇಶಗಳು ಬಹುಪಾಲು ಪೌರಾಣಿಕ ಸಂದರ್ಭಗಳಿಗೆ ಸೇರುತ್ತವೆ. ಪಾತ್ರ ಘಟನೆಗಳು ಪುರಾಣಕ್ಕೆ ಸೇರಿದ್ದರೂ ಪ್ರೀತಿ–ಪ್ರಣಯದಂಥ ವಸ್ತು ವಿಷಯಗಳು ಮಾನವ ಪ್ರಪಂಚದಲ್ಲಿ ನಿತ್ಯ ನೂತನವಾದವು. ಈ ಅರ್ಥದಲ್ಲಿಯೇ ಎಕ್ಕುಂಡಿಯವರು ಪುರಾಣ ಸಂದರ್ಭದ ಚಿತ್ತಾಕರ್ಷಕವಾದ ಪ್ರಸಂಗಗಳನ್ನು ತಮ್ಮ ಕಥನಗಳಿಗೆ ಆಯ್ಕೆ ಮಾಡಿಕೊಂಡಿದ್ದಾರೆ.

'ಮಹಾಶ್ವೇತೆ' ಕಥನವು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಮಹಾಕಾವ್ಯ ರಚನೆಗೆ ವಸ್ತು ಸಾಮಾಗ್ರಿಗಳನ್ನು ಒದಗಿಸಿದೆ. ಎಕ್ಕುಂಡಿಯವರು ಸಹ ಈ ಕಥಾ ವಸ್ತುವಿಗೆ ಆಕರ್ಷಿತರಾಗಿದ್ದಾರೆ. ಅವರು ರಚಿಸಿರುವ ಕಥನ ಕವನಗಳ ಸಮೂಹದಲ್ಲಿಯೇ ತುಂಬಾ ವಿಸ್ತಾರವಾದ ಕಥನ ಕವನವಿದು. ಆದ್ದರಿಂದ ಇಲ್ಲಿ ವರ್ಣಿತವಾಗಿರುವ ಸಂಗತಿಗಳು ಹಲವಾರು.

ಹೇಮಕೂಟವೆಂಬ ಗಂಧರ್ವ ರಾಜ್ಯದಲ್ಲಿ ಹಂಸ ಮತ್ತು ಗೌರಿ ಎಂಬ ಗಂಧರ್ವ ರಾಜ ದಂಪತಿಗಳಿಗೆ ಏಕೈಕ ಪುತ್ರಿ ಮಹಾಶ್ವೇತೆ.

"ಮರಿ ದುಂಬಿಯಲ್ಲಿ ಬಂದಂತೆ ನಾದದುನ್ಮಾದ ರೆಕ್ಕೆವಡೆದು,
ತೆರೆದಲರನರಸಿ ಬಂದಂತೆ ದುಂಬಿ ಮಕರಂದ ಸೂತ್ತ ನುಡಿದು
ಬಣ್ಣವಡೆದು ಬಂದಂತೆ ಬನಕೆ ಮಧುಮಾಸ ಕುಕಿಲನಿಟ್ಟು,
ಹರಯ ಬಂತು ಗಂಧರ್ವಕನ್ನೆಗಪ್ಸರೆಯ ರೂಪ ಕೊಟ್ಟು
ಧವಲ ದೀಧಿತಿಯ ಚೆಲುವು ಬಂತು ಯೌವನೆಯ ರೂಪ ತೊಟ್ಟು,
ಚಂದ್ರವದನೆಯೊಪ್ಪಿದಳು ನೊಸಲ ಕಸ್ತೂರಿ ತಿಲಕವಿಟ್ಟು
ತೊಳಗುತ್ತಿತ್ತು ಕಟಿರತ್ನ ಮೇಖಲಾ ನೀಲ ರತ್ನಹಾರ,
ಮಹಾಶ್ವೇತೆ ಗಂಧರ್ವಕನ್ನೆಗೊಪ್ಪಿದವು ಕರ್ಣಪೂರ".

ಧವಳ ಕಾಂತಿಯಿಂದ ಕಂಗೊಳಿಸುವ ಮಹಾಶ್ವೇತೆಯ ತಾರುಣ್ಯ, ರೂಪು, ಲಾವಣ್ಯಗಳ ಅಪ್ರತಿಮ ವರ್ಣನೆ ಇಲ್ಲಿದೆ. ವಯೋಮಾನಕ್ಕೆ ತಕ್ಕಂತೆ ಪ್ರೀತಿ-ಪ್ರಣಯಗಳ ಸಹಜ ಭಾವಗಳಿಂದ ಅವಳ ಚೆಲುವು ಇಮ್ಮಡಿಸಿದೆ. ಇಂತಹ ಸ್ಥಿತಿಯಲ್ಲಿ ಸಖಿ 'ತರಳಿಕೆ'ಯೊಡನೆ ಅಚ್ಛೋದ ಸರೋವರಕ್ಕೆ ಮೀಯಲು ಹೋಗುತ್ತಾಳೆ.

ಅಲ್ಲಿ ಪಂಚವರ್ಣದ ಗಿಳಿಯೊಡನೆ ಹೆಜ್ಜೆ ಹಾಕುತ್ತಿದ್ದ ಅವಳಿಗೆ ಪುಂಡರೀಕನ ದರ್ಶನವಾಗುತ್ತದೆ. ಆ ಕ್ಷಣವೇ ಅವಳಲ್ಲಿ ಅನುರಾಗ ಒಡಮೂಡುತ್ತದೆ. ಆ ಭೇಟಿಯು ಅವಳಲ್ಲಿ ಹಲವು ಭಾವೋನ್ಮಾದಗಳನ್ನು ಹುಟ್ಟಿಸುತ್ತದೆ.

"ಅವಳ ಚಿತ್ತಚಾತಕವು ಬಯಸಿ ನಿಂತಿತ್ತು ಪ್ರೇಮಮೇಘ,
ಹುಚ್ಚು ಹೊಳೆಯು ಹರಿದಂತೆ ಕೊಚ್ಚಿ ಬಂದಿತ್ತು ಕಾಮದೋಘ
ಎದುರು ಬಂದು ನಿಂತಿರಲು ನೋಡಿ ಮುನಿ ಪುಂಡರೀಕ
ಮಹಾಶ್ವೇತೆಯೊಳಗೊಳಗೆ ಮೂಡಿದವು ಕಾಮದಿಂದ್ರ ಚಾಪ."

ಪ್ರಥಮ ಭೇಟಿಯಲ್ಲಿಯೇ ಪ್ರಣಯಾಕಾಂಕ್ಷಿತಳಾಗಿ, ಕಪಿಂಜಲನನ್ನು ಪ್ರಶ್ನಿಸಿ: "ನಿಮ್ಮ ಗೆಳೆಯರಿವರ್ಯಾರು?" ಆತ ಧರಿಸಿರುವ ಹೂವು ಯಾವುದು? ಎನ್ನುತ್ತಾಳೆ. ಅದಕ್ಕೆ ಪ್ರತ್ಯುತ್ತರವಾಗಿ ಕಪಿಂಜಲನು "ಈತ ಪುಂಡರೀಕ ಶ್ವೇತಕೇತು ದೇವರ್ಷಿಯ ಮಗ, ಈ ಹೂವು ಪಾರಿಜಾತ" ಎಂದು ವಿವರಿಸಿ ಮಹಾಶ್ವೇತೆ ಪುಂಡರೀಕರ ಆತ್ಮೀಯತೆಗೆ ಮಾಧ್ಯಮವಾಗುತ್ತಾನೆ.

ಪುಂಡರೀಕನ ಸ್ಥಿತಿಯು ಮಹಾಶ್ವೇತೆಯಂತೆಯೇ ಭೋಗ ಪ್ರೀತಿಗೆ ಕಾತರಿಸುತ್ತದೆ. ಆಗ

ಅವನ ದೇಹ ಕಂಪಿಸುತ್ತದೆ. ಕೈಯಲ್ಲಿದ್ದ ಜಪಮಾಲೆ ಜಾರಿ ಕೆಳಗುರುಳುತ್ತದೆ. ಮಹಾಶ್ವೇತೆ ಅದನ್ನು ಮಿಂಚಿನ ವೇಗದಲ್ಲಿ ಎತ್ತಿಕೊಂಡು, ತನ್ನ ಕೊರಳಿಗೆ ಹಾರದಂತೆ ಧರಿಸಿಕೊಳ್ಳುತ್ತಾಳೆ. ಅದು ಪುಂಡರೀಕ ಕೊಟ್ಟ ಒಲವಿನ ಕಾಣಿಕೆಯಾಗುತ್ತದೆ. ಅಲ್ಲಿಂದ ಇಬ್ಬರೂ ತೆರಳಬೇಕಾಗುತ್ತದೆ.

"ಕಲ್ಪ ಕಲ್ಪಗಳ ಮುಳುಗಿಸಿತ್ತು ಮೂಡಿಸಿದ ಪ್ರೇಮ ಸೃಷ್ಟಿ,
ಯೋಗ ಶೈಲಗಳನುರುಳಿಸಿತ್ತು ಕನ್ನಿಕೆಯ ಕಾಮದೃಷ್ಟಿ
ವಿರಹ ತುಂಬಿ ತುಳುಕಿರಲು ಹೃದಯ ಮುನಿ ಪುಂಡರೀಕನೊಂದು,
ನಡೆದ ದಾರಿಯನೆ ನೋಡಿ ನಡೆದ ನಿಟ್ಟುಸುರ ಬಿಟ್ಟು ನಿಂದು
"ದೇವಿ ಬರಲಿ ಗಿಳಿಜನ್ಮ ಇರಲಿ ಸಾನ್ನಿಧ್ಯ ನಿನ್ನದೊಂದು,
ದೈವ ನಕ್ಕು ನುಡಿದಿತ್ತು ಮುನಿಯ ನುಡಿ ಸತ್ಯವಾಗಲೆಂದು."

ಮಹಾಶ್ವೇತೆಯ ಆ ಕಾಮ ದೃಷ್ಟಿಗೆ ಪುಂಡರೀಕನ ಯೋಗ-ಶೈಲಗಳು ಕುಸಿದು ಬಿದ್ದವು. ವಿರಹ ತುಂಬಿ ತುಳುಕಿ, ಎದೆ ತಲ್ಲಣಿಸಿತು. ಆಕೆ ಹೋದ ದಾರಿಯನ್ನೇ ನಿಟ್ಟಿಸುತ್ತ, ನಿಟ್ಟುಸಿರು ಬಿಡುತ್ತ, ಆತ ನಿಂತಲ್ಲೇ ನಿಂತು ಬಿಟ್ಟ. 'ದೇವಿ, ಬರಲಿಗಿಳಿ ಜನ್ಮ, ಇರಲಿ ಸಾನಿಧ್ಯ ನಿನ್ನದೊಂದು ಎಂದು ಹಾರೈಸಿದ. ಆಗ ದೈವ, ಮುನಿಯ ನುಡಿಯು ಸತ್ಯವಾಗಲಿ' ಎಂದು ನುಡಿಯಿತು. ಇದು ಪುಂಡರೀಕನ ಸಂದರ್ಭದಲ್ಲಿ ನಿಜವಾಗುತ್ತದೆ.

ಆ ಕಡೆ ಮಹಾಶ್ವೇತೆ ಪಂಚವರ್ಣದ ಅರಗಿಳಿಗೆ ತನ್ನ ಕೊರಳ ನೀಲ ಸರ ಕೊಟ್ಟು ಪುಂಡರೀಕನಿಗೆ ತಲುಪಿಸುವಂತೆ ತಿಳಿಸಿ,

"ರುದ್ರಾಕ್ಷಿಮಾಲೆ ನನಗಿರಲಿ ಬರಲಿ ವಲ್ಕಲ ವಿಲಾಸವೆಂದು,
ದೇವಿ ನುಡಿಯೆ ನುಡಿದಿತ್ತು ದೈವನುಡಿ ಸತ್ಯವಾಗಲೆಂದು"

ಹರಸಿ ಬಿಡುತ್ತದೆ. ಇಬ್ಬರೂ ಹೀಗೆ ಒಂದು ರೀತಿಯಲ್ಲಿ ಶಾಪಗ್ರಸ್ಥರಂತಾಗುತ್ತಾರೆ. ಬದುಕಿನ ವ್ಯಂಗ್ಯವೆಂದರೆ ಇದೆ ಎನಿಸುತ್ತದೆ. ಪುಂಡರೀಕ-ಮಹಾಶ್ವೇತೆಯರ ನಡುವೆ ಪ್ರೀತಿ ಸಂದೇಶ ಹೊತ್ತು ಹೊರಟ ಅರಗಿಳಿ ನೀಲರತ್ನ ಹಾರವನ್ನು ಪುಂಡರೀಕನಿಗೆ ತಲುಪಿಸುತ್ತದೆ.

"ಮಹಾಶ್ವೇತೆಯೆಡೆ ಗಿಳಿಯು ಹಾರಿ ಹೊರಬಿತ್ತು ಹಾರ ಕೊಟ್ಟು,
ಪುಂಡರೀಕ ದೇವರ್ಷಿ ಕಂಡ ಹಾರೈಸಿ ದೃಷ್ಟಿಯಿಟ್ಟು,"
"ದೇವಿ ಬರಲಿ ಗಿಳಿ ಜನ್ಮ ಇರಲಿ ಸಾನಿಧ್ಯ ನಿನ್ನದೊಂದು,
ದೈವ ನಕ್ಕು ನುಡಿದಿತ್ತು ಮುನಿಯ ನುಡಿ ಸತ್ಯವಾಗಲೆಂದು"

ಅಭಿಸಾರಿಕೆಯ ಅವಸರದಲ್ಲಿ ನಡೆದು ಹೋದ ಪ್ರಮಾದವಿದು. ಇಂತಹ ವರ್ಣನೆಗಳ ಮೂಲಕ

ಕವಿ, ಪುಂಡರೀಕ–ಮಹಾಶ್ವೇತೆಯರ ಮನದಲ್ಲಾಗುತ್ತಿದ್ದ ಪ್ರೇಮ ಕೋಲಾಹಲವನ್ನು ಸಹಜವಾಗಿ ಚಿತ್ರಿಸಿದ್ದಾರೆ.

ಇನ್ನೊಂದು ಕಡೆ ದೇವವನದ ವನದೇವಿ ಬಂದು ಪುಂಡರೀಕನಿಗಾಗಿ ಹುಡುಕಿ ಮರದ ಮರೆಯಲ್ಲಿ ನಿಂತು, ಮಹಾಶ್ವೇತೆಗೆ ಒಲಿದು ವಿರಹದ ಉರಿಗೆ ಸಿಕ್ಕಿರುವ ದೇವರ್ಷಿಯನ್ನು ಕಂಡು ನೊಂದುಕೊಳ್ಳುತ್ತಾಳೆ. ಮಹಾಶ್ವೇತೆಗೆ ತನ್ನ ಅರಮನೆಯಲ್ಲಿ ಕುಳಿತುಕೊಂಡು ಜಪಮಾಲೆ ಎಣಿಸಿದರೂ, ಹಸ್ತಿ ದಂತದ ವೀಣೆ ನುಡಿಸಿ ನಾದಲಹರಿ ಎಬ್ಬಿಸಿದಳು. ಆದರೂ ಅವಳಿಗೆ ಸಮಾಧಾನವಿಲ್ಲ.

"ಸೇರಿ ಸಖಿಯ ಬಳಿಸಾರಿ "ದೇವಿ ಕೈಕೊಳ್ಳಿ ನಿಮ್ಮ ಚಿತ್ತ,
ಹೂವ ಕೊಟ್ಟು ಹೂಮಾಲೆ ಬೇಡಿದರು ಋಷಿಯು ನಮ್ಮ ಸುತ್ತ.
ನುಡಿದು ತೆರೆದು ತಾಂಬೂಲ ಕರಡಿಗೆಯೊಳಿರುವ ಪ್ರೀತಿಯೋಲೆ,
ಗೆಳತಿ ತರಳಿಕೆಯು ಕೊಡಲು ಪ್ರೇಮರಾಯಸವ ದೇವಬಾಲೆ.
"ಪುಂಡರೀಕ ದೇವರ್ಷಿ ಕೊಟ್ಟು ಕೇಳಿದರು ನಿಮ್ಮ ಕ್ಷೇಮ,
ಹೂವ ಕೊಟ್ಟು ಹೂಮಾಲೆ ಬಯಸುತಿದೆ ದೇವಮುನಿಯ ಪ್ರೇಮ"

ತರಳಿಕೆ ತಂದ ಪ್ರೇಮ ಪತ್ರವು, ಅವಳ ಭೋಗಾಕಾಂಕ್ಷೆಯನ್ನು ಈಡೇರಿಸುವ ಸಂದೇಶವನ್ನು ಹೊತ್ತು ತಂದಿತ್ತು. ಪುಂಡರೀಕನ ನೆನಪು ಮತ್ತೆ ಮತ್ತೆ ಕಾಡತೊಡಗಿ ಅವನನ್ನು ಕಾಣಬೇಕೆಂಬ ತವಕವು ತೀವ್ರವಾಯಿತು. ಅಂತಹ ಹೊತ್ತಿನಲ್ಲಿ ಕಪಿಂಜಲ ಮಹಾಶ್ವೇತೆಯನ್ನು ಪುಂಡರೀಕನ ಬಳಿ ಕರೆದೊಯ್ಯಲು ಬರುತ್ತಾನೆ.

"ಗಂಧವನದ ಕುಟಿಯಲ್ಲಿ ಮಲಗಿ ಮೈಮರೆತು ನಿನ್ನ ನೆನೆದು,
ಕಾಮವಿರಹದಲಿ ಕೊರಗಿ ಪ್ರಾಣ ನಿತ್ರಾಣವಾಯಿತೊಲಿದು
ಉಸಿರಿಗೊಮ್ಮೆ ನಿಟ್ಟುಸಿರ ನೂದಿ ನಿರ್ಜೀವ ಜೀವ ಕೊರಗಿ,
ಮಹಾಶ್ವೇತೆ ನೀನುಳಿಸಬೇಕು ನಿನ್ನವನ ದೆಸೆಗೆ ಮರುಗಿ"

ಪುಂಡರೀಕನ ದುಸ್ಥಿತಿಗೆ ಮರುಗಿ, ಅವನನ್ನು ಉಳಿಸುವ ಮಹಾದಾಸೆಯಿಂದ ಸ್ವಯಂ ಅಲಂಕೃತಳಾಗಿ ಪುಂಡರೀಕನ ಬಳಿಗೆ ಮಹಾಶ್ವೇತೆ ಧಾವಿಸಿ ಬರುತ್ತಿದ್ದಾಳೆ. ಆದರೆ ಪುಂಡರೀಕನನ್ನು ತಲುಪುವ ಮುಂಚೆಯೇ ಕಪಿಂಜಲನ ಆಕ್ರಂದನ ಅವಳನ್ನು ತಲ್ಲಣಗೊಳಿಸುತ್ತದೆ.

"ಎಂಥ ಮರಣವಿದು ಗೆಳೆಯ! ಹೂವು ಕಾಮಾಕ್ಷಿ ತಂದ ನಂಜು,
ಚೆಲುವಿಗಾಗಿ ಮನಸೋತ ಜೀವ ಕಂಡಿತ್ತು ಬರಿಯ ಮಂಜು,
ವಜ್ರ ಕವಚವನು ಸೀಳಿ ಬಂತು ಸೌಂದರ್ಯ ಭೋಗ ದೃಷ್ಟಿ,

ಬರಿಯ ಗಾಳಿ ಗೋಪುರವೆ ಗೆಳೆಯನೆ? ತಪದ ಬ್ರಹ್ಮಸೃಷ್ಟಿ".

ಆಪ್ತಮಿತ್ರನಾದ ಪುಂಡರೀಕನನ್ನು ಕಳೆದುಕೊಳ್ಳಬೇಕಾದ ಕಡು ದುಃಖದ ಸ್ಥಿತಿ ಕಪಿಂಜಲನದಾಯಿತು. ಮಹಾಶ್ವೇತೆಗೆ ದುರಂತದ ಅರಿವಾಗುತ್ತದೆ. ಆ ಆಘಾತ ಸಹಿಸದೆ ಪ್ರಜ್ಞೆ ತಪ್ಪುತ್ತಾಳೆ.

"ಮಹಾಶ್ವೇತೆ ಹಲುಬಿರಲು ಸುರಿಸಿ ಕಣ್ಣೀರನಿನಿಯಗಾಗಿ,
ಕಪಿಂಜಲನು ಬಳಿಸಾರಿ ನಿಂತು ಕನಿಕರಿಸಿ ಕಂಡು ಬಾಗಿ.
ದೇವಿ ದುಃಖ ಸಂತವಿಸು ನಿನ್ನ ದುರ್ದೈವ ನಮ್ಮದಿಂದು,
ಹೂವಿಗಾಗಿ ಹಾರೈಸಿಬಂದವರ ಸಾವು ಕರೆಯಿತಿಂದು."

ತಮಗಾಗಿರುವ ಶೋಕವನ್ನು ಮಹಾಶ್ವೇತೆ ಕಪಿಂಜಲ ಇಬ್ಬರೂ ಪರಸ್ಪರ ಸಮಾಧಾನಗಳ ಮೂಲಕ ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ. ಅಷ್ಟರಲ್ಲಿ ಚಂದ್ರಮಂಡಲದ ಯಕ್ಷನೊಬ್ಬ ಪ್ರತ್ಯಕ್ಷನಾಗಿ, ಪುಂಡರೀಕನ ಶವವನ್ನು ಎತ್ತಿಕೊಂಡು 'ಮುಂದಕ್ಕಿದೆ ಮಿಲನ' ಎಂದು ಭರವಸೆ ಇತ್ತು ಮುಗಿಲಿನಲ್ಲಿ ಮಾಯವಾಗುತ್ತಾನೆ.

ಪ್ರಣಯಾತುರದ ಸೆಳೆತದಲ್ಲಿ ಸಿಕ್ಕ ಪ್ರೇಮಿಗಳಿಬ್ಬರೂ ಹೀಗೆ ದುರಂತಗಳ ಸರಪಳಿಯಲ್ಲಿ ಸಿಕ್ಕ ಬೀಳಬೇಕಾಗುತ್ತದೆ. ಅವರಿಬ್ಬರ ಪ್ರೀತಿ ಪ್ರೇಮಕ್ಕೆ ಎಷ್ಟು ವೇಗವಿದೆಯೋ ಅದರಿಂದಾಗುವ ದುರಂತಗಳಿಗೂ ಅಷ್ಟೇ ವೇಗ ಉಂಟು.

ಪ್ರೇಮಿಗಳಿಗೆ ಜನ್ಮ ಜನ್ಮಾಂತರದಲ್ಲಿ ಗಾಢವಾದ ನಂಬಿಕೆ ಇರುತ್ತದೆ. ಮಹಾಶ್ವೇತೆ ಕೂಡ ಈ ತತ್ವದಲ್ಲಿ ನಂಬಿಕೆ ಇಟ್ಟು,

"ಅಕ್ಷಮಾಲೆ ನನಗಿರಲಿ ಬರಲಿ ವಲ್ಕಲದ ಭೋಗ"ವೆಂದು
ಜನ್ಮ ಜನ್ಮಗಳ ಮಿಲನಕ್ಕಾಗಿ ಹಾರೈಸಿ" ತಪ್ಪಸಿಗೆ ಕೂರುತ್ತಾಳೆ.

ಈ ಕಥನದಲ್ಲಿ ಮಹಾಶ್ವೇತೆ ಪುಂಡರೀಕ ಇಬ್ಬರೂ ಪ್ರೀತಿಗಾಗಿ ಆಘಾತಕ್ಕೆ ಗುರಿಯಾಗುತ್ತಾರೆ. ಸ್ನೇಹಕ್ಕಾಗಿ ಕಪಿಂಜಲ ಕೂಡ ಆಘಾತವನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಎಕ್ಕುಂಡಿಯವರು ಮಹಾಶ್ವೇತೆಯ ರೂಪು, ಯೌವ್ವನ, ಲಾವಣ್ಯಗಳನ್ನು ಪ್ರಕೃತಿ ಸಹಜ ಚೆಲುವಿನಂತೆ ವರ್ಣಿಸಿದ್ದಾರೆ. ಪುಂಡರೀಕನ ಸಾವು ತರುವ ಶೋಕದ ತೀವ್ರತೆಯನ್ನು ಕವಿ ಭಾವುಕ ಮಾತುಗಳಲ್ಲಿ ಸಜೀವಗೊಳಿಸಿದ್ದಾರೆ. ಈ ಕಥನದ ವಸ್ತು, ಪಾತ್ರ, ಸನ್ನಿವೇಶಗಳನ್ನು ಹೊರತು ಪಡಿಸಿದರೆ, ಎಲ್ಲಾ ಕಾಲದ ಮಾನವಸಮುದಾಯಗಳಿಗೆ ಸಂಬಂಧಿಸಿದ್ದುದ್ದಾಗಿದೆ. ಆದರೆ ಈ ಕಥೆಯನ್ನೇ ನಿರೂಪಿಸಲು ಕವಿಗಿರುವ ಮುಖ್ಯ ಕಾರಣವೇನೆಂದರೆ: ಮಹಾಶ್ವೇತೆ ಮತ್ತು ಪುಂಡರೀಕರಲ್ಲಿ ಕಂಡು ಬರುವ ಅನುರೂಪ ಗುಣಗಳು ಎನಿಸುತ್ತದೆ.

'ಪರಿಗ್ರಹಿಸಿ ಪಾರಿಜಾತ' ಕಥನವು ದೇವರ್ಷಿ ಶ್ವೇತಕೇತು ಮತ್ತು ಲಕ್ಷ್ಮಿದೇವಿಯರಿಗೆ ಅಲೌಕಿಕ ಶಿಶುವಾಗಿ ಜನಿಸಿದ ಪುಂಡರೀಕನು ಅನುರಾಗದ ಬಲೆಯಲ್ಲಿ ಸಿಕ್ಕಿ ಬೀಳುವ ಪ್ರೇಮಕಥೆಯನ್ನು ಹೇಳುತ್ತದೆ.

ದೇವರ್ಷಿಯಾದ ಪುಂಡರೀಕ ಕಪಿಂಜಲನ ಜೊತೆಯಲ್ಲಿ ಶಿವಾರ್ಚನೆಗಾಗಿ ಬಂದಿರುತ್ತಾನೆ. ಅಲ್ಲಿನ ವನದೇವಿ ಅವನ ರೂಪ ಸಿರಿಗೆ ಮರುಳಾಗಿ ಅವನ ಹತ್ತಿರಕ್ಕೆ ಬಂದು,

"ಮೂರು ಲೋಕಗಳ ಚಿತ್ತ ಮರುಳುಗೊಳಿಸಿತ್ತು ನಿಮ್ಮ ರೂಪ
ಕಂಡ ಕಣ್ಣಿನೊಳ ಮೂಡಿ ಬಂದವನು ರಾಗದಿಂದ್ರ ಚಾಪ"
ದೇವವನದ ವನದೇವಿ ತನ್ನ ಕೈಚಾಚಿ ನುಡಿದಳಂದು
"ಪರಿಗ್ರಹಿಸಿರಿ ಪಾರಿಜಾತ ಕರ್ಣಾವತಂಸ" ಕೆಂದು

ದೈನ್ಯತೆಯಿಂದ, ತಾನು ಪುಂಡರೀಕನಿಗೆ ಮನಸೋತಿರುವ ಸಂಕೇತವಾಗಿ ಪರಿಗ್ರಹಿಸಿರಿ ಪಾರಿಜಾತ ಎಂದು ಬೇಡಿಕೊಳ್ಳುತ್ತಾಳೆ. ಪುಂಡರೀಕನಿಗೂ ಒಂದು ಕ್ಷಣ ಪ್ರೇಮ ಭಾವ ಆವರಿಸುತ್ತದೆ. ಆದರೆ ಆಕೆಗೆ ಮನಸೋಲದೆ ತನ್ನ ಪಾಡಿಗೆ ತಾನು ಉಳಿಯುತ್ತಾನೆ. ಅವನಿಗೆ ಆ ವೇಳೆಯಲ್ಲಿ ಭಕ್ತಿಯೇ ಮುಖ್ಯವಾಗುತ್ತದೆ. ಆದರೆ ಪ್ರೀತಿಯ ಹುಚ್ಚು ಹಿಡಿಸಿಕೊಂಡ ಆ ವನ ದೇವತೆಯ ಸ್ಥಿತಿ ಕಂಡು ಕಪಿಂಜಲ ಮರುಗಿ,

"ಹೂವ ತಂದ ಹೂ ಹರಸಬೆಕು ತಂದಿರುವ ಹೂವು ತೊಟ್ಟು" ಎಂದು ಆಗ್ರಹಿಸುತ್ತದೆ.

ಕಪಿಂಜಲನ ಬಲವಂತಕ್ಕೆ ಸೋತು ಪಾರಿಜಾತವನ್ನು ಧರಿಸುತ್ತಾನೆ. ಆದರೆ ವನದೇವಿಯನ್ನು ಸ್ವೀಕರಿಸಿದೆ ಹೊರಟು ಬಿಡುತ್ತಾನೆ. ಪುಂಡರೀಕ ತನ್ನ ಕೋರಿಕೆಗೆ ಕೃಪೆ ತೋರಲಿಲ್ಲ ಎಂದು ವಿಷಾಧಿಸಿ ಕನಲುತ್ತಾಳೆ.

ಈ ಕಥನವು ವನದೇವಿಯ ಹತಾಶ ಪ್ರೇಮವನ್ನು ಚಿತ್ರಿಸುತ್ತದೆ. ಪ್ರೀತಿ ಪ್ರೇಮಗಳು ಏಕ ಮುಖವಲ್ಲ ಎಂಬ ಲೋಕ ಸತ್ಯವನ್ನು ಕವಿ ತುಂಬಾ ಸರಳವಾಗಿ ಹೇಳಿದ್ದರೂ, ಅದರಿಂದಾಗುವ ಆಘಾತಗಳ ತೀವ್ರತೆಯನ್ನು ವನದೇವಿಯ ವಿಷಾದದಲ್ಲಿ ಹೃದಯ ಸ್ಪರ್ಶಿಯಾಗಿ ಓದುಗರಿಗೆ ಮುಟ್ಟಿಸಿದ್ದಾರೆ. ಅದು ಕಥನದ ಕೊನೆಯ ಸಾಲಿನಲ್ಲಿ ಸುವ್ಯಕ್ತವಾಗಿದೆ.

"ಹೂವ ಹರಸಿ ಹೂವಾಡಗಿತ್ತಿಯನು ಹರಸಲಿಲ್ಲವೆಂದು"

ಎಂದು ಮರುಗುವುದು ಮನ ಕಲಕುತ್ತದೆ. ಆ ಮೂಲಕ ಓದುಗರ ಅನುಕಂಪಕ್ಕೂ ಗುರಿಯಾಗುತ್ತಾಳೆ.

ವನದೇವಿಯ ಪಾತ್ರ ಚಿತ್ರಣದಲ್ಲಿ ಕವಿ ತೋರಿರುವ ಸಹಾನುಭೂತಿ ಮೆಚ್ಚುವ ಅಂಶವಾಗಿದೆ. ಶ್ವೇತಕೇತು ದೇವರ್ಷಿ ಕಥನದಲ್ಲಿ ಸೌಂದರ್ಯಕ್ಕೆ ಹೆಸರಾದ ದೇವರ್ಷಿ ಶ್ವೇತ ಕೇತುವಿನ ರೂಪಕ್ಕೆ ಶರಣಾಗಿ ಕ್ಷೀರಸಾಗರದ ಪುತ್ರಿ ಲಕ್ಷ್ಮಿ ಪ್ರೇಮ ಭಿಕ್ಷೆ ಕೇಳುವ ಚಿತ್ರಣ ಇಲ್ಲಿದೆ.

"ಚೆಲುವುತೆತ್ತ ಕಡೆಗೋಲು ಚಿತ್ತವನು ಕಾಮರಾಗ ಹಿಡಿದು
ಕಮಲಶಯ್ಯೆಯಲಿ ಕುಳಿತು ದೇವಿಯೊಳ ಹೃದಯ ಕಡಲ ಕಡೆದು
ಋಷಿಯ ರೂಪದನುರಾಗ ಸತಿಯ ಸಂಯೋಗಾದಾಸೆ ಮಿಡಿದು
ಬರಿಯ ನೋಟದಲಿ ಸುರತಕೂಟ ಸುಖಚಿತ್ತ ತೃಪ್ತಿ ಪಡೆದು
ಕಮಲವದನೆ ಕಮಲಾಕ್ಷಿ ನಲಿದಳೋಲಾಡಿ ಗಂಡು ಹಡೆದು."

ಗಂಡು ಮಗುವನ್ನು ಪಡೆದ ಲಕ್ಷ್ಮಿಯು, ಮತ್ತೇನುಬೇಕೆಂದು ದೇವರ್ಷಿಯನ್ನು ಪ್ರಶ್ನಿಸುತ್ತಾಳೆ. ಆಗ ದೇವರ್ಷಿಯು ಪುಂಡರೀಕದ ಬಯಕೆ ವ್ಯಕ್ತಪಡಿಸುತ್ತಾನೆ.

"ತೋಳ ತೊಟ್ಟಿಲಲಿ ಮಗುವ ಕೂಗಿ ಕೇಳಿದಳು ಹರುಷ ಮಿಂದು
ಏನು ಬಯಸುತಿದೆ ತಮ್ಮ ಚಿತ್ತ ದೇವರ್ಷಿ ನದಿಯಲಿಂದು
ನುಡಿದಾಗ ಋಷಿ: "ದೇವಿ ಬಯಸುತಿದೆ ಪುಂಡರೀಕಕೆಂದು"
ದೇವಿ ನಾಚಿ ಕೈಕೂಸ ಚಾಚಿ ಹೇಳಿದಳು "ಹಿಡಿಯಿರೆಂದು
ಹೂವ ಬಯಸಿದರೆ ಹೆಣ್ಣಿನೊಲುಮೆ ಹಸುಗೂಸನಿತ್ತಿ ತಂದು"

ದೇವರ್ಷಿ ಬಯಸಿದ್ದು ಪುಂಡರೀಕ ಪುಷ್ಪವಾದರೆ, ಲಕ್ಷ್ಮಿ ನೀಡಿದ್ದು ಪುಂಡರೀಕ ಎಂಬ ಗಂಡುಮಗುವನ್ನು. ಅನುರೂಪ ಪ್ರೇಮಕ್ಕೆ ಸಿಕ್ಕಿದ ಅನುರೂಪ ಉಡುಗೊರೆ. ಒಟ್ಟಾರೆ ಈ ಕಥನವು ಅನುರಾಗದ ಉತ್ತಮ ಮಾದರಿಯ ಗುಣಗಾನ ಮಾಡುತ್ತದೆ.

ಅರಿವು ಮತ್ತು ಪ್ರೀತಿಯ ಆವಿಷ್ಕಾರಗಳನ್ನು ಏಕಕಾಲಕ್ಕೆ ಮೂಡಿಸುವ ಅಪರೂಪದ ಕವಿತೆ "ಮಿಸುನಿ ಜಿಂಕೆ". ಇಂದ್ರನ ಮಗಳಾದ ಜಯಂತಿ ಒಂದು ದಿನ ಮಿಸುನಿ ಜಿಂಕೆ ಕಂಡು, ಅದನ್ನು ಹೊಂದುವ ತೀವ್ರಾಭಿಲಾಷೆಯನ್ನು ತಂದೆಯ ಬಳಿ ಹೇಳಿಕೊಳ್ಳುತ್ತಾಳೆ. ಇಂದ್ರ ತನ್ನ ಮಗ ಜಯಂತನನ್ನು ಹಿಡಿದು ತರಲು ಆದೇಶಿಸುತ್ತಾನೆ.

ದೇವಲೋಕ ಕೊಟ್ಟ ಮಿಸುನಿ ಬಲೆ, ಗಂಧರ್ವ ಲೋಕ ಕೊಟ್ಟ ನಾದಬಲೆ, ಬ್ರಹ್ಮಲೋಕ ಕೊಟ್ಟ ಶಬ್ದಬಲೆಗಳೊಂದಿಗೆ ಅದನ್ನು ಹಿಡಿದು ತರಲು ಹೊರಟ ಜಯಂತನಿಗೆ ಸೋಲಾಗುತ್ತದೆ. ಅವನು ಬೀಸಿದ ಬಲೆಗಳೆಲ್ಲವೂ ವಿಫಲವಾಗುತ್ತವೆ. ಬಂಗಾರದ ಬಲೆ ಕೊರಳ ಮಾಲೆಯಾಗುತ್ತದೆ. ನಾದಬಲೆ ಶೃಂಗಾರ ಮಾಲೆಯಾಗುತ್ತದೆ, ಶಬ್ದಬಲೆ ಚಿತ್ರಮಾಲೆಯಾಗುತ್ತದೆ. ಹೀಗೆ ಇಂದ್ರಪುತ್ರ

ಮುಖಭಂಗ ಹೊಂದಿ ಹಿಂದಿರುಗುವಾಗ, ಕುತ್ಸಮುನಿಯ ದರ್ಶನವಾಗುತ್ತದೆ. ಅಲ್ಲಿ ಆತ 'ಸಾರಬಲೆ'ಯನ್ನು ನೀಡುತ್ತಾನೆ. ಜಯಂತ ಮಿಸುನಿಜಿಂಕೆಯ ಬೇಟೆಗಾಗಿ ಮರುಯತ್ನ ಮಾಡಿ ಗೆಲ್ಲುತ್ತಾನೆ. ಮಿಸುನಿ ಜಿಂಕೆಯೊಡನೆ ಮರಳುತ್ತಾನೆ.

ತನ್ನ ಆಸೆ ಕೈಗೂಡಿದುದಕ್ಕೆ ನಲಿದಾಡಿದ ಜಯಂತಿ, ಆ ಜಿಂಕೆಯನ್ನು ಇನ್ನಿಲ್ಲದಂತೆ ಅಪ್ಪಿ ಮುದ್ದುಗರೆಯುತ್ತಾಳೆ. ಮುದ್ದುಗರೆದ ಮೈಮರೆತ ಆ ಸ್ಥಿತಿಯಲ್ಲಿ,

"ನಲಿದು ಕಣ್ಣ ಮುಚ್ಚಿರಲು ಜಿಂಕೆ ಕರಗಿತ್ತು ಮಾಯವಾಗಿ
ಅವಳಿಗೊಲಿದು ಕುಳಿತಿದ್ದನೆದುರಿಗಾಚಾರ್ಯ ಶುಕ್ರಯೋಗಿ
ಕಣ್ಣು ತೆರೆದು ಕೆಂಪೇರಿ ಬೆಚ್ಚಿ ನಾಚಿಕೆ ಜಯಂತಿ ನಿಂದು
ಗಲ್ಲವಿಡಿದು ಬಳಿಗಪ್ಪಿ ನುಡಿದನಾಚಾರ್ಯನವಳಿಗಂದು
"ನನ್ನ ಜೀವ ಹಾರೈಸಿ ಬಂತೆ ಸಖಿ ಇದೇ ಜಿಂಕೆಗಾಗಿ"

ಪುರಾಣದ ಕಾಲ್ಪನಿಕ ಕಥೆಯೊಂದನ್ನು ತುಂಬಾ ಆಕರ್ಷಕವಾಗಿ ಇಲ್ಲಿ ವರ್ಣಿಸಲಾಗಿದೆ. ಶುಕ್ರಾಚಾರ್ಯರ ಇಂದ್ರಪುತ್ರಿ ಜಯಂತಿಯನ್ನು ಮೋಹಿಸಿ, ಅವಳನ್ನು ಆಕರ್ಷಿಸಲು ಮಿಸುನಿ ಜಿಂಕೆಯ ರೂಪ ಧರಿಸಿ, ಆ ಜಿಂಕೆಯನ್ನು ಜಯಂತಿ ಮೋಹಿಸುವಂತೆ ಮಾಡುತ್ತಾನೆ. ಕುತ್ಸ ಮುನಿಯ ಸಹಾಯದಿಂದ ಆ ಜಿಂಕೆ ಜಯಂತಿಯ ಕೈವಶವಾಗುತ್ತದೆ. ಜಿಂಕೆಯನ್ನು ಪಡೆದ ಸಂತೋಷದಲ್ಲಿ ಅದರ ಅಪ್ಪುಗೆಯಲ್ಲಿದ್ದಾಗ ಜಿಂಕೆಯ ಮೂಲ ರೂಪವಾದ ಶುಕ್ರಾಚಾರ್ಯರು ಪ್ರತ್ಯಕ್ಷರಾಗುತ್ತಾರೆ. ಜಿಂಕೆಯನ್ನು ಹುಡುಕುತ್ತಿದ್ದಾಗ ಜಯಂತಿ ಶುಕ್ರಾಚಾರ್ಯನಿಗೆ ತಾನೆ ಪ್ರೇಮದ ಜಿಂಕೆಯಾಗಿ ಬಿಡುತ್ತಾಳೆ. ಹೀಗೆ ಇದು ಪ್ರೇಮದ ಅಪರೂಪದ ಕಥನವಾದ ಕಾರಣ ಕವಿಯು, ಕಥೆಗೆ ಪೇಮದ, ಮೋಹದ ನಿಗೂಢ ಗುಣಗಳನ್ನು ಧಾರಣ ಮಾಡಿ ಆಕರ್ಷಕಗೊಳಿಸಿದ್ದಾರೆ.

ಮನದ ಉತ್ಕಟ ಆಸೆಯಾದ ಪ್ರೇಮವು ಹಲವಾರು ಅಡೆತಡೆಗಳನ್ನು ಎದುರಿಸಿದ ಮೇಲೆಯೇ ಕೈಗೂಡುವುದು ಎಂಬ ಅರಿವು ಮತ್ತು ಅದು ಅನುಭವಗಳ ಮೂಸೆಯಲ್ಲಿ ಪರಿಪಾಕಗೊಂಡು ಆನುಭಾವಿಕ ಎತ್ತರದಲ್ಲಿ ತನ್ನದಾಗುವ ವಿಲಕ್ಷಣವಾದ ಆಶಯವನ್ನು ಈ ಕಥನವು ಒಳಗೊಂಡಿದೆ.

ಕಥನದ ಕೊನೆಯ ಸಾಲಿನಲ್ಲಿ ಅರ್ಥಪೂರ್ಣ ತಿರುವು ಇರುವುದನ್ನು ಗಮನಿಸಬಹುದು. ಅರಸುವವ ಮತ್ತು ಅರಸುವ ವಸ್ತು ಎರಡೂ ಒಂದೇ ಆಗಿ ಬಿಡುವ ಚಮತ್ಕಾರ ಕವಿ ಸೃಷ್ಟಿಸುವ ಬೇಟೆಯ ಪ್ರತಿಮೆಯಲ್ಲಿ ನಿರ್ಮಾಣವಾಗಿದೆ.

"ಜಯಂತಿಯು ಜಿಂಕೆಯನ್ನು ಅರಸುತ್ತಾಳೆಂದು ಮೊದಲು ನಾವು ತಿಳಿದಿದ್ದರೆ ಈಗ

ಅರಸುವವನು ಶುಕ್ರಾಚಾರ್ಯನೆಂದು ಗೊತ್ತಾಗುತ್ತದೆ. ಅಥವಾ "ಪ್ರೇಮಲೋಕದಲ್ಲಿ ಹೆಣ್ಣು ಗಂಡುಗಳಿಬ್ಬರೂ ಅರಸುವವರೇ; ಇಬ್ಬರೂ ಬೇಟೆ ಹಾಗೂ ಬೇಟೆಗಾರರು. ಆದ್ದರಿಂದ ಇಲ್ಲಿ ಸೋಲು – ಗೆಲುವುಗಳ ಲೆಕ್ಕಾಚಾರಕ್ಕೆ ಅರ್ಥವೇ ಇಲ್ಲ. ಇಬ್ಬರೂ ಸೋಲುತ್ತಾರೆ – ಇಬ್ಬರೂ ಗೆಲ್ಲುತ್ತಾರೆ." *

'ವಸ್ತ್ರಾಪಹರಣ' ಕಥನವು ಪ್ರಣಯ ಮತ್ತು ಭಕ್ತಿ ಭಾವನೆಗಳನ್ನು ದೈವದ ಲೀಲೆ ಎಂಬಂತೆ ನಿರೂಪಿಸುತ್ತದೆ. ಕೃಷ್ಣನ ಹಂಬಲದಿಂದ ಗೋಪಿಕೆಯರು ಕಾಲಿಂದಿ ನದಿಯಲ್ಲಿ ಮುಕ್ತ ಜಲಕ್ರೀಡೆಗೆ ತೊಡಗುತ್ತಾರೆ. ಕೃಷ್ಣ ಧ್ಯಾನದಲ್ಲಿ ಅಲೆದು ನಲಿಯುತ್ತಿದ್ದ ಆ ಗೋಪಿಕೆಯರ ಇಚ್ಛೆಯಂತೆ ಯಮುನಾ ವಿಹಾರಿಯಾಗಿ ಕೃಷ್ಣ ಅಲ್ಲಿಗೆ ಬರುತ್ತಾನೆ. ಬಂದವನು ಅವರೆಲ್ಲರಿಗೂ ಪಾಠ ಕಲಿಸಲು ಅವರ ಬಣ್ಣ ಬಣ್ಣದ ಸೀರೆಗಳನ್ನು ಮರದ ರೆಂಬೆ ರೆಂಬೆಗೆ ತೂಗುಹಾಕುತ್ತಾನೆ. ಕೃಷ್ಣನ ಕೊಳಲಗಾನ ಕೇಳಿ ಜಲಕ್ರೀಡೆ ಬಿಟ್ಟು ಹೊರಬರುತ್ತಾರೆ. ಸೀರೆಗಾಗಿ ಹಂಬಲಿಸುತ್ತಾರೆ. ಕೊಡದಿದ್ದರೆ ಶಿಕ್ಷಿಸುವುದಾಗಿ ಬೆದರಿಕೆ ಒಡ್ಡುತ್ತಾರೆ. ಕೊನೆಗೆ ಕೃಷ್ಣನಿಗೆ ಕೈಮುಗಿದು ಶರಣಾಗುತ್ತಾರೆ.

ಗೋಪಿಕೆಯರ ತಪ್ಪನ್ನು ಕೃಷ್ಣ ಅವರಿಗೆ ಮನವರಿಕೆ ಮಾಡಿಕೊಡುತ್ತಾನೆ. 'ಕಾಲಂದಿ ನೀವು ಮಾಡಿದ ತಪ್ಪನ್ನು ಕ್ಷಮಿಸಲಿ' ಎಂದು ಮನ್ನಿಸಿ ಅವರ ವಸ್ತ್ರಗಳನ್ನು ಹಿಂತಿರುಗಿಸುತ್ತಾನೆ. ಹೀಗೆ ಗೋಪಿಕೆಯರು ಕೃಷ್ಣ ಕೃಪೆಗೆ ಪಾತ್ರರಾಗುತ್ತಾರೆ. ಕಥೆಗೆ ತಕ್ಕ ವರ್ಣನೆಗಳು, ಗೋಪಿಕೆಯರ ಪ್ರಣಯ ಭಾವ, ಕೃಷ್ಣನ ರಸಿಕತನ ಮುಂತಾದವುಗಳು ಸಂಯಮದ ಗಡಿದಾಟದೆ ನಿರೂಪಣೆಗೊಂಡಿವೆ. ಭಕ್ತಿಯ, ಪ್ರೇಮದ ವಿಶಿಷ್ಟ ಅಭಿವ್ಯಕ್ತಿಯಾಗಿ ಈ ಕಥನವನ್ನು ನೋಡಬಹುದು.

ಪ್ರಣಯ ಕಥನಗಳಲ್ಲಿ ಗಮನ ಸೆಳೆಯುವ 'ಮಹಾಶ್ವೇತೆ'ಯಷ್ಟೇ ಪ್ರಧಾನವೆನಿಸುವ ಕಥನ ಕವನ 'ಮತ್ಸ್ಯಗಂಧಿ ಸತ್ಯವತಿ'. ಸತ್ಯವತಿಯ ಮತ್ಸ್ಯಗಂಧವು ಪರಾಶರನನ್ನು ಆಕರ್ಷಿಸಿ, ಅವಳ ಸಂಗಕ್ಕೆ ಪ್ರೇರೇಪಿಸುತ್ತದೆ.

"ಭಗವದನುಗ್ರಹ ಭಗವನ್ ಲಾಲಿಸಿ
ಹೆಣ್ಣನು ಭಯ ಸಂಕಟದೊಳು ಪಾಲಿಸಿ
ಕನ್ನಿಕೆ ಕೌಮಾರಿಕೆ ಕಳಕೊಂಡರೆ
ವಧುವಾಗದೆ ತಾಯ್ತನ ಸುಖವುಂಡರೆ
ಗತಿ ದುರ್ಗತಿ" ಎನ್ನಲು ಮೀನಾಕ್ಷಿ

---

* ಸು.ರಂ. ಎಕ್ಕುಂಡಿಯವರ ಕಾವ್ಯ – ನಿಬ್ಬೆರಗು ನಲಿವುಗಳ ಪುಳಕ– ಪುಟ: ೬೬
(ಜಿ.ಎನ್. ಮೋಹನ್ – ಎಕ್ಕುಂಡಿ ನಮನ)

[illegible]

ಇವು ಹೆಣ್ಣಿಗಿರುವ ಸಹಜ ಆತಂಕ, ಭಯ, ಅನುಮಾನಗಳು. ಪರಾಶರ ಸುಮ್ಮನೆ ಬಿಡುವುದಿಲ್ಲ- ಅವಳಿಗೆ ಅಭಯ ನೀಡುತ್ತಾನೆ.

"ದೇವ ಜನ್ಮ ದುತ್ಸವಕ್ಕೆ ಪಾತ್ರಳಾಗು

ಹೇ ಮತ್ಸ್ಯಗಂಧಿಯೇ ನಿಮಿತ್ತ ಮಾತ್ರಳಾಗು"

ಎಂದು ನಂಬಿಸುತ್ತಾರೆ. ಪ್ರೀತಿ ಪ್ರಣಯಗಳಲ್ಲಿ ರೂಪದ ಆಕರ್ಷಣೆಯಷ್ಟೇ ನಂಬಿಕೆಯೂ ಮುಖ್ಯ ಪಾತ್ರವಹಿಸುತ್ತದೆ. ಸತ್ಯವತಿ ಪ್ರೀತಿಗಾಗಿ ಪರಾಶರನನ್ನು ನಂಬುತ್ತಾಳೆ. ಆ ನಂಬಿಕೆ ಅವರ ಸಂಯೋಗಕ್ಕೂ ದಾರಿಯಾಗುತ್ತದೆ; 'ಯೋಜನ ಸುಗಂಧಿಯಾಗಿ' ರೂಪಾಂತರ ಪಡೆಯುವುದಕ್ಕೂ ಕಾರಣವಾಗುತ್ತದೆ.

ಪ್ರೀತಿ-ಪ್ರಣಯಗಳಿಗೆ ಸಾರ್ಥಕತೆಯ ಅರ್ಥಗಳಿರುವುದನ್ನು ಈ ಕಥನ ಧ್ವನಿಸುತ್ತದೆ.

ಇ) ಚಾರಿತ್ರಿಕ ಕಥನ ಕವನಗಳು

ಎಕ್ಕುಂಡಿಯವರ ಕಥನಗಳಿಗೆ ಪುರಾಣಗಳಂತೆ ಚರಿತ್ರೆಯೂ ಕೂಡ ಸಾಕಷ್ಟು ವಸ್ತು ಸಾಮಾಗ್ರಿಗಳನ್ನು ಒದಗಿಸಿದೆ. ಈ ನಿಬಂಧದ ಉದ್ದೇಶಕ್ಕನುಗುಣವಾಗಿ 'ಯೋಧ ಮತ್ತು ಹೆಂಗಸು', 'ಕಳ್ಳರು ಮತ್ತು ಸಂತ', 'ಬುದ್ಧದೇವ' ಕಥನ ಕವಿತೆಗಳನ್ನು ಪ್ರಾತಿನಿಧಿಕವಾಗಿ ವಿಶ್ಲೇಷಿಸಲಾಗುವುದು.

ಆದಿ ಕವಿ ಪಂಪ ಕವಿಯೂ ಹೌದು, ಕಲಿಯೂ ಹೌದು. ಅಂತಹ ಕವಿ ಯೋಧನಾಗಿ ಹೆಂಗಸೊಬ್ಬಳಿಂದ ಪಡೆದ ಉಪಚಾರವನ್ನು 'ಯೋಧ ಮತ್ತು ಹೆಂಗಸು' ಕಥನವು ವರ್ಣಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಅತಿಥಿ ಸತ್ಕಾರದಂತಹ ಮಾನವೀಯ ಮೌಲ್ಯದ ಉತ್ಕೃಷ್ಟತೆಯನ್ನು ಈ ಕವಿತೆ ಪರಿಚಯಿಸುತ್ತದೆ.

ಉರಿ ಬಿಸಿಲಿನಲ್ಲಿ ಪಯಣಿಸಿ, ಮೈಯೆಲ್ಲಾ ಧೂಳಿಡಿದು ದಣಿದ ಯೋಧ, ಬಳಲಿಕೆಯಿಂದ ನೀರು ಕೇಳಿದಾಗ ಸಾಮಾನ್ಯ ಹೆಂಗಸೊಬ್ಬಳು ನೀರು ಕೊಟ್ಟು ಉಪಚರಿಸುವ ಸನ್ನಿವೇಶವು ಸಹಜವಾಗಿ ವರ್ಣನೆಗೊಂಡಿದೆ.

"ಜೇನು ಸವಿದನು ನೀರು ಕುಡಿದು ಮೈಯೊಡ್ಡಿದನು
ತುಸು ಹೊತ್ತು ತಂಬೆಲರ ನೆರಳಿಗೆಂದು
ಎದ್ದು ಕುದುರೆಗೆ ಥಡಿಯ ಹಾಕಿ ಅಣಿಗೊಳಿಸಿದನು
ಮತ್ತೆ ದೂರದ ತನ್ನ ಪಯಣಕೆಂದು"

ದಣಿವಾರಿಸಿಕೊಂಡು ಹೊರಡುವ ಹೊತ್ತಿನಲ್ಲಿ ಆ ಹೆಂಗಸು ಯೋಧನ ಪರಿಚಯ ಕೇಳುತ್ತಾಳೆ. ಆಗಿನ ಅವಳ ಮಾತುಗಳು ಯೋಧನಾಗಿರುವ ಪಂಪನ ಮನಸ್ಸಿನಲ್ಲಿ ತವರು ನೆಲೆ ಬನವಾಸಿಯ ನೆನಪು ಮರುಕಳಿಸುತ್ತದೆ.

"ಯೋಧ ನಡೆಯುವ ದಾರಿ ಕವಿಯ ದಾರಿಕೂಡ

ನನ್ನನ್ನು ಕರೆಯುವರು ಪಂಪನೆಂದು" ಹೀಗೆ ತನ್ನನ್ನು ತಾನು ಪರಿಚಯಿಸಿಕೊಳ್ಳುತ್ತಾನೆ.

ಈ ಕವಿತೆಯಲ್ಲಿ ಪಂಪನ ತವರ ಪ್ರೇಮ, ಅಲ್ಲಿಯ ಜನರ ಮಾನವೀಯತೆ, ಸೌಜನ್ಯಗಳಂಥ ಗುಣಗಳಿಂದ ಕೂಡಿದ, ಇತಿಹಾಸ ಕಾಲದ ಒಂದು ನಾಡಿನ ಜನರ ಸಾಂಸ್ಕೃತಿಕ ಔನ್ನತ್ಯವನ್ನು ವರ್ಣಿಸಲಾಗಿದೆ.

ತಮ್ಮ ಆಸಕ್ತಿಗೆ ಪಾತ್ರವಾದ ಎಲ್ಲಾ ವಿಷಯಗಳು ಎಕ್ಕುಂಡಿಯವರಿಗೆ ಪ್ರಿಯವಾಗಿವೆ. ಆದ್ದರಿಂದಲೇ ಶಂಕರ, ಮಾರ್ಕ್ಸ್, ಏಸು, ಬುದ್ಧ, ಪುರಂದರ ಇಂತವರ ವಿಚಾರಗಳು ಅವರ ಕಾವ್ಯದಲ್ಲಿ ವಸ್ತುವಾಗುತ್ತವೆ. ತಾತ್ವಿಕವಾಗಿ ಈ ಚಾರಿತ್ರಿಕ ವ್ಯಕ್ತಿಗಳು ಪರಸ್ಪರ ವಿರುದ್ಧ ನೆಲೆಗಳಲ್ಲಿ ನಿಂತವರು. ಈ ದಾರ್ಶನಿಕರ ತಾತ್ವಿಕ ಸಂಘರ್ಷಗಳು ಏನೇ ಇರಲಿ ಅವರ ಬದುಕಿನಲ್ಲಿರುವ, ಚಿಂತನೆಗಳಲ್ಲಿರುವ ಉದಾತ್ತ ಅಂಶಗಳನ್ನು ಎಕ್ಕುಂಡಿಯವರು ಉದಾತ್ತ ದೃಷ್ಟಿಯಿಂದಲೇ ಸ್ವೀಕರಿಸುತ್ತಾರೆ.

ಅವರ 'ಕಳ್ಳರು ಮತ್ತು ಸಂತರು' ಕಥನದ ವಸ್ತು: ಅಂದಿನ ನ್ಯಾಯ ವ್ಯವಸ್ಥೆಯ ವಿಚಿತ್ರ ತರ್ಕಗಳಿಗೆ ಸಿಕ್ಕಿ ಅಪರಾಧಿಯಾಗಿ, ಏಸು ಶಿಲುಬೆಗೇರಿದ ಜಾಗತಿಕ ದುರಂತವನ್ನು ಮನ ಮಿಡಿಯುವಂತೆ ನಿರೂಪಿತ್ತದೆ. ಏಸು ಶಿಲುಬೆಗೇರುವ ಆ ದೃಶ್ಯಗಳಿಗೆ ಕವಿ ಸೂಕ್ತವಾದ ನಾಟಕೀಯತೆಯನ್ನು ತಮ್ಮ ಕಥನದಲ್ಲಿ ತಂದಿದ್ದಾರೆ. ಆ ನಾಟಕೀಯ ಭಾಗಗಳೆಲ್ಲವೂ ಏಸುವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ ವ್ಯಕ್ತಿಗಳ, ಶಕ್ತಿಗಳ, ಅಮಾನವೀಯ ಮುಖಗಳನ್ನು ದರ್ಶಿಸುತ್ತವೆ.

"ಅವಿವೇಕಿಗಳ ಕೈಗೆ ಸಿಕ್ಕಿ ನಿಧಿ ಉಳಿದೀತೆ?
ಕೊಲ್ಗಂಬದಲಿ ಕರುಣೆ ಮೂಡಲುಂಟೆ?
ಒಲುಮೆ ಬತ್ತಿರುವ ಬೆಂಗಾಡಿನಲಿ ಹಕ್ಕಿಗಳು
ಎಂದಾದರೂ ಬಂದು ಹಾಡಲುಂಟೆ?"

ಈ ಸಾಲುಗಳು ಜಗತ್ತಿನ ಕರುಣೆಯ ಕಡಲನ್ನು ಬತ್ತಿಸುವ ಮಹಾನ್ ಪಾತಕಿಗಳ ನಿರ್ದಯತೆಯನ್ನು ವಿಷಾದದಿಂದ ವರ್ಣಿಸುತ್ತದೆ. ಯಾರು ಎಷ್ಟೇ ವಿಷಾದಿಸಿದರೂ, ಶೋಕಿಸಿದರೂ ಏಸು

ಶಿಲುಬೆಗೇರುವುದು ನಿಲ್ಲುವುದಿಲ್ಲ.

"ಅವಿವೇಕಿಗಳ ಕೈಗೆ ಸಿಕ್ಕಿ ತಕ್ಕಡಿಯಲ್ಲಿ
ಕಳ್ಳರೂ ಸಂತರೂ ಒಂದೇ ಸರಕು
ಕೊಲ್ಲಂಬದಲಿ ಸಿಕ್ಕು ಸತ್ಯ ತೂಗಾಡುವದು
ಮರುಕಗಳ ಮಡಕೆ ಬಿಟ್ಟಲ್ಲಿ ಬಿರುಕು".

ಯೇಸು ಪ್ರಾರ್ಥಿಸಿದ, "ಓ ತಂದೆಯೇ ಕ್ಷಮಿಸು
ತಿಳಿಗೇಡಿ ಇವರನ್ನು" ಎಂದು ಬೇಡಿ
ಕ್ರೌರ್ಯಗಳ ಆಚೆಗೂ ಉಂಟಲ್ಲ, ಸ್ವರ್ಗಕ್ಕೆ
ಕರೆದೊಯ್ಯಬಲ್ಲದು ಕ್ಷಮೆಯ ಏಣಿ."

ಏಸುವಿನ ದಾರ್ಶನಿಕ ವ್ಯಕ್ತಿತ್ವ ಕವಿತೆಯ ಕೊನೆಯ ಸಾಲುಗಳಲ್ಲಿ ಚಿತ್ರಿತವಾಗಿದೆ. ಅವನ ಕರುಣೇ, ಔದಾರ್ಯ, ಕ್ಷಮಾಗುಣ, ಮಾನವ ಲೋಕದ ಉಳಿವಿನ ರಕ್ಷಕ ತತ್ವಗಳಾಗಿವೆ.

ಕರುಣಾಮೂರ್ತಿಯಾದ ಏಸುವಿನ ಮೇಲೆ ಪಾತಕಿಗಳು ನಡೆಸಿದ ಕ್ರೌರ್ಯ, ಇತಿಹಾಸದ ನೂತನ ಶಕೆಗೆ ನಾಂದಿಯಾಯಿತು. ಅಂತಹ ಐತಿಹಾಸಿಕ ಸಂದರ್ಭವನ್ನು ಎಕ್ಕುಂಡಿಯವರು ತುಂಬಾ ಮನೋಜ್ಞವಾಗಿ ಮರು ಸೃಷ್ಟಿಸಿದ್ದಾರೆ.

"ಏಷ್ಯಾದ ಬೆಳಕು" ಎಂಬ ಪ್ರಖ್ಯಾತಿಗೆ ಒಳಗಾಗಿರುವ, ಮಾನವ ಕೋಟಿಯ ದುಃಖ ಶಮನಕ್ಕಾಗಿ ಪರಿಹಾರ ಹುಡುಕಲು ಹೊರಟ, ಸಿದ್ಧಾರ್ಥ, ದಾರ್ಶನಿಕ ಬುದ್ಧನಾಗುವ ಇತಿಹಾಸದ ಮಹಾನ್ ಘಟನೆಯನ್ನು 'ಬುದ್ಧದೇವ' ಕಥನವು ವಿಸ್ತಾರವಾಗಿ ನಿರೂಪಿಸುತ್ತದೆ.

ವೈಶಾಖ ಶುಕ್ಲ ಪೂರ್ಣಿಮೆಯ ಇರುಳಿನಲ್ಲಿ, ಶಾಕ್ಯ ಕುಲದ ಯುವರಾಜ ಸಿದ್ಧಾರ್ಥ, ಅರಮನೆಯ ವೈಭವ-ವಿಲಾಸವನ್ನು ತ್ಯಜಿಸಿ ಬುದ್ಧನಾಗಲು ಹೊರಡುತ್ತಾನೆ.

"ಶಾಕ್ಯನಾಡ ರಾಜಧಾನಿ,
ಇರುಳು ಮಹಾ ಮೌನಧ್ಯಾನಿ-
ಯಂತೆ ನಿಂತು ಮೆರೆಯುತ್ತಿತ್ತು,
ಕಪಿಲವಸ್ತುವಂದು
ಎಲ್ಲೆಲ್ಲೂ ಮೃತ್ಯುಲೋಕ,
ಬಂಧನದಲಿ ಸಿಲುಕಿ ಮೂಕ

ವೇದನೆಯಲಿ ನಿತ್ಯಶೋಕ,
ಗಾಢನಿದ್ರೆ ಪಡೆಯಿತು.
ನೆನೆದು ಮುಗಿಲ ಮುಕ್ತಿ ಹೂವ,
ಬಂಧನದಲಿ ನೊಂದ ಜೀವ,
ನೆಲ ಮುಗಿಲಿಗೆ ನುಡಿಯಿತು;
"ದುಃಖಕೆ ಕೊನೆಯೆಂದು?"

ಇಂತಹ ಸನ್ನಿವೇಶಗಳು ಶಾಕ್ಯನಾಡಿಗಷ್ಟೇ ಎದುರಾಗಿಲ್ಲ. ಅದು ಜಗತ್ತಿನ ಇತರ ನೆಲಗಳಿಗೂ ಸಂಬಂಧಿಸಿದುದಾಗಿದೆ. ಸಿದ್ಧಾರ್ಥ ಕೂಡ ತಂದೆ ಶುದ್ಧೋಧನನ ಅರಮನೆಯಲ್ಲಿ ಸೆರೆಯಾಳಿನಂತೆ ಬಂಧಿಯಾಗಿದ್ದಾನೆ. ಅದೇ ವೇಳೆಯಲ್ಲಿ ಭೋಗದ ಉನ್ಮತ್ತ ಸ್ಥಿತಿಯ ದರ್ಶನವಾಗುತ್ತದೆ.

"ಭೋಗದ ಹೂವಿನ ರಾಗೋನ್ಮಾದಕೆ,
ನವಯೌವನೆಯರ ಮಧುರ ಸುಹಾಸ,
ಭೋಗಮಯೂರದ ನೃತ್ಯವಿಲಾಸ,
ಕನ್ನಿಕೆಯರು ಕುಣಿದಾಡಿದರು,
ಕಣ್ಣಿಗೆ ಚೆಲುವಿನ ಬಣ್ಣದ ಹೊಳೆಯನೆ,
ಹರಿಸುವ ಲಾಸ್ಯವನಾಡಿದರು.
ಸಿದ್ಧಾರ್ಥನ ಮನ ಹೊರಳಿಸುವಂತೆ,
ಬುದ್ಧದೇವ ಮನ ಕೆರಳಿಸುವಂತೆ,
ತ್ಯಾಗದ ಶಿಖರವನುರುಳಿಸುವಂತೆ,
ಸುತ್ತೆಲ್ಲಾ ಸುಳಿದಾಡಿದರು."

ಇದು ಸಿದ್ಧಾರ್ಥನ ಮನಸ್ಸನ್ನು ಭೋಗ ಜೀವನದಲ್ಲಿ ಮುಳುಗಿಸುವ ಜಗತ್ತಿನ ದುಃಖವನ್ನು ಅವನಿಂದ ದೂರವಿಡುವ ತಂತ್ರಗಾರಿಕೆಯಷ್ಟೆ. ಭೋಗದ ಈ ಅತಿರೇಕವೇ ಅವನಿಗೆ ವಿರಕ್ತಿಯ ಹಾದಿಗೆ ದಾರಿ ತೋರಿಸುತ್ತದೆ.

"ಸಪ್ತ ಸ್ವರಗಳ ತರಂಗ,
ನಾದಲೋಕದಂತರಂಗ;
ಸೀಳಿ ಹೊಡೆದು ಸಾರುತ್ತಿತ್ತು,
ದುಃಖ ತನ್ನ ಡಂಗುರ.

ಸುಪ್ತ ಲೋಕದುಸಿರ ತೂಗಿ,
ಇರುಳ ಮರೆಗೆ ನಿಂತು ಕೂಗಿ,
ಬದುಕಿಗೆಲ್ಲ ಸಾರುತ್ತಿತ್ತು,
ಜೀವಿತ ಕ್ಷಣಭಂಗುರ."

ಲೋಕದ ದುಃಖವು ಬುದ್ಧನನ್ನು ನಿರಂತರವಾಗಿ ಬಾಧಿಸುತ್ತಲೇ ಇರುತ್ತದೆ. ಅವನ ಅಂತರಂಗದಲ್ಲಿ,

"ಬದ್ಧರಾಗಿ ಬಂದವರೇ,
ಬುದ್ಧರಾಗಿ ತೆರಳಿರಿ".

ಎಂಬ ಕೂಗು ಅದಮ್ಯವಾಗಿ ಮೊಳಗುತ್ತದೆ. ಕೊನೆಗೊಮ್ಮೆ ಸಿದ್ಧಿ ಪಡೆಯಲು ಆ ವೈಶಾಖ ಪೂರ್ಣಿಮೆಯಂದು ಸಿದ್ಧಾರ್ಥ ಅರಮನೆ ಬಿಟ್ಟು ರಾಜ ಕುದುರೆ, ಸೇವಕನೊಡನೆ ತನ್ನ ನಿರ್ವಾಣದ ದಾರಿ ತುಳಿಯುತ್ತಾನೆ, ಮುಂದೆ ಮುಂದೆ ಹೋಗುತ್ತಾನೆ.

"ನಿರ್ವಾಣದ ಬಟ್ಟಲಲ್ಲಿ,
ಬೋಧಿ ವೃಕ್ಷದಡಿಗೆ ಕುಳಿತು
ಕರುಣೆಯ ಸುಧೆಯುಂಡನು,
ತ್ಯಾಗ, ಪ್ರೀತಿ– ಚಿಗಿತು ನಿಂತ,
ಸತ್ಯ ವೃಕ್ಷ ಕಂಡನು.
ಮೊಳಗುತಿರಲು ಬುದ್ಧವಾಣಿ,
ಜೀವರೆಕ್ಕೆ ಪಡೆಯುತ್ತಿತ್ತು,
'ಉಧೋ' ಗತಿಯ ನಡೆಯುತ್ತಿತ್ತು."

ಬೋಧಿ ವೃಕ್ಷದಡಿಯಲ್ಲಿ ಜಗತ್ತಿನ ದುಃಖ ನಿವಾರಣೆಗೆ ಬುದ್ಧನು ಪಡೆದ ಸತ್ಯ ದರ್ಶನದ ಔನ್ನತ್ಯವನ್ನು ಈ ಸಾಲುಗಳು ಧ್ವನಿಸುತ್ತವೆ. ಬುದ್ಧನ ಸಾಕ್ಷಾತ್ಕಾರಕ್ಕೆ ಜಗತ್ತು ಸ್ಪಂದಿಸುತ್ತದೆ.

"ಬುದ್ಧಮ್ ಶರಣಮ್ ಗಚ್ಛಾಮಿ,
ಸಂಘಮ್ ಶರಣಮ್ ಗಚ್ಛಾಮಿ,
ಧರ್ಮಮ್ ಶರಣಮ್ ಗಚ್ಛಾಮಿ".

ಬುದ್ಧನ ಕಾಲದಿಂದ ಇಲ್ಲಿಯವರೆಗೆ ಆತನ ಚಿಂತನೆಗಳಿಗೆ ವಿಶ್ವವು ತೋರುತ್ತಿರುವ ಪ್ರತಿಸ್ಪಂದನದಂತೆ ಈ 'ದಮ್ಮ ಸೂತ್ತ' ಅನುಸರಣೆಸುತ್ತಿದೆ. ಬುದ್ದ ಚರಿತೆಗೆ ಎಕ್ಕುಂಡಿಯವರು

ಈ ಬಗೆಯ ಮುಕ್ತಾಯ ಕೊಡುವ ಮೂಲಕ ಬುದ್ಧ ತತ್ವಗಳ ಸಾರ್ವಕಾಲೀಕ ಶ್ರೇಷ್ಠತೆಯನ್ನು ಧ್ವನಿಸಿದ್ದಾರೆ.

ವಿಶ್ವದ ಸಕಲ ದುಃಖವು ಸಿದ್ಧಾರ್ಥನ ಅಂತರಂಗದಲ್ಲಿ ಮೂಡಿಸಿದ ಕೋಲಾಹಲ ಸಾಮಾನ್ಯವಾದುದಲ್ಲ. ಆಗ, ವೈಶಾಖ ಪೂರ್ಣಿಮೆಯ ಇರುಳ ಮೌನ ಕತ್ತಲೆಗಳನ್ನು ಸೀಳಿ ಅರಳಿದ ಬೆಳದಿಂಗಳಿನಂತೆ ಬುದ್ಧ ಜಗತ್ತಿಗೆ ಪೂರ್ಣತ್ವ ಕೊಡುವ ಬೆಳಕಾಗಿ ಅರಳಿದ್ದಾನೆ. ಇಂತಹ ಚಿತ್ರಣ ನೀಡುವಲ್ಲಿ ಎಕ್ಕುಂಡಿಯವರು ಆ ವೈಶಾಖ ಪೂರ್ಣಿಮೆ ರಾತ್ರಿಯ ಸಮಸ್ತ ಚಟುವಟಿಕೆಗಳನ್ನು ಪೂರಕವಾಗಿ ವರ್ಣಿಸಿ, ಕಥಾ ವಸ್ತುವಿಗೆಬೇಕಾದ ಯೋಗ್ಯ ಹಿನ್ನೆಲೆಯನ್ನು ಸೃಷ್ಟಿಸಿದ್ದಾರೆ. ಕವಿಯ ನಿಸರ್ಗ ಪ್ರೇಮ, ಸಂಗೀತದ ತಿಳಿವು ಕೂಡ ಬುದ್ಧ ಚರಿತೆಯ ನಿರ್ಮಾಣಕ್ಕೆ ವಿಶಿಷ್ಟ ಲಯ, ಭಾವಗೀತಾತ್ಮಕ ಗುಣಗಳನ್ನು ತಂದು ಕೊಟ್ಟಿವೆ.

ಈ) ಸಾಮಾಜಿಕ ಕಥನ ಕವನಗಳು

ನವೋದಯ ಕಾವ್ಯದ ರಸಪರ ಧೋರಣೆಗೆ ವಿರುದ್ಧ ಎನಿಸುವ ಪ್ರಗತಿಶೀಲ ಪಂಥವ ಪ್ರಮುಖ ಕವಿಗಳಲ್ಲಿ ಒಬ್ಬರಾದ ಎಕ್ಕುಂಡಿಯವರು "ನಾವೂ ಬದುಕಬೇಕು, ಇತರರನ್ನೂ ಬದುಕಲು ಬಿಡಬೇಕು. ಈ ಜೀವನ ಉತ್ತಮವಾಗಿರಬೇಕು. ಇದೇ ನನ್ನ ಜೀವನ ಸಿದ್ಧಾಂತ" * ಎಂದಿದ್ದಾರೆ. ಹೀಗಾಗಿ ಅವರ ಸಾಮಾಜಿಕ ಚಿಂತನೆಯ ಹಲವು ಕಥನಗಳಲ್ಲಿ "ಹಿಟ್ಟು ಮತ್ತು ಮಲ್ಲಿಗೆ"ಯ ಹುಡುಕಾಟ ನಿರಂತರವಾಗಿದೆ.

ಕವಿ ಬದುಕಿನ ಸೌಂದರ್ಯವನ್ನು ದರ್ಶಿಸಬಲ್ಲ, ಹಾಗೆಯೇ ಅದರ ಕುರೂಪವನ್ನು ಸಹ. ಬದುಕಿನ ವಿಕೃತಿಗಳನ್ನು ಬದಲಿಸುವುದರಿಂದ ಮಾತ್ರ ಜೀವನವು ಸುಂದರ ಹಾಗೂ ಅರ್ಥಪೂರ್ಣವಾಗಲು ಸಾಧ್ಯ. ಮಾನವ ಬದುಕಿನ ಪ್ರಧಾನ ವಿಕೃತಿಗಳೆಂದರೆ: ಅಲ್ಲಿನ ಹಸಿವು, ಬಡತನ, ಕ್ರೌರ್ಯಗಳು, ಶೋಷಣೆ, ಅಸಹಾಯಕತೆ ಮುಂತಾದವುಗಳು. ಭಕ್ತಿ ಮತ್ತು ಮುಕ್ತಿಯ ಮಾರ್ಗದಲ್ಲಿ ವಚನಕಾರರು, ದಾಸರು ಸಾಮಾಜಿಕ ಬದಲಾವಣೆಯ ಆದರ್ಶಗಳನ್ನು ಪ್ರತಿಪಾದಿಸಿದ್ದಾರೆ. ಎಕ್ಕುಂಡಿಯವರಿಗೆ ಈ ವಚನಕಾರರು, ದಾಸರೇ ಬದಲಾವಣೆಯ ಮಾದರಿಗಳು.

ಕ್ರಾಂತಿಯು ಸಾಮಾಜಿಕ ಬದಲಾವಣೆಯ ಪ್ರಬಲ ಅಸ್ತ್ರ ಆಗುವುದಾದರೆ, ಅಮಾನವೀಯ ವಾಸ್ತವಗಳನ್ನು ಮನಃ ಪರಿವರ್ತನೆಯಿಂದಲೂ ಬದಲಿಸಬಹುದೆಂಬ ನಿಲುವು ಎಕ್ಕುಂಡಿಯವರದು. ಸಾಮಾಜಿಕ ಸಂಘರ್ಷಕ್ಕಿಂತ, ಅದರ ಸಮನ್ವಯತೆಯ ಕಡೆಗೆ ಎಕ್ಕುಂಡಿಯವರ ಒಲವು ಹೆಚ್ಚು,

---

* ಜಿ.ಪಿ.ಬಸವರಾಜು – ಎಕ್ಕುಂಡಿಯವರ ಕಾವ್ಯದಲ್ಲಿ ಸಮಾಜವಾದಿ ದರ್ಶನ– ಉಲ್ಲೇಖ – ಪುಟ–42.

ಮಾರ್ಕ್ಸ್ ಮತ್ತು ಮಧ್ವರಿಬ್ಬರೂ ಒಟ್ಟುಗೂಡುವುದು ಈ ನೆಲೆಯಲ್ಲಿ. ಇದೇ ದೃಷ್ಟಿಕೋನದಿಂದ ಎಕ್ಕುಂಡಿಯವರ ಸಾಮಾಜಿಕ ಚಿಂತನೆಯ ಕಥನಗಳನ್ನು ವಿಶ್ಲೇಷಿಸಬೇಕಾಗುತ್ತದೆ.

ಎಕ್ಕುಂಡಿಯವರು ತಾವು ಕಂಡುಂಡ ಸಾಮಾಜಿಕ ಸಂದರ್ಭಗಳನ್ನು ಕಾಲಧರ್ಮಗಳ ಚೌಕಟ್ಟಿನಲ್ಲಿ ಯಥಾವತ್ತಾಗಿ ಚಿತ್ರಿಸುತ್ತಾರೆ. ಪ್ರಗತಿಶೀಲ ಲೇಖಕರಲ್ಲಿ ಕಂಡುಬರುವ 'ಸಾಮಾಜಿಕ ಸಂಘರ್ಷ', ಕ್ರಾಂತಿ ಆಶಯಗಳು ಎಕ್ಕುಂಡಿಯವರಲ್ಲಿ ಉದಾರವಾದಿ ಸ್ವರೂಪ ಧಾರಣ ಮಾಡಿವೆ. ಪ್ರಾಯ: 'ವಿಧಿನಿಯಮ'ದ ಸ್ವೀಕರಣದಿಂದ ಇಂತಹ ನಿಲುವು ಎಕ್ಕುಂಡಿಯವರಲ್ಲಿದೆ ಎನಿಸುತ್ತದೆ. ಆದರೆ ಸಾಮಾಜಿಕ ಬದಲಾವಣೆಯ ಅನಿವಾರ್ಯತೆಯನ್ನು ಮಾನವೀಯ ನೆಲೆಯಲ್ಲಿ ನಂಬುತ್ತಾರೆ. ಅವರ ಬಹುಪಾಲು ಕಥನಗಳು ಈ ಒಳದನಿಯನ್ನು ವ್ಯಕ್ತಪಡಿಸುತ್ತವೆ.

ಮಾನವ ಬದುಕಿನ ಕೇಂದ್ರ ಬಿಂದು ಹಸಿವು. ಆ ಹಸಿವನ್ನು ಈಡೇರಿಸಿಕೊಳ್ಳುವ ಹೋರಾಟದ ಸಂದರ್ಭಗಳಲ್ಲಿ ಮಾನವ ಸಮಾಜದ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಗಳನ್ನು ರೂಪುಗೊಳ್ಳುತ್ತವೆ. ಈ ವ್ಯವಸ್ಥೆಗಳು ಕೆಲವರನ್ನು ಶ್ರೀಮಂತರನ್ನಾಗಿ ಮಾಡಿದರೆ, ಹಲವರನ್ನು ನಿರ್ಗತಿಕರನ್ನಾಗಿ ಮಾಡುತ್ತವೆ. 'ಹಿಟ್ಟು ಮತ್ತು ಮಲ್ಲಿಗೆ' ಕಥನವು ಬದುಕಿನ ಈ ಅತಿರೇಕದ ಚಿತ್ರಣ ನೀಡುತ್ತದೆ.

ಬಡತನದ ಬದುಕಿನಲ್ಲಿ 'ಹಸಿವು' ತಂದೊಡ್ಡುವ ದಾರುಣಸ್ಥಿತಿ ಯಾರಿಗೂ ಬೇಡ. ಆದರೆ ಬಡವರಾದವರು ಎಲ್ಲವನ್ನೂ ಸಹಿಸಿಕೊಳ್ಳಬೇಕು.

"ಕೈ ಹಾಕಿ ನೋಡಿದರೆ ಒಂದು ಕಾಳೂ ಇಲ್ಲ
ಒಂದು ಹನಿಯೂ ಇಲ್ಲ ಮಡಕೆಯೊಳಗೆ,
ಸಣ್ಣ ಮನೆ ಆದರೂ ಸಂಸಾರ ದೊಡ್ಡದು
ಎಲ್ಲ ಬಯಲೇ ಬಯಲು ಇಲ್ಲಿ ಹೊರಗೆ"

ಬಯಲಲ್ಲಿ ಬಯಲಾಗಿ ಬದುಕಬೇಕಾದ ನಿರ್ದಯ ಸ್ಥಿತಿಗೆ ಕಾರಣಗಳು ಸಿಗದಿದ್ದಾಗ ಬಡವರು ಸಿಟ್ಟುಮಾಡಿಕೊಳ್ಳುವುದು ಸಹಜ.

"ಕಿಸೆಯ ಕಥೆ ಗೊತ್ತಲ್ಲ ಯಾವಾಗಲೂ ಬರಿದು
ಬಡವರಲ್ಲಿಗೆ ಬರುವುದೊಂದೆ; ಸಿಟ್ಟು"

ತೃಪ್ತ ಜೀವನ ಹೊಂದಲು ಸಾಧ್ಯವಾಗದಿದ್ದಾಗ ಪ್ರತಿಭಟನೆ ಅನಿವಾರ್ಯ ಆಗುತ್ತದೆ. ದಮನಕಾರಿ ವ್ಯವಸ್ಥೆಯೇ, ದಮನ ವಿರೋಧಿ ಗುಣಗಳನ್ನು ನೊಂದವರ ಎದೆಯಲ್ಲಿ ಬಿತ್ತುತ್ತದೆ ಅದರಿಂದಾಗಿಯೇ ಈ ಸಿಟ್ಟು.

‘ರೊಟ್ಟಿ ಮತ್ತು ಕೋವಿ’ ಆರ್ಥಿಕ ಅಸಮಾನತೆಯ ಭೀಕರತೆಯನ್ನು ಚಿತ್ರಿಸುತ್ತದೆ. ಶ್ರಮಜೀವಿಗಳಾದ ರೈತರು, ಕಾರ್ಮಿಕರು, ಮಹಿಳೆಯರು, ಕುಶಲಕರ್ಮಿಗಳು – ಇಂತಹ ಎಲ್ಲರೂ ತಮ್ಮ ದುಡಿಮೆಯಿಂದ ಬಂಗಲೆ ಕಟ್ಟುತ್ತಾರೆ, ಹೊಲಕ್ಕೆ ಹಸಿರು ಹೊದಿಸುತ್ತಾರೆ; ಕುಸುರಿ ಕಲೆಗಳನ್ನು ನಿರ್ಮಿಸುತ್ತಾರೆ, ದುಡಿಮೆಯನ್ನು ಪ್ರೀತಿಸುವ ಇವರಿಗೆ ಸಮಾಜದಿಂದ ಪ್ರೀತಿ ಸಿಗುವುದಿಲ್ಲ.

“ಹಸಿದ ಕೈಗಳಿಗೆ ಪ್ರೀತಿಯೆಂದರೂ ಪ್ರೀತಿ
ಹಾಗೆಂದರೆ ತಟ್ಟಿ ಎದೆಯ ಕದವ
ಕಾದರೂ, ಹಸಿದವರಿಗವು ತೆರೆಯಲೇ ಇಲ್ಲ!
ಎಷ್ಟೆಂದು ತಡೆದಾರು? ತಮ್ಮ ಹಸಿವೆ?”

ಹಸಿವಿನ ತೀವ್ರತೆಗೆ ತಾಳ್ಮೆಯಿರುವುದಿಲ್ಲ. ಸಮಾಜವ ನಿರ್ದಯತೆಗೆ ಕೊನೆಯೂ ಇರುವುದಿಲ್ಲ. ಆದರೆ ದುಡಿಯುವವರು ಬದುಕಬೇಕಾಗಿದೆ. ಹಸಿದವರ ಕೈಗಳು ಎಂಜಲೆಲೆಯಿರುವ ಕಸದ ತೊಟ್ಟಿಗೆ ಕೈಹಾಕಿ ಅನ್ನ ಹುಡುಕುತ್ತವೆ, ಸಿಕ್ಕಷ್ಟನ್ನು ತಿಂದು ತಣ್ಣಗಾಗುತ್ತವೆ.

ಕವಿಗೆ ಆ ಕೈಗಳು ‘ಯಾಚಕ’ ಕೈಗಳಂತೆ ಕಾಣುತ್ತಿಲ್ಲ, ದುಡಿಯುವ ಬಲಿಷ್ಠ ಕಪ್ಪು ಕೈಗಳು ಅವು. ಈಗ ತಮ್ಮ ಮೇಲಿನ ಕ್ರೌರ್ಯ, ಶೋಷಣೆಯನ್ನು ಸಹಿಸಲಾರವು.

“ಕಸದ ತೊಟ್ಟಿಗೆ ಇನ್ನು ಹಸಿದ ಕೈ ಇಳಿಯವು
ಅಂದು ಕೊಂಡೆನು ಅಂಜಿ ನೊಂದುಕೊಂಡು
ನೇಣುಗಂಬವ ಕೂಡ ಧಿಕ್ಕರಿಸಿ ನುಗ್ಗುವರು
ಎತ್ತಿಕೊಳ್ಳಲು ಸಿಕ್ಕ ಕೋವಿ, ಗುಂಡು

ಶೋಷಿತ ಸಮುದಾಯಗಳು ತಮಗಾಗುವ ಅನ್ಯಾಯದ ವಿರುದ್ಧ ಪ್ರತಿಭಟಿಸಲು ಮುನ್ನುಗ್ಗಿದರೆ ತಡೆಯುವರಾರು? ಅಂತಃಕರಣವಿರುವವರು ಅವರನ್ನು ಬೆಂಬಲಿಸುವುದು ಅನಿವಾರ್ಯವಾಗುತ್ತದೆ. ಹಸಿವಿನಂಥ ಮೂಲಭೂತ ಸಮಸ್ಯೆಯ ಮೂಲೋತ್ಪಾಟನೆಗೆ ಅಲ್ಪ ಶಕ್ತಿಯಿಂದ ಏನೂ ಪ್ರಯೋಜನವಿಲ್ಲ. ಪ್ರಬಲ ಪ್ರತ್ಯಸ್ತ್ರ ಬೇಕೇ ಬೇಕು. ಯಾಕೆಂದರೆ: “ಹಸಿದವರು ಕೂಡ ಬದುಕಬೇಕಲ್ಲವೇ? ಕವಿ ಕೇಳುವ ಸಾಮಾಜಿಕ ನ್ಯಾಯದ ಪ್ರಶ್ನೆ ಔಚಿತ್ಯ ಪೂರ್ಣವಾಗಿದೆ.

ಸತ್ತಂತಿರುವ ಬಡವರೂ ಸಮಬಾಳು ಬಾಳುವ ಅಗತ್ಯ ಅಂತಃಕರಣವುಳ್ಳ ಶ್ರೇಷ್ಠ ಮನಸ್ಸಿಗೆ ಮಾತ್ರ ಹೊಳೆಯುತ್ತದೆ. ಕವನದ ನಿರೂಪಕ ‘ಅಂತಃಕರಣ’ವುಳ್ಳ ಪ್ರತಿನಿಧಿಯಾಗಿ ಶೋಷಿತರ ಪರವಾದ ಕ್ರಾಂತಿಯ ಆಶಯ ವ್ಯಕ್ತಪಡಿಸುವುದು ಎಕ್ಕುಂಡಿಯವರ ಸಮಾಜವಾದಿ ಚಿಂತನೆಗೆ ನಿದರ್ಶವಾಗಿದೆ. ಸಮಾಜವನ್ನು ರೂಪಿಸುವ, ಪೋಷಿಸಿದ ‘ದುಡಿಯುವ ಕೈಗಳು’ ತಮ್ಮ ಉಳಿವಿಗಾಗಿ,

ಬದಲಾವಣೆಯ ರೂವಾರಿಗಳೂ ಆಗಬೇಕಾದ ಅನಿವಾರ್ಯತೆಯನ್ನು ಈ ಕಥನ ನಿಖರವಾಗಿ ಸೂಚಿಸಿದೆ.

ಕ್ರಾಂತಿಯ ನಿಷ್ಠುರ ಪ್ರತಿಪಾದನೆಯಲ್ಲಿ ಗೆದ್ದಿರುವ ಕಥನವೆಂದರೆ "ಕಿಡಕಿ ಮತ್ತು ಗಾಲಿಗಳು". ಬಡತನ, ಹಸಿವು, ಕ್ರೌರ್ಯ, ದುಡಿಮೆಯನ್ನು ವಂಚಿಸುವ ಬಂಡವಾಳ ಶಾಹಿಗಳು, ಶೋಷಕರು ಎಲ್ಲಾ ಕಾಲದಲ್ಲಿಯೂ, ಎಲ್ಲಾ ನೆಲಗಳಲ್ಲಿಯೂ ಕಂಡು ಬರುವ ಸಾಮಾಜಿಕ ಸತ್ಯ. ಇದರ ಚಾರಿತ್ರಿಕ ಅರಿವಿನಿಂದ ಕ್ರಾಂತಿಯ ಕನಸು ಬಿತ್ತಿದವನು ಕಾರ್ಲ್‌ಮಾರ್ಕ್ಸ್.

'ಕಿಡಕಿ ಮತ್ತು ಗಾಲಿಗಳು' ಕವಿತೆಯಲ್ಲಿ ನಿರೂಪಿತವಾಗಿರುವ ಶೋಷಣೆಯ ಸರ್ವವ್ಯಾಪಿ ಸ್ಥಿತಿಯು ಎಳೆಯನಾದ ಕಾರ್ಲ್‌ಮಾರ್ಕ್ಸ್‌ನಲ್ಲಿ ಕ್ರಾಂತಿಯ ಕನಸು ಕಟ್ಟುತ್ತದೆ. ಇತಿಹಾಸದ ಚಕ್ರ ಉರುಳಿದಂತೆ ಆ ಕ್ರಾಂತಿಯು ಸಾಕಾರಗೊಳ್ಳುತ್ತದೆ. ಅದನ್ನು ಸಾಕಾರಗೊಳಿಸುವ ಶಕ್ತಿಯಿರುವುದು ದುಡಿಯುವ ವರ್ಗಕ್ಕೆ ಮಾತ್ರ ಎಂದು ಮಾರ್ಕ್ಸ್ ನಂಬಿದ್ದ, ಅದು ಹೇಗೆಂದು ಕನಸು ಕಂಡಿದ್ದ.

" ಹಸಿದವರ ತುತ್ತುಗಳ ಕಸಿದ ಕಪಟಿ
ಗಳು, ಗಾಲಿಗಳ ಬುಡದಲ್ಲಿ ಹುಡಿಯ ಹಾದಿ
ದುಡಿದವರ ಜಾಡುಗಚ್ಚಿದ ಕ್ರೋಧ ಮು
ಷ್ಟಿಯಲಿ, ಹೊಸಯುಗದ ಮಗುವನೆತ್ತುವಳು ದಾದಿ"

"ದುಡಿವ ಜನ ಬರೆವರು ಚರಿತ್ರೆ, ಧಾನ್ಯಗಳ
ತೆನೆಯಲ್ಲಿ, ಕಾಲದ ಕುಲುಮೆಯಲ್ಲಿ
ಹೆಗಲೇರಿ ಕೂತವರ ಕೆಳಗೆಳೆದು ಹಾಕು
ವರು. ಶ್ರಮಜೀವಿಗಳ ಧ್ವಜದ ಗೆಲುವಿನಲ್ಲಿ."

"ದುಡಿವ ಕೈಯುರುಳಿಸುವ ಗಾಲಿಗಳ ವೈ
ಭವಕೆ ಹೆಗಲೊಡ್ಡಬೇಕೆಂಬ ತವಕದೊಳಗೆ
ಹೊಸಯುಗದ ಧೀರ ಮುನ್ನಡೆಯ ಸಂ
ಕಲ್ಪಗಳ ದೃಶ್ಯ ಕಂಡಿದ್ದ ಕಾರ್ಲ, ಕಿಡಕಿಯೊಳಗೆ."

ಕಾರ್ಲ್‌ಮಾರ್ಕ್ಸ್‌ನು ಕ್ರಾಂತಿಯ ಕನಸಿನ ಚಿತ್ರಣವನ್ನು ಎಕ್ಕುಂಡಿಯವರು ಇಲ್ಲಿ ಯಶಸ್ವಿಯಾಗಿ ಹಿಡಿದಿಟ್ಟಿದ್ದಾರೆ. ಇಲ್ಲಿ ಶೋಷಣೆಯ ಅರಿವು ಮೂಡಿಸುವ ಕಿಡಕಿ ಹಾಗೂ ಗಾಲಿಗಳು ಇತಿಹಾಸದ ಬದಲಾವಣೆಯ ಚಕ್ರ ಪ್ರತೀಕಗಳಾಗಿವೆ.

ಶೋಷಣೆಯು ಜಗದ್ವಿಖ್ಯಾತ ಆದರೆ ಮಾರ್ಕ್ಸ್‌ನ ಆಶಯದಂತೆ ಕ್ರಾಂತಿ ನಡೆದದ್ದು ತೀರ ವಿರಳ. ಆದರೂ ಕ್ರಾಂತಿಯ ಕನಸುಗಳು ಮಾರ್ಕ್ಸ್‌ನಂತಹವರ ಕಲ್ಪನೆಯಲ್ಲಿ ಮರುಹುಟ್ಟು ಪಡೆಯುವ ಸಾಧ್ಯತೆಗಳನ್ನು ಈ ಕವಿತೆ ಜೀವಂತವಾಗಿಟ್ಟಿದೆ.

ಆಧುನಿಕ ಕ್ರಾಂತಿಗಳ ಮೂಲಪುರುಷನಾದ ಕಾರ್ಲ್‌ಮಾರ್ಕ್ಸ್ ಶೋಷಣೆಯ ವಿರುದ್ಧದ ಸಿದ್ಧಾಂತಗಳನ್ನು ವೈಜ್ಞಾನಿಕವಾಗಿ ರೂಪಿಸಿದ ಬಹುದೊಡ್ಡ ದಾರ್ಶನಿಕ. ಆತನ ಚಿಂತನೆಯ ಪರಿಧಿಯಲ್ಲಿ ಬರದೇ ಇರುವ ವಿಚಾರಗಳು ಕಡಿಮೆ. ಅದರಲ್ಲೂ ಸಾಮೂಹಿಕ ಹಿತಾಸಕ್ತಿಗೆ ಒತ್ತುಕೊಟ್ಟಿರುವ ಮಾರ್ಕ್ಸ್ ಸಮುದಾಯದ ಹಿತದಲ್ಲಿ ವ್ಯಕ್ತಿಯ ಹಿತವಿದೆ ಎಂದು ಹೇಳುವುದರಲ್ಲಿ, ಹೇಳಿದಂತೆ ಬದುಕುವುದರಲ್ಲಿ ಮಾದರಿ ವ್ಯಕ್ತಿತ್ವ ಉಳ್ಳವನಾಗಿದ್ದ. ವಿಪರ್ಯಾಸವೆಂದರೆ ಅಂತಹ ಕ್ರಾಂತಿ ಪುರುಷನ ಖಾಸಗೀ ಜೀವನ ಅಪಾರವಾದ ಸಂಕಷ್ಟಗಳಿಂದ ಕೂಡಿತ್ತು. 'ಗಿರವಿ ಅಂಗಡಿ'ಯಲ್ಲಿ ಕಥನವು ಅಂತಹ ದಾರುಣ ಜೀವನದ ಚಿತ್ರಣ ನೀಡುತ್ತದೆ. ಔಷಧೋಪಚಾರಕ್ಕಾಗಿ ಮಾರ್ಕ್ಸ್‌ನ ಬಟ್ಟೆಗಳು ಗಿರವಿ ಅಂಗಡಿಗೆ ಅಡವಿಡಲು ಬರುತ್ತವೆ.

ಶೋಷಿತ ಜನರ ದನಿಯಾದ ಮಾರ್ಕ್ಸ್ ಶೋಷಣೆಗೆ ಒಳಪಡಬೇಕಾದ ಬದುಕಿನ ಕ್ರೌರ್ಯವನ್ನು ಈ ಕವಿತೆ ಚೆನ್ನಾಗಿ ಬಿಂಬಿಸುತ್ತದೆ.

"ಹೆಂಡತಿಗೆ ಎದೆ ನೋವು. ಮಗನಿಗೆ ಕಾಯಿಲೆ
ಉಲ್ಬಣ. ಔಷಧಕ್ಕೆ ಇಲ್ಲ ಕಾಸು.
ಇವನ್ನುಳಿದರೆ, ಬೇರೆ ಬಟ್ಟೆಗಳಿಲ್ಲ.
ಯಾರಿಗೂ ಬರಬಾರದಿಂಥ ತ್ರಾಸು".

"ಹಾಗೆಂದ ಆತ ಖುದ್ದಾಗಿ ಬಂದಿಲ್ಲ.
ಉಪಕಾರವಾದೀತು ಇಂಥ ಸಮಯ."
ಬಟ್ಟೆಯೆತ್ತಿಕೊಳ್ಳುತ್ತ, ಸಾಹುಕಾರ ಕೇಳಿ
ದನು, ಬರೆದುಕೊಳ್ಳುತ್ತ ರಶೀತಿಯ".

'ಹೆಸರೇನು ನಿನ್ನದು? ನಿನ್ನ ಆ ಒಡೆಯನದು?'
'ಹೆಲೆನ ಡೆಮ್ಯೂತ-ನನ್ನ ಹೆಸರು.'
ಕಾರ್ಲ್‌ಮಾರ್ಕ್ಸ್-ಒಡೆಯರದು.' ಆಮೇ
ಲೆ ರಶೀತಿಯೊಂದಿಗೆ ಬಂತು ಸ್ವಲ್ಪ ಹಣವು

ಬಡತನದ ವಿರುದ್ಧ ಕ್ರಾಂತಿಯ ಕಿಡಿ ಹಚ್ಚಿದ ವ್ಯಕ್ತಿತ್ವವೊಂದು, ಕ್ರಾಂತಿಗಾಗಿ ತಬ್ಬಲಿತನ ಅನುಭವಿಸುವ ಮಾರ್ಕ್ಸ್‌ನ ಜೀವನ ವಿಪರ್ಯಾಸದ ಚಿತ್ರಣ ನೀಡುವ ಮೂಲಕ ಎಕ್ಕುಂಡಿಯವರು, ಆ ಬದುಕಿಗೆ ವಿಶೇಷವಾದ ಅರ್ಥಗಳನ್ನು ಧ್ವನಿಸಲು ಪ್ರಯತ್ನಿಸಿದ್ದಾರೆ.

"ಅಂಡರ್ಸನ್ ಬೀದಿ ಲಂಡನ್ನಿನಲ್ಲಿ" ಕವಿತೆಯು ಕೂಡ ಕಾರ್ಲ್‌ಮಾರ್ಕ್ಸ್‌ನ ತ್ಯಾಗ ಜೀವನದ ದುರಂತಗಳನ್ನು ಮನಮಿಡಿಯುವಂತೆ ಸೆರೆ ಹಿಡಿದಿದೆ. ಕ್ರಾಂತಿಯ ಆಶಯವನ್ನು ಪ್ರತಿಬಿಂಬಿಸುವ ಈ ಕವಿತೆ,

> ಕಾರ್ಲ್‌ಮಾರ್ಕ್ಸ್ ಅಂದರು. "ಋಣವಂತು ತೀರಿತು.
> ಗಾಯಗಳು ಮಾತ್ರವೆ ಉಳಿದವಲ್ಲ,
> ನೆಲೆಯಿಲ್ಲದವರೆಲ್ಲ ಒಂದಾಗಿ. ನೆಲವೆಲ್ಲ
> ನೆಲೆಯಾಗಿ ಬಾಳ್ವದಿನ ದೂರವಿಲ್ಲ".

ಮೇಲು ಸ್ತರದಲ್ಲಿ ವ್ಯಕ್ತಿ ಚಿತ್ರಣ ನೀಡುತ್ತಿದ್ದರೂ ಮಾನವ ಸಮಾಜದ ಬಡತನ, ಅದರಿಂದಾಗುವ ದುರಂತಗಳು, ಆ ದುರಂತಗಳ ನಡುವೆಯೂ ಕ್ರಾಂತಿಯ ಹೊಣೆಗಾರಿಕೆ ಹೊತ್ತ ಜನನಾಯಕನ ಹೋರಾಟ ಮಾರ್ಗದ ನಿಷ್ಠುರ, ಪ್ರಾಮಾಣಿಕತೆಯನ್ನು ದರ್ಶಿಸುತ್ತವೆ.

ಮೇಲಿನ ಕಥನ ಕವಿತೆಗಳು ಎಕ್ಕುಂಡಿಯವರ ಸಾಮಾಜಿಕ ಚಿಂತನೆಯನ್ನು ಹಿಡಿದಿಡುವಲ್ಲಿ ಸಮರ್ಥವಾಗಿವೆ. ಇವುಗಳಲ್ಲದೆ ಇತರ ಕವನಗಳಲ್ಲಿಯೂ ಸಾಮಾಜಿಕ ಅಸಮಾನತೆಯಂತಹ ವಸ್ತುಸ್ಥಿತಿಗಳು ನಿರೂಪಣೆಗೊಂಡಿವೆ. ಆ ವಸ್ತು ಸ್ಥಿತಿಗಳಿಂದ ಮಾನವ ಪಾರಾಗಿ ಉನ್ನತಿಯ ಕಡೆಗೆ ಸಾಗಬೇಕೆಂಬ ಆಶಯವು 'ಹಿಟ್ಟು ಮತ್ತು ಮಲ್ಲಿಗೆ' ಕವಿತೆಯಲ್ಲಿ ವ್ಯಕ್ತವಾಗಿದೆ. ಹಿಟ್ಟು ಪಡೆಯುವುದು ಆರ್ಥಿಕ ಸಮಸ್ಯೆಯಿಂದ ಬಿಡುಗಡೆಯಾದಂತೆ. ಮಾನವ ಮನಸ್ಸು ಅಷ್ಟಕ್ಕೇ ತೃಪ್ತವಾಗುವುದಿಲ್ಲ. ಹೊಟ್ಟೆ ತುಂಬಿದ ಮೇಲೆ ಮಲ್ಲಿಗೆ ಮುಡಿಯಲು ಹಂಬಲಿಸುತ್ತದೆ. ಇದು ಕೈಗೂಡಿದರೆ ಬದುಕು ಪೂರ್ಣಗೊಂಡಂತೆ.

ಎಕ್ಕುಂಡಿಯವರು 'ಹಿಟ್ಟು ಮತ್ತು ಮಲ್ಲಿಗೆ' ಕಥನದಲ್ಲಿ ಸಾಮಾಜಿಕ ಬದುಕಿನ ಎರಡು ಅತಿಗಳನ್ನು ವರ್ಣಿಸುತ್ತಲೇ, ಅವುಗಳನ್ನು ಪಡೆಯುವುದರಿಂದ ಮಾನವ ಬದುಕಿಗೆ ಸಿಗುವ ಪೂರ್ಣಾರ್ಥದ ಸಾಧ್ಯತೆಗಳು ಹೇಗೆ ದೊರೆಯುತ್ತವೆ ಎಂಬುದನ್ನು ಸೂಚಿಸಿದ್ದಾರೆ. ಎಕ್ಕುಂಡಿಯವರು ಸಂಘರ್ಷ ಮನೋಭಾವದವರಲ್ಲ, ಸಾಮಾಜಿಕ ಸಮನ್ವಯತೆ ಅವರ ಆದರ್ಶವಾಗಿದೆ. ಆದ್ದರಿಂದ

ಅವರ ಸಾಮಾಜಿಕ ಚಿಂತನೆಯನ್ನು ನಿರೂಪಿಸುವ ಎಲ್ಲ ಕವಿತೆಗಳು ಈ ಸಮನ್ವಯ ದೃಷ್ಟಿಯನ್ನು ಮೀರಲಾರವು.

ಉ) ವಿಡಂಬನೆ ಮತ್ತು ವೈಚಾರಿಕ ಕಥನಗಳು

ಭಕ್ತಿ, ಆಧ್ಯಾತ್ಮದಂತಹ ತತ್ವಗಳ ವರ್ಣನೆಯಲ್ಲಿ ಅತೀವ ಶ್ರದ್ಧೆ ಇಟ್ಟಿರುವ ಎಕ್ಕುಂಡಿಯವರು, ಅಲ್ಲಿ ಕಂಡುಬರುವ ಕಪಟತನಗಳನ್ನು ಸಹ ಅಷ್ಟೇ ನಿಷ್ಠುರ ನೆಲೆಯಲ್ಲಿ ಟೀಕಿಸಿ, ವಿಮರ್ಶೆ ಮಾಡಿದ್ದಾರೆ. ದೇವಾಲಯ, ಮಠಗಳು ಭಕ್ತಿಯ ಶ್ರದ್ಧಾ ಕೇಂದ್ರಗಳು. ಅಲ್ಲಿ ನಿರರ್ಥಕ ಆಚಾರಗಳ ಒಣ ಪ್ರದರ್ಶನಕ್ಕೆ ಅವಕಾಶವಿಲ್ಲ.

'ದಾಸಿಮಯ್ಯ ಮತ್ತು ಬೆಕ್ಕು' ಕಥನವು ನಿಜ ಭಕ್ತಿ ಮತ್ತು ಕಪಟ ಭಕ್ತಿಗಳ ತೌಲನಿಕ ಚರ್ಚೆ ನಡೆಸುತ್ತದೆ. ಶಿವ ಭಕ್ತಿಯ 'ಬಿಲ್ವಮಠ'ದ ಭಕ್ತರು ಭಸ್ಮ, ಧೂಪ, ದೀಪ, ಹಾಡು, ಗಂಟೆ, ಬಿಲ್ವಪತ್ರೆಗಳನ್ನು ಬಳಸುವ ಮೂಲಕ ತಮ್ಮ ಎಂದಿನ ಶಿವನಿಷ್ಠೆಯನ್ನು ಬಹಿರಂಗ ಪಡಿಸುವಂತಹವರು. ಆದರೆ ಕಾಯಕ ನಿಷ್ಠನಾದ ದಾಸಿಮಯ್ಯನಿಗೆ ಬಿಲ್ವಮಠದ ಭಕ್ತಿಯ ಆಚರಣೆಗಳಲ್ಲಿ ಪಾಲ್ಗೊಳ್ಳಲು ಬಿಡುವಿಲ್ಲ. ಕಾಯಕವೇ ಶಿವ ಪೂಜೆ ಎಂದು ನಂಬಿರುವಂತಹವನು, ಗದ್ದುಗೆಯ ಕಾಣಲು ಬಿಡುವಿಲ್ಲ. ಉಳಿದ ಭಕ್ತರಿಗೆ, ದಾಸಿಮಯ್ಯನ ಜೀವನ ಕಪಟ ಭಕ್ತಿಯಂತೆ ಕಾಣುತ್ತದೆ.

"ಮಠವಿಲ್ಲ ಗುರುವಿಲ್ಲ ಇವನೆಂಥ ಭಕ್ತನೊ
ತೆರೆದೀತೆ ಕೈಲಾಸ ಇವಗೆ ಕದವ?"

ಎಂದು ತಮ್ಮ ತಮ್ಮೊಳಗೆ ಕುಹಕದಿಂದ ಆಡಿಕೊಳ್ಳುತ್ತಾರೆ.

ದಾಸಿಮಯ್ಯನ ಶಿವನಿಷ್ಠೆ ಕುಹಕಿಗಳಿಗೆ ತಿಳಿಯುವುದಾದರೂ ಹೇಗೆ? ಹಗಲಿರುಳು ಮನದ ಮಗ್ಗದಲ್ಲಿ ಮಗ್ನನಾಗಿ ನೇಯುತ್ತಿರುವ ಅವನ ಅಪ್ಪಟ ಭಕ್ತಿಯ ಸತ್ಯ ತಿಳಿಯದೆ ಹಂಗಿಸುತ್ತಾರೆ.

"ಆರೆಂಟು ವರ್ಷಗಳ ಅಪರೂಪ ನೂಲೆಳೆದು
ದುಗ್ಗಲೆಯು ನೀಡಿರುವ ಲಡಿಯ ಹೊಯ್ದು
ಮನವೆಂಬ ಮಗ್ಗದಲಿ ನೆನಹೆಂಬ ಎಳೆಬಿಟ್ಟ
ರಾಮನಾಥ ಎಂಬ ಬಟ್ಟೆ ನೆಯ್ದು"

ಹೀಗೆ ನೆಯ್ದ ಬಟ್ಟೆಯಲ್ಲಿ ಶಿವನ ಹೆಜ್ಜೆ ಮೂಡುತ್ತವೆ.

ಅಪರೂಪಕ್ಕೊಮ್ಮೆ ದಾಸಿಮಯ್ಯ ಮಠಕ್ಕೆ ಬಂದಿದ್ದಾನೆ. ಕೈ ಮುಗಿದು ಕುಳಿತ ದಾಸಿಮಯ್ಯ ಕಪಟ ಭಕ್ತರಿಗೆ ಕಪಟಿಯಂತೆ ಕಂಡಿದ್ದಾನೆ. ಅವರು ಅವನನ್ನು ಹಂಗಿಸದೆ ಬಿಡುವುದಿಲ್ಲ.

"ಏನು ಬಂದಿರಿ ದಾಸಿಮಯ್ಯಗಳೆ? ಹದುಳವೆ?
ನೆನಪಾಯಿತೆ ಬಿಲ್ವ ಮಠವು ನಿಮಗೆ?"

ಇಂತಹ ಕುಹಕಕ್ಕೆ ದಾಸಿಮಯ್ಯ ವಿಚಲಿತನಾಗುವುದಿಲ್ಲ. ಸುಮ್ಮನೆ ಕುಳಿತು ಅಲ್ಲಿಯ ವಿದ್ಯಮಾನಗಳನ್ನು ಗ್ರಹಿಸುತ್ತಿರುತ್ತಾನೆ. ಗದ್ದುಗೆ ಬಳಿ ಒಂದು ಬೆಕ್ಕು ಕಣ್ಣು ಮುಚ್ಚಿ ಧ್ಯಾನದಲ್ಲಿರುವಂತೆ ತೋರಿಸಿಕೊಳ್ಳುತ್ತಿದೆ. ಆಗ ಇಲಿಯೊಂದು ಬಿಲದಿಂದ ಹೊರಗೆ ಓಡುತ್ತಿರುತ್ತದೆ. ಕಣ್ಮುಚ್ಚಿ ಕುಳಿತ ಬೆಕ್ಕು ಛಂಗನೆ ಹಾರಿ ಇಲಿಯನ್ನು ಹಿಡಿಯುತ್ತದೆ. ದಾಸಿಮಯ್ಯ ಸುಮ್ಮನಾಗುವುದಿಲ್ಲ. ಅದುವರೆಗೂ ತನ್ನನ್ನ ಹಂಗಿಸುತ್ತಿದ್ದವರಿಗೆ ತಿರುಗೇಟು ನೀಡುತ್ತಾನೆ.

"ದಾಸಿಮಯ್ಯ ನುಡಿದ ಅಯ್ಯಗಳೇ ಕಂಡಿರೇ
ಬರಿಸಟುಗನ ಭಕ್ತಿಯಾಟ ಇಂದು
ಕಣ್ಣು ಮುಚ್ಚಿದವರೆಲ್ಲ ಧ್ಯಾನ ಮಾಡುವುದಿಲ್ಲ
ಯಾವುದೊ ಇಲಿಗೆ ಕಾದಿರುವರೆಂದು"

ಭಕ್ತನಿಗಿರಬೇಕಾದ ನಿರ್ಮಲ ವ್ಯಕ್ತಿತ್ವವನ್ನು ದಾಸಿಮಯ್ಯ ಅಲ್ಲಿಯ ಭಕ್ತರಿಗೆ ತಿಳಿಯಪಡಿಸುತ್ತಾನೆ. ಆದರೆ ಆ ಭಕ್ತರು ಟೀಕೆ, ವಿಮರ್ಶೆಗಳನ್ನು ಸ್ವೀಕರಿಸುವಂತಹವರೆ?

"ಬಿಲ್ವಮಠ ಈಗೀಗ ಬಿಲದ ಮಠವಾಗಿಹುದು
ಯಾರಲ್ಲಿಯೂ ಇಲ್ಲ, ಶಿವನ ಹುಚ್ಚು,
ಸಿಕ್ಕಿದ್ದು ಸಿಕ್ಕಷ್ಟು ಮುಕ್ಕಿ ಕಣ್ಮರೆಯಾಗಿ
ಬದುಕಿರುವ ಇಲಿಗಳೇ ಇಲ್ಲಿ ಹೆಚ್ಚು"

ದೇವರು, ಧರ್ಮ, ಭಕ್ತಿಗಳ ಹೆಸರಿನಲ್ಲಿ ಅವುಗಳ ಶ್ರದ್ಧಾಕೇಂದ್ರಗಳಾದ ಮಠ, ದೇವಾಲಯಗಳು ತಲುಪಿರುವ ದುಃಸ್ಥಿತಿಯನ್ನು ಕಥನದ ಈ ಕೊನೆಯ ಸಾಲುಗಳು ಸಮರ್ಥವಾಗಿ ಪ್ರತಿಬಿಂಬಿಸಿವೆ.

ಭಕ್ತಿಯ ಒಳ-ಹೊರಗು ಎಕ್ಕುಂಡಿಯವರ ಅಂತರ್ ದೃಷ್ಟಿಗೆ ಚೆನ್ನಾಗಿ ಗೊತ್ತು. ಆದ್ದರಿಂದಲೇ ಇಂತಹ ರಚನೆಗಳು ಅವರಿಂದ ಸಾಧ್ಯವಾಗಿದೆ. ದಾಸಿಮಯ್ಯ 'ಕಾಯಕವೇ ಕೈಲಾಸ' ಎಂದು ನಂಬಿರುವ ಪ್ರಾಮಾಣಿಕ ಭಕ್ತ. 'ಭಕ್ತ'ನ ವೇಷ ಭೂಷಣಗಳನ್ನು ಧರಿಸಿರುವ ಬಿಲ್ವಮಠದ ಭಕ್ತರು ಬೆಕ್ಕಿನ ಸ್ವಭಾವದವರು. ಬೆಕ್ಕಿನ ಅನ್ಯಾಸಕ್ತ ಸ್ಥಿತಿಯೇ ಅವರದ್ದಾಗಿದೆ. ಆದ್ದರಿಂದ ಅವರ ಭಕ್ತಿಯು ಕೇವಲ ನಟನೆ.

ಧಾರ್ಮಿಕ ಜಗತ್ತಿನ ಇಂತಹ ಕಟುವಾಸ್ತವವನ್ನು ಚಿತ್ರಿಸುವಾಗ ಕವಿ ಎಕ್ಕುಂಡಿಯವರು ತೋರಿರುವ ವಸ್ತುನಿಷ್ಠತೆ ಅನನ್ಯವಾದುದು. ಕಾಯಕ ನಿಷ್ಠೆ, ನಿರ್ಮಲ ಭಕ್ತಿ, ಪ್ರಾಮಾಣಿಕತೆಗಳಿಗೆ

ದಾಸಿಮಯ್ಯನೂ ಹಾಗೂ ಶುಷ್ಕ ಆಚರಣೆ, ಕಪಟತನ, ಅಪ್ರಾಮಾಣಿಕತೆಗಳಿಗೆ ಬೆಕ್ಕು, ಬಿಲ್ವಮಠಗಳು ಪ್ರತಿಮೆಗಳಾಗುತ್ತವೆ. ಪ್ರತಿಮೆಗಳ ಮುಖಾಮುಖಿಯಲ್ಲೇ ಕವಿ ಒಂದು ಸನ್ನಿವೇಶದ ವಿರೋಧಾಭಾಸಗಳನ್ನು ಸಹಜವಾಗಿ ಧ್ವನಿಸಿದ್ದಾರೆ. ನೇರ ಟೀಕೆ, ವಿಮರ್ಶೆಗಳ ಮೊರೆ ಹೋಗದೆ ಅದರ ವಿಡಂಬನೆ ಮಾಡಿದ್ದಾರೆ. ಸಹಜ ಕವಿಗೆ ಮಾತ್ರ ಇಂತಹ ರಚನೆ ಮಾಡಲು ಸಾಧ್ಯ.

'ಅವಧೂತ' ಕಥನದ ಶುಕ ಮುನಿಯು ಆತ್ಮೋನ್ನತಿಯ ಕ್ಷಿತಿಜಗಳನ್ನು ಹುಡುಕಿ ಹೊರಡುವ ಅಲೌಕಿಕ ವಿಚಾರವನ್ನು ನಿರೂಪಿಸುತ್ತದೆ. ಏಳು ಮಂದಿ ದೇವ ಕನ್ನಿಕೆಯರು ಅವನನ್ನು ಸೂಜಿಗಲ್ಲಿನಂತೆ ಆಕರ್ಷಿಸಿದರೂ, ಅವನ ಮನಸ್ಸು ಬ್ರಹ್ಮ ಸಚಿದಾನಂದ ಮಗ್ನವಾಗಿರುತ್ತದೆ. ಲೌಕಿಕ ಆಕರ್ಷಣೆಗಳಿಂದ ನಿರ್ಲಿಪ್ತರಾಗಿ ಉಳಿಯದೆ ಅಲೌಕಿಕ ಉನ್ನತಿ ಸಾಧ್ಯವಿಲ್ಲವೆಂಬ ಸಂದೇಶ ಈ ಕವಿತೆಯಲ್ಲಿದೆ.

'ಉಭಯ ಸರಸ್ವತಿ' ಕಥನವು ಶಂಕರ ಭಗವತ್ಪಾದರ ಜ್ಞಾನ ಮೀಮಾಂಸೆಗೆ ನಿದರ್ಶನವಾಗಿದೆ. ಆತ್ಮದ ಹಸಿವು ನೀಗುವುದು ಹೇಗೆ ಎಂಬ ವಾದ–ವಿವಾದ ನಡೆದು, ಆತ್ಮೋನ್ನತಿಗೆ ಅಡ್ಡಿಯಾಗಿರುವ ಮಾಯೆಯನ್ನು ಗೆಲ್ಲುವ ಮಾರ್ಗದ 'ದರ್ಶನ' ಮಾಡಿಸುತ್ತದೆ ಈ ಕಥನ.

"ಸಂಸಾರಿಗ ಸನ್ಯಾಸಿಯು ಕಡೆದರು
ವೇದ ಸಮುದ್ರದ ವಿಸ್ತಾರ.
ಕರ್ಮವೋ? ಜ್ಞಾನವೋ? ತೀರದ ತೀರವು
ಪರಬ್ರಹ್ಮವಪರಂ ಪಾರ

ಫಕ್ಕನೆ ಮಂಡನ ಮಿಶ್ರರ ಕೊರಳಿನ
ಮಾಲೆಯು ಅರ್ಥಕೆ ಬಾಡಿತ್ತು.
ಉಭಯ ಸರಸ್ವತಿ ತೇಜಸ್ವಿನಿ ಸತಿ
ನುಡಿದರು ವಿಪ್ರರ ಸಭೆಗೆಲ್ಲ.

"ಮಂಡನ ಮಿಶ್ರರ ಸೋಲಾದರು, ಅವ
ರರ್ಧಾಂಗಿಗೆ ಸೋಲ್ಬರಲಿಲ್ಲ."

ಶಂಕರಚಾರ್ಯರು ಪ್ರತಿಪಾದಿಸಿದ ಜ್ಞಾನ ತತ್ವದ ದಿಗ್ವಿಜಯವನ್ನು ಎಕ್ಕುಂಡಿಯವರು ಇಲ್ಲಿ ಸೊಗಸಾಗಿ ನಾಟಕೀಕರಿಸಿದ್ದಾರೆ.

"ಹಣ್ಣಿನ ಮರದಲಿ ಹಕ್ಕಿಗಳೆರಡಿವೆ

ಒಂದಕೆ ತಿನ್ನುವ ಒಲವಿಲ್ಲ.
ತಿನ್ನುವ ಹಕ್ಕಿಯ ನೋಡುತ ಕುಳಿತಿದೆ
ಜ್ಞಾನಿಗೆ ಕರ್ಮದ ಫಲವಿಲ್ಲ."

ಜ್ಞಾನ-ಕರ್ಮಗಳ ಜಿಜ್ಞಾಸೆಗೆ ಕವಿ ನೀಡಿರುವ ವ್ಯಾಖ್ಯಾನವಿದು.

'ಮಿಸುನಿ ಜಿಂಕೆ' ಕಥನವು ವರ್ತಮಾನಕ್ಕೂ ಪುರಾಣ ಲೋಕಕ್ಕೂ ಸಂಬಂಧ ಕಲ್ಪಿಸುವ ವಿಶಿಷ್ಟ ಗೀತೆ. ಕವಿತೆಯ ನಿರೂಪಕನು ರಾಮನ ಗೆಲುವಿನ ತಾಣವಾದ ಮಿಥಿಲೆಯ ದರ್ಶನದ ಅದಮ್ಯ ಹಂಬಲ ವ್ಯಕ್ತ ಪಡಿಸುತ್ತಾರೆ.

"ಎಂದಾದರೊಂದು ದಿನ ನಾನು ಮಿಥಿಲೆಗೆ ಹೋಗಿ
ಬೀದಿಬೀದಿಯನಲೆದು ನೋಡಬೇಕು
ಅಲ್ಲಿ ಎಲ್ಲಾದರೂ ಮರದ ನೆರಳಿಗೆ ಕುಳಿತು
ರಾಮಭದ್ರನ ಮಹಿಮೆ ಹಾಡಬೇಕು"

ರಾಮಶ್ರದ್ಧೆಯೊಂದೇ ಆ ಪುರಾಣ ಲೋಕವನ್ನು ಮನ್ಮಯ ದಾರಿಯಲ್ಲಿ ಕ್ರಮಿಸುವಂತೆ ಮಾಡುತ್ತದೆ. ವರ್ತಮಾನದಲ್ಲಿ ನಿಂತು ಮಿಥಿಲೆಯನ್ನು ಸಾಕ್ಷಾತ್ ದರ್ಶನ ಮಾಡಬೇಕೆನ್ನುವ ಆಸೆ ರಾಮಭಕ್ತಿಯ ಪ್ರತೀಕವಾಗಿದೆ. ಮಿಥಿಲೆಗೆ ಮಾನಸಿಕ ಪಯಣ ನಡದೇ ಹೋಗುತ್ತದೆ.

ಕಥನದ ಅಂತ್ಯದಲ್ಲಿ,

"ಎಂದಾದರೊಂದು ದಿನ ನಾನು ಮಿಥಿಲೆಗೆ ಹೋಗಿ
ಬೀದಿಬೀದಿಯನಲೆದು ನೋಡಿ ಬರುವೆ
ರಾಮಭದ್ರನ ಕಥೆಯ ಹಾಡಿ ಕರಡಿಗೆಯಲ್ಲಿ
ಜನಕರಾಜನ ಹೊಲದ ಮಣ್ಣು ತರುವೆ"

ಮಿಥಿಲೆಯ ಮನೋ ದರ್ಶನದಿಂದ ಆಕರ್ಷಿತನಾದ ನಿರೂಪಕನ ಮನಸ್ಸು, ಧನ್ಯತೆಯ ಭಾವದಿಂದ ಅಂತಹ ಅಪೂರ್ವ ನೆಲದ ವಾಸ್ತವಿಕ ಸ್ಪರ್ಶಕ್ಕಾಗಿ ಧೃಡ ಸಂಕಲ್ಪ ಮಾಡುತ್ತದೆ. ಭಕ್ತಿ ಮತ್ತು ರಾಮರಾಜ್ಯದ ಕ್ರಾಂತಿಗಳು ಇಲ್ಲಿ ಒಟ್ಟುಗೂಡಿವೆ. ಪುರಾಣ ಕಾಲದ ಜೀವನ ಮಾದರಿಗಳನ್ನು ಆಧುನಿಕ ಕಾಲದಲ್ಲಿಯೂ ಸಾಕಾರಗೊಳಿಸಿಕೊಳ್ಳಬೇಕೆಂಬ ಆಶಯವು, ಎಕ್ಕುಂಡಿಯವರ ಮನೋಧರ್ಮಕ್ಕೆ ಅನುಗುಣವಾಗಿಯೇ ಇಲ್ಲಿ ವ್ಯಕ್ತವಾಗಿದೆ.

ಇಡೀ ನಿಸರ್ಗವೇ ತಾತ್ವಿಕ ರೂಪವನ್ನು ಧಾರಣ ಮಾಡಿರುವ ವಿಚಾರವನ್ನು 'ಗುರು-

ಹಸಾದವಿದು ಸಮೀರ' ಕಥನದಲ್ಲಿ ನೋಡಬಹುದು. ಪ್ರಕೃತಿಯ ಒಂದೊಂದು ವಿದ್ಯಾಮಾನವು, ಅಲ್ಲಿರುವ ವ್ಯವಸ್ಥೆಯು ದೈವಿಕ ನಿಯಮಾವಳಿಯಂತೆ ನಡೆಯುತ್ತಿದೆ ಎಂಬ ತಾತ್ವಿಕ ತಿಳುವಳಿಕೆ ಇಲ್ಲಿ ಆಗುತ್ತದೆ.

'ಬಂಡೆ, ಹುಡುಗ ಮತ್ತು ಬೆಸ್ತ' ಕಥನದಲ್ಲಿ ಸಮಾಜದ ಬದುಕಿನ ವಿಸಂಗತಿಗಳನ್ನು ಬದುಕಿನ ಹಾಡಾಗಿ ರೂಪಾಂತರಿಸುವ ವೈಚಾರಿಕತೆಯ ದರ್ಶನವಾಗುತ್ತದೆ. 'ನನ್ನ ಹಾಗೆಯೇ' ಕಥನವು ಬಾಹುಬಲಿಯ ಮಸ್ತಕಾಭಿಷೇಕ ಹಾಗೂ ಪುಟ್ಟ ಮಗುವಿನ ಎಣ್ಣೆ ಮಜ್ಜನಗಳ ಸಮೀಕರಣದಲ್ಲಿ ಚರಿತ್ರೆಗೂ ವಾಸ್ತವಿಕತೆಗೂ ಇರುವ ಸಾಮ್ಯತೆಗಳನ್ನು ಚರ್ಚಿಸುತ್ತದೆ.

ಎಕ್ಕುಂಡಿಯವರ ಒಟ್ಟು ವೈಚಾರಿಕತೆಯು ಲೌಕಿಕ, ಅಲೌಕಿಕ, ಇತಿಹಾಸ, ನಿಸರ್ಗ ಎಂಬ ಭೇದ ಭಾವಗಳಿಲ್ಲದೆ ಸಾಗುತ್ತದೆ. ಪ್ರಧಾನವಾಗಿ ಅವರ ವಿಚಾರ ಸರಣಿಯು ವೈಜ್ಞಾನಿಕ ಎನ್ನುವುದಕ್ಕಿಂತ ಆಧ್ಯಾತ್ಮಿಕವಾದುದು, ತಾತ್ವಿಕವಾದದು. ಪುರಾಣ, ಪ್ರಕೃತಿ, ಸಮಾಜದ ವಸ್ತು ಸ್ಥಿತಿಗಳನ್ನು ದ್ವೈತ ಭಾವಗಳಲ್ಲಿ ಮಂಡಿಸುತ್ತಾ, ಅವುಗಳ ನಡುವೆ ಒಂದು ಬಗೆಯ ಸಮನ್ವಯತೆಯನ್ನು ಆತ್ಮ ಪರಮಾತ್ಮದ ಬೆಸುಗೆಯಂತೆ ಸಾಧಿಸುತ್ತಾರೆ. ಈ ಹಿನ್ನೆಲೆಯಲ್ಲಿ ಎಕ್ಕುಂಡಿಯವರ ವೈಚಾರಿಕತೆಯು ಬಹುಪಾಲು ಮಧ್ವ ತತ್ವಗಳಿಂದ ಪ್ರೇರಿತವಾಗಿದೆ ಎನ್ನಬಹುದು.

ಊ) ಜೀವನ ಜಿಜ್ಞಾಸೆಯ ಕಥನಗಳು

ಜೀವನ ಜಿಜ್ಞಾಸೆಯು ಮಾನವ ಸಮಾಜದಲ್ಲಿ ಹಿಂದಿನಿಂದಲೂ ಬೇರೆ ಬೇರೆ ರೂಪಗಳಲ್ಲಿ ನಡೆದುಕೊಂಡು ಬಂದಿದೆ. ಸಾಹಿತ್ಯವು ಕೂಡ ಆ ಜಿಜ್ಞಾಸೆಯಲ್ಲಿ ಹಿಂದೆ ಬಿದ್ದಿಲ್ಲ. ಸಾಹಿತ್ಯದ ಗುರಿ ಜೀವನವೇ ಆಗಿರುತ್ತದೆ. ಈ ಮಾತಿಗೆ ಯಾವ ಭಾಷೆಯ ಯಾವ ಕಾಲದ ಸಾಹಿತ್ಯವು ಹೊರತಾಗಿ ಉಳಿಯುವುದಿಲ್ಲ. ಜೀವನ್ನಕ್ಕೆ ಎರಡು ಮುಖಗಳಿದೆ, ಒಂದು: ಉನ್ನತಿ, ಎರಡು: ಅವನತಿ.

ಸು.ರಂ.ಎಕ್ಕುಂಡಿಯವರು ಜೀವನವನ್ನು ಅದರ ವಾಸ್ತವಿಕ ನೆಲೆಗಳಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡುತ್ತಾರೆ. ಅದಕ್ಕಾಗಿ ಅವರು ಆರಿಸಿಕೊಳ್ಳುವ ವಸ್ತು–ವಿಷಯಗಳು ಪುರಾಣ, ಇತಿಹಾಸ, ವಾಸ್ತವಿಕ ನೆಲೆಗಳಿಗೆ ಸೇರಿದವುಗಳಾಗಿವೆ. ಅಂತಹ ಕವಿತೆಗಳಲ್ಲಿ ಪಾರಿವಾಳಗಳು, ಪಯಣ, ಹುಡುಗಿಯ ಕತೆ, ಮಂಜುಗೌಡನ ಕತೆ, ಕಣಗಿಲು ಗಿಡದಲ್ಲಿ ಹುಡುಗ, ಹುಂಜ ಮತ್ತು ಕಮಂಡಲ, ಹುಳ ಮತ್ತು ಕಿರೀಟ, ಅರಣ್ಯಾನಿ ಮುಂತಾದ ಕವಿತೆಗಳನ್ನು ಹೆಸರಿಸಬಹುದು.

'ಪಾರಿವಾಳ'ಗಳು ಕವಿತೆಯು ಮೋಹ, ಮಮಕಾರಗಳು ಸರ್ವನಾಶಕ್ಕೆ ನಾಂದಿಯಾಗುವ ಕರುಣಾಜನಕ ಕತೆಯನ್ನು ಹೇಳುತ್ತದೆ. ದಟ್ಟವಾದ ಕಾಡಿನಲ್ಲಿ ಒಂದು ಜೋಡಿ ಪಾರಿವಾಳ, ಪುಟ್ಟ

ಗೂಡಿನಲ್ಲಿ ತನ್ನ ಮರಿ ಪಾಳವಾಳಗಳೊಂದಿಗೆ ಜೀವಿಸುತ್ತದೆ. ಸಂತೋಷದ ದಿನಗಳಲ್ಲಿದ್ದಾಗ ಒಬ್ಬ ಬೇಡ ಅಲ್ಲಿಗೆ ಬಂದು, ಬಲೆ ಬೀಸಿ ಮರಿ ಪಾರಿವಾಳಗಳನ್ನು ಸೆರೆ ಹಿಡಿಯುತ್ತಾನೆ. ಮರಿ ಪಾರಿವಾಳಗಳ ದುಸ್ಥಿತಿಗೆ ಸಂಕಟ ಪಟ್ಟು ಅವುಗಳನ್ನು ಪಾರು ಮಾಡಲು ಹೋಗಿ ತಾಯಿ ಪಾರಿವಾಳ ತಾನೇ ಬಲೆಯಲ್ಲಿ ಸಿಕ್ಕಿ ಬೀಳುತ್ತದೆ. ಇದನ್ನೆಲ್ಲಾ ಕಂಡ ಗಂಡು ಪಾರಿವಾಳ ವ್ಯಥೆಯನ್ನು ಸಹಿಸಲಾರದೆ ತಾನೂ ಬಲೆಯಲ್ಲಿ ಸೇರಿಕೊಳ್ಳುತ್ತದೆ. ಹೀಗೆ ಇಡೀ ಪಾರಿವಾಳದ ಸಂಸಾರ ಬಲೆಯಲ್ಲಿ ಸಿಕ್ಕಿ ಬಿದ್ದು ಬೇಡನ ವಶವಾಗುತ್ತದೆ.

ಬೇಡನಿಗೆ ಹಸಿವೇ ಮುಖ್ಯ. ಅದಕ್ಕಾಗಿ ಅವನು ಬಲೆಯಲ್ಲಿ ಸಿಕ್ಕಿದ ಪಾರಿವಾಳಗಳೆಲ್ಲವನ್ನೂ ನಿರ್ದಯವಾಗಿ ಹೊತ್ತುಕೊಂಡು ಹೋಗುತ್ತಾನೆ. ಪ್ರೀತಿ, ವಾತ್ಸಲ್ಯಕ್ಕೆ ಕಟ್ಟುಬಿದ್ದ ಪಾರಿವಾಳದ ಸಂಸಾರ ದುರಂತವನ್ನು ಕಾಣುತ್ತದೆ. ಕವಿಯು ಕವನದ ಕೊನೆಗೆ ವಿನಾಶಕಾರಿಯಾದ ವ್ಯಾಮೋಹ ಬೇಡ ಎಂಬ ಸಂದೇಶ ಹೊರಡಿಸಿದ್ದಾರೆ. ಅದರರ್ಥ ವ್ಯಾಮೋಹವನ್ನು ಗೆದ್ದು ಏನೇ ಆದರೂ ಸಹಿಸಿಕೊಂಡು ಬಾಳುವುದೇ ಬದುಕಿನ ಅರ್ಥ ಎಂಬ ಆಶಯ ಇಲ್ಲಿದೆ.

"ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ
ವ್ಯಾಮೋಹವನು ತೊರೆದು ಬಾಳಬೇಕು
ಏನು ಬಂದರೂ ಕೂಡ ತಾಳಬೇಕು"

ಈ ಮಾತುಗಳಲ್ಲಿ ಕವಿಯು ಬದುಕಿನ ದುರಂತಗಳಿಂದ ಮಾನವರು ನಿರ್ಲಿಪ್ತರಾಗುವುದನ್ನು ಕಲಿಯಬೇಕು ಎಂಬ ಬೋಧನೆ ಮಾಡಿದ್ದಾರೆ. ಹೀಗೆ ಕವನದ ಮುಖ್ಯಾರ್ಥವು ವಾಚ್ಯವಾಗಿ ಕಥನದ ಕಲಾತ್ಮಕತೆಗೆ ತೊಡಕಾಗಿದೆ. ಎಕ್ಕುಂಡಿಯವರು ವಿಧಿನಿಯಮದಲ್ಲಿ ನಂಬಿಕೆ ಇಟ್ಟಿರುವವರಾದ್ದರಿಂದ ಇಂತಹ ನಿಲುವು ತಾಳಿರಬಹುದು.

'ಪಯಣ' ಕಥನವು ಪುರಾಣ ಕಾಲದ ಒಂದು ಕಥಾನಕ. ಪರಂಜ್ಯೋತಿ ಸ್ವರೂಪನಾಗುವ ಮಹಾದಾಸೆಯಿಂದ ಇಂದ್ರ ಊರ್ಧ್ವ ಮುಖಿಯಾಗಿ ಸುವರ್ಣರಥ ಕುಳಿತು ಪ್ರಯಣ ಬೆಳೆಸುತ್ತಾನೆ. ಈ ಪಯಣದಲ್ಲಿ ಎದುರಾಗಬಹುದಾದ ತಾಮಸಗಿರಿಗಳನ್ನು ಅಳಿಸಲು, ವಜ್ರಾಯುಧದ ಜೊತೆಗೆ ತನ್ನ ಶಿಷ್ಯ ಕುತ್ಸ ಕುಮಾರನನ್ನು ಬೆಂಬಲಕ್ಕೆ ಇಟ್ಟುಕೊಂಡಿದ್ದಾನೆ.

ಅವರಂದುಕೊಂಡಂತೆ ಅಸುರರು ಆಕ್ರಮಣ ಮಾಡಿ ನಾನಾ ಬಗೆಯ ಕಷ್ಟಗಳನ್ನು ಕೊಡುತ್ತಾರೆ. ಇಂದ್ರ ವಜ್ರಾಯುಧದಿಂದ ಹೊಡೆದರೆ, ಕುತ್ಸಕುಮಾರ "ತೇಜಸ್ಸಿನಾವಧೀತಮಸ್ತು" ಎಂದು ಹೇಳಿ ದಿತಿ ಸಂತಾನವನ್ನು ಸಂಹರಿಸುತ್ತಾರೆ.

"ಬರ್ದಿಲ ಪಥದಲಿ ಸುವರ್ಣರಥದಲಿ ಅಮರಾವತಿಯನು ಮುಟ್ಟಿರಲು

ದೇವೇಂದ್ರನ ಪ್ರತಿರೂಪದ ರೂಪವ ಕುತ್ಸಕುಮಾರನು ತೊಟ್ಟಿರಲು
ಸುರಪತಿಯಮಳರ ಕಾಣುತ ವಿಸ್ಮಿತಳಾದಳು ನಾಕದೊಳಿಂದ್ರಾಣಿ
ಸತ್ಯಸ್ವರೂಪವನರಿತಳು ಗುರತಿಸಿ ಸಸ್ಮಿತಳಾದಳು ಸುರರಾಣಿ.
ಬರ್ದಿಲ ಪಥದಲಿ ಜೀವನ ರಥದಲಿ ಮುತ್ತಿನ ಮಂಟಪಕಂಬಗಳು
ಪಯಣಕೆ ತೆರಳಿದ ಜೀವಗಳೆಲ್ಲಾ ದೇವರವೇ ಪ್ರತಿಬಿಂಬಗಳು
ನರನೊಳಗಿನ ನಾರಾಯಣನುದಯಿಸಿ ನರಕಾಸುರನನು ಮೆಟ್ಟಿರಲಿ
ಆತ್ಮಜ್ಯೋತಿಗಳಾರತಿಯೆತ್ತಲು ಪರಂಜ್ಯೋತಿಪರ ಹುಟ್ಟಿರಲಿ".

ಅಮರಾವತಿಗೆ ಬಂದಿಳಿದ ದೇವೇಂದ್ರ ಮತ್ತು ಕುತ್ಸಕುಮಾರನು ಜ್ಯೋತಿ ಸ್ವರೂಪರಾಗಿರುತ್ತಾರೆ, ಇಬ್ಬರೂ ಅವಳಿ–ಜವಳಿಗಳಂತೆ.

ಶಚಿದೇವಿ ಇಂದ್ರ ಯಾರು? ಕುತ್ಸಕುಮಾರ ಯಾರು? ಎಂದು ತಿಳಿಯದೆ ಗೊಂದಲ – ಕ್ಕೀಡಾಗುತ್ತಾಳೆ. ಕೊನೆಗೆ ಅವರಿಬ್ಬರನ್ನು ಸತ್ಯ ಸ್ವರೂಪಿಗಳಾಗಿ ಸ್ಪಷ್ಟ ಪಡಿಸಿಕೊಳ್ಳುತ್ತಾಳೆ. ದೇವ ರೂಪದ ಸತ್ಯ– ಮಾನವ ರೂಪದ ಸತ್ಯ. ನೋಡಲು ಬೇರೆ ಆದರೂ ಮೂಲದಲ್ಲಿ ಒಂದೇ ಎಂಬ ಸತ್ಯದರ್ಶನವಾಗುತ್ತದೆ.

ಈ ಕತೆಯಲ್ಲಿ ನಡೆಯುವ ಪಯಣ ಒಂದಕ್ಕೊಂದಕ್ಕೆ ಪೂರಕ. ಒಂದು ದೇವ ಪಯಣ ಮತ್ತೊಂದು ಮಾನವ ಪಯಣ. ಪಯಣಕ್ಕೆ ತೆರಳಿದ ಜೀವಗಳೆಲ್ಲಾ ದೇವರವೇ ಪ್ರತಿಬಿಂಬಗಳು ಎಂಬ ಮಾತು ಪರಂಜ್ಯೋತಿ ಪಯಣದಲ್ಲಿ ಬೆಂಬಲವಾಗಿ ನಿಂತು ಆತ್ಮಜ್ಯೋತಿಯ ಪರಂಜ್ಯೋತಿ ಉದ್ಭವಿಸುವಂತೆ ನರನು ಪ್ರಾರ್ಥಿಸಬೇಕು ಎಂಬ ಆಶಯವನ್ನು ಧ್ವನಿಸುತ್ತದೆ.

ದೈವ ಮತ್ತು ಮಾನುಷರು ಪರಸ್ಪರಪೂರಕವಾಗಬೇಕು ಆಗ ಜೀವನದಲ್ಲಿ ಗೆಲುವು ಎಂಬ ತತ್ವವನ್ನು ಈ ಕಥನ ಸೆರೆ ಹಿಡಿದಿದೆ.

'ಹುಂಜ ಮತ್ತು ಕಮಂಡಲ' ಕಥನವು ಸಾಂಸಾರಿಕ ಬದುಕಿನ ನೀರಸತೆ, ನಿರ್ದಯತೆಗಳನ್ನು ಧ್ವನಿಸುತ್ತದೆ. ಇಂದ್ರನ ಮೋಹಕ್ಕೆ ಮರುಳಾಗಿ ಅವನ ವಶವಾಗುವ ಅಹಲ್ಯೆ ಗೌತಮನ ನಿರ್ದಯತೆಗೆ ಗುರಿಯಾಗಬೇಕಾಗುತ್ತದೆ.

"ಕಲ್ಲಾಗಿ ಹೋಯಿತೆ ಅಹಲ್ಯೆ, ನಿನ್ನ ಹೃದಯ?
ಮರೆತೆಯಾ ಗೌತಮರ ಹೋಮ ಕುಂಡ?
ಮುರಿದೆಯಾ ಇಂದ್ರನೆ, ನಮ್ಮ ಬಡ ಸಂಸಾರ?
ಗೌತಮರು ಸುರಿದರು ನುಡಿಯ ಕೆಂಡ."

"ಕಲ್ಲಾಗಿ ಹೋಗು, ಇನ್ನಿಲ್ಲಿ ನಾ ನಿಲ್ಲೆನು"
ಕಲ್ಲಾಗಿ ಒರಗಿದಳಹಲ್ಯೆ ನೆಲಕೆ,
ಕರುಣ ಜಲ ಬತ್ತಿದ ಕಮಂಡಲಿನ ಗೌತಮ
ರು, ತೆರಳಲು, ತಪಸ್ಸಿಗೆ ಕಾಡಿನೆಡೆಗೆ."

ತನ್ನದಲ್ಲದ್ದ ತಪ್ಪಿಗೆ ಇಂದ್ರನಿಗೆ ಪರವಶಳಾಗಿ ಶಾಪಗ್ರಸ್ಥಳಾಗುವ, ಆ ಮೂಲಕ ಬದುಕು ಕಳೆದುಕೊಳ್ಳುವ ಅಹಲ್ಯೆಯು ಸ್ವಯಂಕೃತ ತಪ್ಪು ಎಸಗದಿದ್ದರೂ ಗೌತಮ, ಇಂದ್ರರ ಇಚ್ಛೆಗಳಂತೆ ಉಳಿಯಬೇಕಾಗುತ್ತದೆ. ಬದುಕು ಹೀಗೆ ವಿಚಿತ್ರವಾಗುತ್ತದೆ. ಅಂತಹ ಜೀವನ ವೈಚಿತ್ರ್ಯದ ವಸ್ತು ಸತ್ಯವನ್ನು ಈ ಕಥನ ನಿರೂಪಿಸಿದೆ.

'ಚಿನ್ನಮ್ಮನ ಕಂದ' ಮತ್ತು 'ಹುಡುಗಿಯ ಕತೆ' ಕಥನಗಳು ಬಡತನ ತಂದೊಡ್ಡುವ ನಿತ್ಯ ನರಕದ ಜೀವನ ವಿಧಾನವನ್ನು ಕವಿ ಸಾಕ್ಷಿ ಪ್ರಜ್ಞೆಯಿಂದ ಕಟ್ಟಿಕೊಡುತ್ತಾರೆ. ಮನುಷ್ಯನ ಅಸಾಹಯಕತೆ, ಬಡತನ, ಸಾವಿನ ನಿರ್ದಯತೆಗಳ ಸಹಜ ವರ್ಣನೆ ಈ ಕಥನಗಳಲ್ಲಿ ಕಂಡು ಬರುವುದು ಇಂತಹ ದಾರುಣ ಸ್ಥಿತಿಗತಿಗಳಿಗೆ ಕಾರಣಗಳೇನು? ಎಂದು ಮಾನವ ಚರಿತ್ರೆಯನ್ನು ಕೆದಕುವ ಪ್ರಯತ್ನಗಳನ್ನೇನು ಕವಿ ಮಾಡುವುದಿಲ್ಲ. ಬದುಕನ್ನು ಬಂದಂತೆಯೇ ಸ್ವೀಕರಿಸಬೇಕು ಎಂಬ ನಿಲುವು ಈ ಕವನಗಳಲ್ಲಿದೆ.

'ಮಂಜುಗೌಡ'ನ ಕಥೆಯಲ್ಲಿ ಮಾನವರಿಗೆ ಬೇರೆ-ಬೇರೆ ಪ್ರಜ್ಞೆ- ಪ್ರೇಮಗಳಿರುವಂತೆಯೇ ನಿಸರ್ಗ ಪ್ರೇಮ ಕೂಡ ಮುಖ್ಯ ಎಂದು ತಿಳಿಸುತ್ತದೆ.

"ಭಯದ ಮೂಲ ಮಣ್ಣಿನಲ್ಲೇ; ಇಲ್ಲೆ ಮೊಳೆಯಲಿಲ್ಲವೆ?
ಎಲೆಗಳಾಗಿ ಮರಗಳಾಗಿ, ಇಲ್ಲೆ ಬೆಳೆಯಲಿಲ್ಲವೆ?
ಮರಗಳೆಲ್ಲ ಒಂದಕ್ಕೊಂದು ಅಪ್ಪಿ ಉಳಿಯಲಿಲ್ಲವೆ?
ಪ್ರೀತಿಯೊಂದೆ ಕರುಣೆಯೊಂದೆ ರಕ್ಷೆಯೆಂದೆ ತಿಳಿಯಲಿಲ್ಲವೆ?

ಮಾನವರು ಭೂಮಿಯ ಮೇಲೆ ಉತ್ತಮ ಜೀವನ ಮಾಡಲು ದೈವ ಭಯದಷ್ಟೇ ಮುಖ್ಯವಾದದು ನೈತಿಕ ಭಯ. ಅದು ಸಾಮಾಜಿಕ ಜೀವನದ ಬೇರೆ-ಬೇರೆ ಸಂದರ್ಭಗಳಲ್ಲಿ ಮಾನವರಿಂದ ಅನುಸರಿಸಲ್ಪಡಬೇಕು. ಜೀವನಾಧಾರವಾದ ಪ್ರಕೃತಿಯ ಪ್ರೇಮ, ಅದರ ರಕ್ಷಣೆ ಇಂತಹವುಗಳು ನೈತಿಕ ಆದರ್ಶವಾಗಬೇಕು. ಇದು ಮಂಜುಗೌಡನ ಕತೆಯಲ್ಲಿಯೂ ಇದೆ, 'ಅರಣ್ಯಾನಿ' ಕಥನದಲ್ಲೂ ಇದೆ.

"ಇವಳನ್ನು ಸುತ್ತಿಸುವೆನು, ಇವಳ ನಿಶ್ಯಬ್ದಕ್ಕೆ,
ಇವಳವಚಿಕೊಂಡಿದ್ದ ಸದ್ದುಗಳಿಗೆ,

ತನ್ನ ಒಲವಿನ ಸೆರಗಿನಲ್ಲಿಟ್ಟು, ಸಲುಹಿದ್ದ,

ಬೆಡಗುಗಳಿಗೂ, ಈಗ – ಒಂದು ಗಳಿಗೆ."

ನಿಸರ್ಗ ಪ್ರೇಮಿಯಾದ ಎಕ್ಕುಂಡಿಯವರು ಸಕಲ ಜೀವಕೋಟಿಯ ಜೀವನಾಧಾರ ಎಂಬ ಅರ್ಥದಲ್ಲಿ ಪ್ರಕೃತಿಯ ಮಹತ್ವವನ್ನು ಪರಮೋಚ್ಛ ಸ್ಥಿತಿಯಲ್ಲಿಟ್ಟು ನೋಡಿದ್ದಾರೆ.

'ಹುಳ ಮತ್ತು ಕಿರೀಟ' ಕಥನವು ಜನ್ಮಾಂತರದ ವಿಧಿ ನಿಯಮಗಳನ್ನು ಕಳಚಿಕೊಂಡು ಜೀವನ್ಮುಕ್ತಿ ಪಡೆಯುವ ಅಲೌಕಿಕ ಆಶಯವನ್ನು ವಿವರಿಸುತ್ತದೆ. 'ಕಣಗಿಲು ಗಿಡದಲ್ಲಿ ಹುಡುಗ' ಕವಿತೆಯು ಶಿಕ್ಷಣ ವ್ಯವಸ್ಥೆಯ ನಿಸ್ಸಾರತೆಯನ್ನು ಧ್ವನಿಸುವ ಕಥನ. ಶಾಲೆಗಿಂತ ಮಾನವರು ಪ್ರಕೃತಿ ಮತ್ತು ಜೀವನದಿಂದ ಪಡೆಯಬಹುದಾದ ಶಿಕ್ಷಣ ಮಹತ್ವದ್ದು ಎಂಬ ಆಶಯ ಇಲ್ಲಿದೆ. ಹಾಗೆ ನೈಸರ್ಗಿಕ ಶಿಕ್ಷಣದ ಮಹತ್ವವನ್ನು ಈ ಕವಿತೆ ಸಾರುತ್ತದೆ.

ಎಕ್ಕುಂಡಿಯವರು ಜೀವನದ ವಾಸ್ತವಿಕತೆಯನ್ನು ಯಾವ ವಿಶೇಷತೆಗಳನ್ನೂ ಆರೋಪಿಸದೆ ಯಥಾವತ್ತಾಗಿ ಚಿತ್ರಿಸುತ್ತಾರೆ. ಅವರ ಪ್ರಕಾರ; ಜೀವನವು ಒಂದು ವಿಧಿನಿಯಮ, ಅದರಂತೆ ಮಾನವರು ನಡೆಯಬೇಕು ಬಂದ ಕಷ್ಟ ಸುಖಗಳನ್ನು ಬಂದಂತೆಯೇ ಸ್ವೀಕರಿಸಿ, ಸಹನೀಯ ಎನ್ನುವಂತೆ ಬಾಳನ್ನು ಹಸನುಗೊಳಿಸಿಕೊಳ್ಳಬೇಕು. ಈ ದೃಷ್ಟಿಕೋನವು ಅವರ ಹಲವು ಕಥನಗಳಲ್ಲಿ ಜೀವನ ದೃಷ್ಟಿಯಾಗಿ ಪ್ರತಿಪಾದಿತವಾಗಿದೆ. ಇಲ್ಲಿ ವಿಶ್ಲೇಷಿಸಲಾಗಿರುವ ಕಥನಗಳು ಇದಕ್ಕೆ ನಿದರ್ಶನವಾಗುತ್ತವೆ.

****

ಅಧ್ಯಾಯ–ಏಳು

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸು.ರಂ. ಎಕ್ಕುಂಡಿಯವರ ಕಥನ ಕವನಗಳ ವೈಶಿಷ್ಟ್ಯತೆ

ಸು.ರಂ.ಎಕ್ಕುಂಡಿಯವರ ಕಥನ ಕವನಗಳ ವೈಶಿಷ್ಟ್ಯತೆ

"ನನ್ನ ಕಾವ್ಯವು ದಕ್ಷಿಣದ ಮಹಾನ್ ವೈಷ್ಣವ ದಾರ್ಶನಿಕರಾದ ಆಚಾರ್ಯ ಶ್ರೀಮಧ್ವರಿಗಂತೂ ತುಂಬಾ ಋಣಿಯಾಗಿದೆ. ನನ್ನಲ್ಲಿ ಅಪಾರದ ದಾಹವನ್ನು ಹುಟ್ಟಿಸಿದವರೇ ಅವರು. ನಾವು ಬಾಳಿ ಬದುಕುವ ಈ ಜಗತ್ತು ಸತ್ಯ ಹಾಗೂ ಸೌಂದರ್ಯಗಳ ಅಮೂಲ್ಯ ಕೊಡುಗೆಯಾಗಿದೆಯೆಂದು ಅವರು ಜೋಡಿಸಿದ್ದಾರೆ. "ನಮ್ಮ ಜೀವನವೂ ಕೂಡಾ ಪರಮ ಕೃಪಾಳುವಿನ ಕರುಣೆ ಮತ್ತು ಪ್ರೀತಿಗಳ ಅಮೂಲ್ಯ ಕೊಡುಗೆಯಾಗಿದೆ. ಪಾರಿಜಾತದಂತೆ ಶುಭ್ರ ಬಕುಲದಂತೆ ಮಧುರ, ಸತ್ಯ ಮತ್ತು ಪ್ರೇಮಗಳಿಂದ ಬಾಳುವುದೇ ಭಗವಂತನ ಉಪಕಾರ ಸ್ಮರಿಸುವ ಅತ್ಯುತ್ತಮ ವಿಧಾನವಾಗಿದೆ. ಅವನು ಮಿಂಚು ಮತ್ತು ಸಿಡಿಲುಗಳ ಶಬ್ದಗಳಲ್ಲೂ ನುಡಿಯುತ್ತಾನೆ. ಆದ್ದರಿಂದ ಅವನ ಅಪಾರ ವೈಭವವನ್ನು, ಮಹಿಮೆಯನ್ನೂ ಸ್ತುತಿಸಿರಿ". ನನ್ನ ಕಾವ್ಯವು ಶಬರಿ, ಸುಧಾಮ, ಗಜೇಂದ್ರ, ಕುಬ್ಜೆ ಮತ್ತು ಪುರಂದರ ದಾಸರ ಭಕ್ತಿ ಮತ್ತು ಪ್ರೇಮಗಳನ್ನು ಕುರಿತು ಬಣ್ಣಿಸುತ್ತದೆ. ಮನುಷ್ಯನ ಜೀವನದಲ್ಲಿ ದಿವ್ಯದ ಪಯರನ್ನು ಬಿತ್ತಿ ಬೆಳೆದ ಸಾಕ್ರೆಟಿಸ್, ಏಸು, ಪ್ರವಾದಿ ಹಾಗೂ ದೇವರ ದಾಸಿಮಯ್ಯರಂಥ ಆತ್ಮದ ಒಕ್ಕಲಿಗರನ್ನು ಬಣ್ಣಿಸುತ್ತದೆ. ಇಷ್ಟಕ್ಕೆ ನಿಲ್ಲದೆ ಹಸಿದವರನ್ನು, ಬಡವರನ್ನೂ ಕುರಿತು ಹೇಳಿದ ಕಾರ್ಲ್‌ಮಾರ್ಕ್ಸ್ ಮತ್ತು ಶ್ರಮಜೀವಿಗಳ ಮನ ಕರಗಿಸುವ ಕಥೆಗಳಲ್ಲಿ ಶೋಷಿತರ ಹಾಗೂ ನಿರಾಕೃತರ ಪರವಾಗಿ ಅದು ಕ್ಷೋಭೆಗೊಂಡು ಧ್ವನಿಯೆತ್ತಿದೆ. ನನ್ನ ಕಾವ್ಯವು ಉಳುವ ಕೈಗಳನ್ನು ಪ್ರಾರ್ಥಿಸುವ ಕೈಗಳನ್ನಾಗಿ ಕುರಿತು ಹಾಡುತ್ತದೆ. ಅದು ಕೊರಗುವ ಹೃದಯಗಳನ್ನು, ಕಂಬನಿ ತುಂಬಿದ ಕಣ್ಣುಗಳನ್ನು ಕುರಿತು ಹೇಳುತ್ತದೆ. ಅದು ನಿರಾಶ್ರಿತರಿಗೂ, ಮುದುಕರಿಗೂ ನಾಲಿಗೆ ನೀಡಿದೆ ಮತ್ತು ಧೀರ ಚೇತನಗಳಿಗೆ ಸ್ಮಾರಕಗಳನ್ನು ನಿಲ್ಲಿಸಿವೆ. ಅದು ಚರಿತ್ರೆಯ ಗಾಲಿಗಳನ್ನು ತಿರುಗಿಸಿದವರ ಧೈರ್ಯ ಮತ್ತು ಕರುಣೆಗಳ ಕಥೆಗಳನ್ನು ಹೇಳುತ್ತದೆ. ನನ್ನ ದೃಷ್ಟಿಯಲ್ಲಿ ಕಾವ್ಯವು ಸೌಂದರ್ಯದ ಸೃಷ್ಟಿಯಾಗಿವೆ. ಉದಾತ್ತದ ಸ್ಮೃತಿಯಾಗಿದೆ ಮತ್ತು ಅಪಾರದ ಅನ್ವೇಷಣೆಯಾಗಿವೆ. ಅದು ಕಡಲಿನ ಧ್ವನಿಯ ಹಾಗೂ ಬೆಳ್ಳಕ್ಕಿಗಳ ಕರೆಯ ಪ್ರತಿಧ್ವನಿಯಾಗಿದೆ." *

ಸ್ವಯಂ ಎಕ್ಕುಂಡಿಯವರೇ ತಮ್ಮ ಬರವಣಿಗೆಯನ್ನು ಕುರಿತು ಈ ಬಗೆಯ ವಿವರಣೆ ಒದಗಿಸಿದ್ದಾರೆ. ಅವರ ಸಮಗ್ರ ಕವಿತೆಗಳ ಅರ್ಥಗ್ರಹಿಸಲು ಇದು ಮಾರ್ಗ ಸೂಚಿಯಾಗಿದೆ.

---

* ನನ್ನ ಕಾವ್ಯ – ಸು.ರಂ.ಎಕ್ಕುಂಡಿ
(ಸು.ರಂ.ಎಕ್ಕುಂಡಿಯವರ ಕಾವ್ಯ) – ಪುಟ: 57–58

ನವೋದಯ ಮತ್ತು ಪ್ರಗತಿಶೀಲ ಪಂಥದ ಹಲವು ಧೋರಣೆಗಳನ್ನು ಅರಗಿಸಿಕೊಂಡು ತಮ್ಮದೇ ಆದ ಸ್ವತಂತ್ರ ಅಭಿವ್ಯಕ್ತಿ ವಿಧಾನವನ್ನು ರೂಪಿಸಿಕೊಂಡ ಸು.ರಂ. ಎಕ್ಕುಂಡಿಯವರು ಹೊಸಗನ್ನಡ ಸಾಹಿತ್ಯದ ವಿಶಿಷ್ಟ ಕವಿ. ಆ ವಿಶಿಷ್ಟತೆಯು ಅವರ ಕಥನ ಕಾವ್ಯಗಳಲ್ಲಿ ದಾಖಲಾಗಿದೆ. ಹಾಗಾಗಿ ಅವರನ್ನು ಸಾಹಿತ್ಯ ವಲಯದಲ್ಲಿ 'ಕಥನ ಕವಿ' ಎಂದೇ ಬಣ್ಣಿಸುತ್ತಾರೆ.

ಪ್ರಕಾರ ವೈಶಿಷ್ಟ್ಯತೆ

ಕನ್ನಡದಲ್ಲಿ ಕಥನ ಕಾವ್ಯ ಪರಂಪರೆಯು ಅತ್ಯಂತ ಪ್ರಾಚೀನವಾದುದು. ಆದರೆ ಅದು ಹಾಡುಗಬ್ಬಗಳ ರೂಪದಲ್ಲಿ ಜನಮನದಲ್ಲಿ ಜೀವಂತವಾಗಿದ್ದು, ಲಿಖಿತ ರೂಪಕಂಡಿದ್ದು ಆಧುನಿಕ ಸಂದರ್ಭದಲ್ಲಿ ಮಾತ್ರ. ಈ ಪ್ರಾಚೀನ ಪರಂಪರೆಯ ಮೂಲ ಸತ್ವಗಳನ್ನು 'ಆಧುನಿಕ ಪ್ರಜ್ಞೆ' ಗೆ ಅನುಗುಣವಾಗಿ ಪುನರ್ ರೂಪಿಸಿಕೊಳ್ಳುವುದು ಸ್ವಲ್ಪ ಕಠಿಣವಾದ ಕೆಲಸ. ಎಕ್ಕುಂಡಿಯವರು ತಮ್ಮ ಮನೋಧರ್ಮಕ್ಕೆ ಅನುಗುಣವಾಗಿ ಕಥನ ಕಾವ್ಯ ಪರಂಪರೆಯನ್ನು ಪಳಗಿಸಿದ್ದಾರೆ. "ಎಕ್ಕುಂಡಿಯವರ ಕಾವ್ಯ ಕಥನ ಕವನದ ಮಾರ್ಗವನ್ನು ಹಿಡಿಯಲು ಪ್ರಗತಿಶೀಲ ಸಾಹಿತ್ಯದ ಕಥಾ ಪ್ರಧಾನವಾದ ಗದ್ಯಬರವಣಿಗೆ ಕಾರಣವಾಗಿರಬಹುದೆ? ಅಥವಾ ಕಥಾ ಪ್ರಧಾನವಾದ ಗದ್ಯ ಬರವಣಿಗೆಯ ಪ್ರಗತಿಶೀಲ ಮತ್ತು ಬುದ್ಧಿ ಪ್ರಧಾನವಾದ ನವ್ಯ ಕಾವ್ಯ– ಈ ಎರಡೂ ಸಾಹಿತ್ಯ ಮಾರ್ಗಗಳನ್ನು ಕೈ ಬಿಟ್ಟು ತಮ್ಮದೇ ಆದ ಬೇರೊಂದು ಕಾವ್ಯ ಮಾರ್ಗದ ಹುಡುಕಾಟದಲ್ಲಿ ಕಂಡುಕೊಂಡದ್ದೇ ಇವರ ಕಥನ ಕಾವ್ಯ? ಹಾಗೆನ್ನಿಸುತ್ತದೆ." * ಈ ವಿವರಣೆಯು ಎಕ್ಕುಂಡಿಯವರು ತಮ್ಮ ಅಭಿವ್ಯಕ್ತಿ ವಿಧಾನಗಳಲ್ಲಿ ಕಥನ ಕವನಗಳಿಗೇ ಆದ್ಯತೆ ನೀಡಿರುವುದಕ್ಕೆ ಚಾರಿತ್ರಿಕವಾದ ಸಾಹಿತ್ಯಕ ಕಾರಣಗಳನ್ನು ಒದಗಿಸುತ್ತದೆ.

ಎಕ್ಕುಂಡಿಯವರು ಬರೆಯುವ ಕಾಲಕ್ಕಾಗಲೇ ಗೋವಿಂದ ಪೈ, ಪಂಜೆ ಮಂಗೇಶರಾವ್, ಬಿ.ಎಂ.ಶ್ರೀ., ಮಾಸ್ತಿ, ಕುವೆಂಪು, ಪು.ತಿ.ನ ಮುಂತಾದ ಕನ್ನಡದ ಹಿರಿಯ ಲೇಖಕರು ಕನ್ನಡ ಮತ್ತು ಇಂಗ್ಲಿಷ್ ಪರಂಪರೆಗಳ "ಕಥನ ಗೀತೆ"ಗಳ ಮಾದರಿಯಲ್ಲಿ ಕನ್ನಡದ ಜಾಯಮಾನಕ್ಕನುಗುಣವಾದ ಕೃತಿಗಳನ್ನು ರಚಿಸಿ, ಆಧುನಿಕ 'ಕಥನ ಪರಂಪರೆಗೆ ಒಂದು ರೀತಿಯ ಭೂಮಿಕೆ ಸಿದ್ಧವಾಗಿತ್ತು.

ವಿಶೇಷವಾಗಿ ಇಂಗ್ಲಿಷ್ ಬಾಷೆ, ಸಾಹಿತ್ಯಗಳ ಅರಿವಿದ್ದ ಎಕ್ಕುಂಡಿಯವರನ್ನು ಕೀಟ್ಸ್ ಕವಿಯ ಉಜ್ವಲ ವರ್ಣನೆಗಳಿಂದ ಕೂಡಿದ್ದ ಕಥನ ಕವನಗಳು ಆಕರ್ಷಿಸಿದ್ದರೆ ಆಶ್ಚರ್ಯವಿಲ್ಲ.

* ಎಂ.ಜಿ. ಚಂದ್ರಶೇಖರಯ್ಯ –ಎಕ್ಕುಂಡಿಯವರ ಕಾವ್ಯ ಮತ್ತು ಪ್ರಗತಿಶೀಲ ಸಾಹಿತ್ಯ– ಲೇಖನ– ಪು.24

ಎಕ್ಕುಂಡಿಯವರ ಕಥನಗಳ ಗೇಯತೆ, ವರ್ಣನಾ ಕೌಶಲ ಮತ್ತು ಕಥನಾತ್ಮಕತೆಗಳಿಗೆ ಆಂಗ್ಲ ಸಾಹಿತ್ಯದ ಕೀಟ್ಸ್, ಟೆನಿಸನ್, ಸ್ವಿನ್‌ಬರ್ನ್‌ರಂತಹ ಶ್ರೇಷ್ಠ ಕವಿಗಳು ಮಾದರಿಯಾಗಿದ್ದಾರೆಂದು ವಿದ್ವಾಂಸರು ಗುರುತಿಸಿದ್ದಾರೆ. ಈ ಎಲ್ಲ ಹಿನ್ನೆಲೆಯಲ್ಲಿ ನವೋದಯ, ಪ್ರಗತಿಶೀಲ, ನವ್ಯ ಸಂದರ್ಭದ ಇತರ ಲೇಖಕರ ಕಾವ್ಯ ಮಾರ್ಗಗಳಿಗಿಂತ ಭಾವಗೀತೆಯ ಗೇಯತೆ, ಮಹಾಕಾವ್ಯದ ಕಥನ ಗುಣ ಇವುಗಳ ಸಮನ್ವಯದ ಮಧ್ಯಮ ಮಾರ್ಗವನ್ನು ಎಕ್ಕುಂಡಿಯವರು ಆರಿಸಿಕೊಂಡಿದ್ದರಲ್ಲಿ, ಅವರ ಹಿಂದಿದ್ದ ಎಲ್ಲಾ ಸಾಹಿತ್ಯ ಪರಂಪರೆಗಳೂ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಕಾರಣಗಳನ್ನು ಒದಗಿಸಿರಬಹುದು.

ಹೀಗೆ ಆಯ್ದುಕೊಂಡ ಅಭಿವ್ಯಕ್ತಿ ವಿಧಾನಕ್ಕೆ ಅತಿಶಯತೆಯನ್ನು ತಂದುಕೊಡುವುದು ಇನ್ನೂ ಕಷ್ಟದ ಕೆಲಸ. ಎಕ್ಕುಂಡಿಯವರು ಕನ್ನಡ ಕಥನ ಪರಂಪರೆಯನ್ನು ಮುಂದುವರಿಸಿ, ಮತ್ತು ವಿಸ್ತರಿಸಿ, ಅದಕ್ಕೆ ಹಲವು ವೈಶಿಷ್ಟ್ಯಗಳನ್ನು ತರುವುದರಲ್ಲಿ ಯಶಸ್ವಿಯಾಗಿದ್ದಾರೆ. ಹೊಸಗನ್ನಡ ಸಾಹಿತ್ಯ ಸಂದರ್ಭದ ಪ್ರಕಾರ ವೈಶಿಷ್ಟ್ಯತೆಗೆ ಅವರ ಕವನಗಳೇ ಸಾಕ್ಷಿಯಾಗುತ್ತವೆ.

ಯಾವುದೇ ಸಾಹಿತ್ಯ ಪ್ರಕಾರವನ್ನು ಒಬ್ಬ ಲೇಖಕ ತನ್ನ ಅಭಿವ್ಯಕ್ತಿ ವಿಧಾನವಾಗಿ ಆಯ್ದುಕೊಂಡ ಕಾರಣಕ್ಕಾಗಿಯೇ ಶ್ರೇಷ್ಠವೂ, ವಿಶಿಷ್ಟವೂ ಆಗಲೂ ಸಾಧ್ಯವಾಗುವುದಿಲ್ಲ. ಆದರೆ ತನ್ನ ಕಾಲದ ಸಾಂಸ್ಕೃತಿಕ ಅಗತ್ಯಗಳಿಗೆ ತಕ್ಕಂತೆ ಯಶಸ್ವಿ ಮಾಧ್ಯಮವನ್ನಾಗಿಸಿ ಹೆಚ್ಚು ಹೆಚ್ಚು ಕಲಾತ್ಮಕಗೊಳಿಸುವುದರಿಂದ ಅದಕ್ಕೆ ಚಾರಿತ್ರಿಕ ಪ್ರಾಮುಖ್ಯತೆ, ವಿಶೇಷತೆಗಳು ಉಂಟಾಗುತ್ತವೆ.

ಜೀವನ ದೃಷ್ಟಿ

ನವೋದಯದ ರಸಪ್ರಜ್ಞೆ, ಉದಾರದೃಷ್ಟಿ ಮತ್ತು ಪ್ರಗತಿಶೀಲ ಪಂಥದ ಸಮಾಜವಾದಿ ಚಿಂತನೆಗಳಿಂದ ಸುತ್ತುವರಿದ ಸಾಹಿತ್ಯಕ ವಾತಾವರಣದಲ್ಲಿ ಕಾವ್ಯ ರಚನೆ ಮಾಡಿರುವ ಎಕ್ಕುಂಡಿಯವರು ಪಂಥ, ಪ್ರಣಾಳಿ, ವರ್ಗಪ್ರಜ್ಞೆ, ಬದ್ಧತೆಗಳಂತಹ ಚೌಕಟ್ಟುಗಳಿಂದ ಮುಕ್ತರಾಗಿ ಆದರೆ ಜೀವನ ತತ್ವಕ್ಕೆ ನಿಷ್ಠರಾಗಿ ಬರೆದಿದ್ದಾರೆ. ಜೀವನವನ್ನು ಸುಂದರಗೊಳಿಸುವುದು ಅರ್ಥಪೂರ್ಣಗೊಳಿಸುವುದು ಯಾವುದಿದೆಯೋ ಅಂತಹದ್ದಲ್ಲೆವೂ ಎಕ್ಕುಂಡಿಯವರ ಕಥನಗಳಿಗೆ ವಸ್ತು ಸಾಮಗ್ರಿಯೊದಗಿಸಿದೆ. ಆದ್ದರಿಂದಲೇ ಅವರು ಪುರಾಣ ಪ್ರಪಂಚದಿಂದ, ವಾಸ್ತವಿಕ ಜೀವನದಿಂದ, ನಿಸರ್ಗದಿಂದ ಮಹತ್ವದ ಸಂಗತಿಗಳನ್ನು ಮುಕ್ತವಾಗಿ ಸ್ವೀಕರಿಸಿದ್ದಾರೆ.

ತಮ್ಮ ನಂಬುಗೆಗೆ ಅರ್ಹವಾದ ಪೌರಾಣಿಕ, ಧಾರ್ಮಿಕ, ಸಾಮಾಜಿಕ, ಚಾರಿತ್ರಿಕ, ಪ್ರಕೃತಿ, ಕ್ರಾಂತಿ – ಇಂತಹ ಎಲ್ಲವನ್ನೂ ಸಮಾನ ದೃಷ್ಟಿಯಲ್ಲಿ ನೋಡಿದ್ದಾರೆ. ನಂಬಬಲ್ಲ ಎಲ್ಲವೂ ಅವರ

ಕಥನಗಳಿಗೆ ವಸ್ತುವಾಗುತ್ತವೆ. ಹೀಗಾಗಿ ಅವರ ಕಾವ್ಯ ಪ್ರಪಂಚದಲ್ಲಿ ದೇವರು, ಭಕ್ತಿ, ಕ್ರಾಂತಿ, ಪ್ರೀತಿ – ಪ್ರಣಯ, ತತ್ವನಿಷ್ಠೆ, ಬಡತನ, ಹಸಿವು, ಜೀವನದೃಷ್ಠಿ, ವ್ಯಕ್ತಿ ವಿಶೇಷತೆಗಳೆಲ್ಲವೂ ಪರಸ್ಪರ ವಿರುದ್ಧ ಎನಿಸಿದರೂ ಸಮಾನ ಸ್ಥಾನ–ಮಾನ ಪಡೆದಿವೆ. ಇವೆಲ್ಲವೂ ಜೀವನ ಸಂದರ್ಭದಲ್ಲಿಯೇ ಅರ್ಥ ಪಡೆಯಬೇಕಾಗಿವೆ ಎಂದು ಕವಿ ಗಾಢವಾಗಿ ನಂಬಿದ್ದಾರೆ. ಈ ನಂಬಿಕೆಯ ನೆಲೆಗಟ್ಟಿನಲ್ಲೇ ಜೀವನದ ಅರ್ಥವಂತಿಕೆಯನ್ನು ಅನ್ವೇಷಿಸಿ, ಅದನ್ನು ಉನ್ನತೀಕರಿಸಲು ಮಾನವರು ಪ್ರಯತ್ನಿಸಬೇಕೆಂದು ಎಕ್ಕುಂಡಿಯವರು ಭಾವಿಸುತ್ತಾರೆ.

> “ಬರ್ದಿಲ ಪಥದಲಿ ಸುವರ್ಣ ರಥದಲಿ ಅಮರಾವತಿಯನು ಮುಟ್ಟಿರಲು
> ದೇವೇಂದ್ರನ ಪ್ರತಿರೂಪದ ರೂಪವ ಕುತ್ಸಕುಮಾರನು ತೊಟ್ಟಿರಲು
> ಸುರಪತಿಯಮಳರ ಕಾಣುತ ವಿಸ್ಮಿತಳಾದಳು ನಾಕದೊಳಿಂದ್ರಾಣಿ
> ಸತ್ಯಸ್ವರೂಪವನರಿತಳು ಗುರುತಿಸಿ ಸಸ್ಮಿತಳಾದಳು ಸುರರಾಣಿ.
>
> ಬರ್ದಿಲ ಪಥದಲಿ ಜೀವನ ರಥದಲಿ ಮುತ್ತಿನ ಮಂಟಪ ಕಂಬಗಳು
> ಪಯಣಕೆ ತೆರಳಿದ ಜೀವಗಳೆಲ್ಲಾ ದೇವರವೇ ಪ್ರತಿಬಿಂಬಗಳು
> ನರನೊಳಗಿನ ನಾರಾಯಣನುದಯಿಸಿ ನರಕಾಸುರನನು ಮೆಟ್ಟಿರಲಿ
> ಆತ್ಮಜ್ಯೋತಿಗಳಾರತಿಯೆತ್ತಲು ಪರಂಜ್ಯೋತಿ ಪರ ಹುಟ್ಟಿರಲಿ.”

ಈ ವರ್ಣನೆಯು, ದೈವ ಮತ್ತು ಮಾನುಷಗಳ ಸಮಾಗಮದಲ್ಲಿ ಜೀವನದ ಔನ್ನತ್ಯವಿದೆ ಎಂಬ ಕವಿಯ ಅಲೌಕಿಕ ದರ್ಶನವನ್ನು ಬಿಂಬಿಸುತ್ತದೆ.

“ಎಕ್ಕುಂಡಿಯವರ ಕಾವ್ಯ ಲೋಕದಲ್ಲಿ ಕಾಣಬರುವ ಪರಂಪರೆಯ ಮುಖಾಂತರ ಸೃಷ್ಟಿಗೊಳ್ಳುವ ಪುರಾಣಲೋಕ, ವಾಸ್ತವಲೋಕ ಮತ್ತು ನಿಸರ್ಗಲೋಕಗಳು ಒಂದರೊಡನೊಂದು ಬೆಸೆದುಕೊಂಡೆ ಇವೆ. ಇವುಗಳನ್ನು ಬೇರೆಬೇರೆಯಾಗಿ ನೋಡಲು ಸಾಧ್ಯವಾಗುವುದಿಲ್ಲ ಅನ್ನುವುದೇ ಎಕ್ಕುಂಡಿ ಅವರ ಕಾವ್ಯದ ಆಶಯವಾಗಿದೆ – ಮಾತ್ರವಲ್ಲ ಅವರ ಕವಿತೆಯ ವೈಶಿಷ್ಟ್ಯವೂ ಆಗಿದೆ. ಪುರಾಣ ಮತ್ತು ವಾಸ್ತವಗಳು ಆಧುನಿಕ ಸಂವೇದನೆಯಲ್ಲಿ ಒಂದರೊಡನೊಂದು ಡಿಕ್ಕಿ ಹೊಡೆಯುತ್ತಿವೆ. ಇವು ತಬ್ಬಲಿತನದ ಪ್ರತೀಕಗಳಾಗಿ ಕಂಡು ಬರುತ್ತಿವೆ. ಆದರೆ, ಎಕ್ಕುಂಡಿ ಅವರ ಕಾವ್ಯ ಜಗತ್ತು ಇವೆರಡನ್ನೂ ಅಪ್ಪಿಕೊಳ್ಳುತ್ತದೆಂಬುದು ಗಮನಿಸಬೇಕಾದ ಅಂಶ.” *

---

* ಮಲ್ಲೇಪುರಂ ಜಿ.ವೆಂಕಟೇಶ್ – ಎಕ್ಕುಂಡಿಯವರ ಕಾವ್ಯದಲ್ಲಿ ಪರಂಪರೆಯ ನೋಟ – ಪುಟ: ೦೯
(ಪ್ರಕಟಣೆ : ಕರ್ನಾಟಕ ಸಾಹಿತ್ಯ ಅಕಾಡೆಮಿ)

ಸಾಂಸ್ಕೃತಿಕ ದೃಷ್ಟಿ

ಎಕ್ಕುಂಡಿಯವರ ಕಾವ್ಯದಲ್ಲಿ ಮನುಷ್ಯನೇ ಕೇಂದ್ರ ವಸ್ತು. ಹಾಗಾಗಿ ಮನುಷ್ಯ ಸಮಾಜವನ್ನು ಉನ್ನತ್ತೀಕರಿಸುವ ಪರಂಪರೆ. ಆತ್ಮೋನ್ನತಿಯ ಅರಿವು, ಮುಕ್ತಿಗೆ ಸಾಧನವಾಗುವ ಭಕ್ತಿ, ವ್ಯಕ್ತಿಯ ಆತ್ಮಸಂತೋಷಕ್ಕೆ ಕಾರಣವಾಗುವ ಪ್ರೀತಿ-ಪ್ರಣಯ, ಹಸಿವು, ಬಡತನ, ಕ್ರೌರ್ಯಗಳಿಂದ ಬಿಡುಗಡೆಗೊಳಿಸುವ ಕರುಣೆ, ಸಹಾನುಭೂತಿ, ಔದಾರ್ಯ, ನಿಸರ್ಗಪ್ರೇಮ ಇವೆಲ್ಲವೂ ಆದರ್ಶಗಳಾಗುತ್ತವೆ. ಈ ಆದರ್ಶಗಳು ಸಾಕಾರಗೊಂಡಾಗಲೇ ಜೀವನಕ್ಕೆ ಸೌಂದರ್ಯ, ಅರ್ಥಗಳು ಪ್ರಾಪ್ತಿಯಾಗುವುದು. ಮಾನವ ಜೀವನದಲ್ಲಿ ಇವುಗಳೆಲ್ಲಕ್ಕೂ ಸಾವಯುವ ಸಂಬಂಧಗಳುಂಟು. ಇಡಿಯಾಗಿ ನೋಡಿದಾಗ ಮಾತ್ರ ಈ ಸತ್ಯ ಗೋಚರವಾಗುತ್ತದೆ.

"ತ್ಯಾಗ ಪ್ರೀತಿ-ಚಿಗಿತು ನಿಂತ,
ಸತ್ಯವೃಕ್ಷ ಕಂಡನು.
ಮೊಳಗುತಿರಲು ಬುದ್ಧವಾಣಿ,
ಜೀವರೆಕ್ಕೆ ಪಡೆಯುತ್ತಿತ್ತು,
'ಉಧೋ' ಗತಿಯ ನಡೆಯುತಿತ್ತು.

'ಬುದ್ಧದೇವ' ಕವಿತೆಯಲ್ಲಿ ಮಾನವ ಜೀವನಕ್ಕೆ ಪ್ರಾಪ್ತವಾಗುನ ಪರಿಪೂರ್ಣತೆಯ ದರ್ಶನ ಮಾಡಿಸಿದ್ದಾರೆ.

ವರ್ತಮಾನದ ನೆಲೆಗಳಲ್ಲಿ ನಿಂತು ಭೂತ ಭವಿಷ್ಯತ್ತುಗಳನ್ನು ಗ್ರಹಿಸುವುದರಿಂದಲೇ ಮಾನವ ಸಂಸ್ಕೃತಿಯು ಉದಾತ್ತೀಕರಣಗೊಳ್ಳಲು ಸಾಧ್ಯ. ಎಕ್ಕುಂಡಿಯವರು ಇಂತಹ ಭದ್ರ ನೆಲೆಗಟ್ಟಿನಲ್ಲಿ ನಿಂತು ಕಾವ್ಯ ಕಟ್ಟಿದ್ದಾರೆ. ಆದ್ದರಿಂದಲೇ ಅವರು ತಮ್ಮ ಕಥನಗಳಲ್ಲಿ ಚಿತ್ರಿಸಿರುವ ಜೀವನವು ಸಂಸ್ಕೃತಿ ಪರವಾದುದು. "ಮೂಲತಃ ಅವರ ಮನಸ್ಸು 'ಸಂಸ್ಕೃತಿ' ಪರವಾದದ್ದು. ಈ ಸಂಸ್ಕೃತಿಯಲ್ಲಿ ವೈದಿಕ ಮನಸ್ಸೂ ಇದೆ. ಜತೆಗೆ ಕೆಳವರ್ಗದ ಮನಸ್ಸು ಇದೆ. ಇವೆರಡನ್ನೂ ಕೂಡಿಸುವ "ಜನಸಂಸ್ಕೃತಿ"ಯ ಆಪ್ತ ನೆರವೂ ಇದೆ. ಎಕ್ಕುಂಡಿ ಅವರದ್ದು "ಎಕ್‌ಲೆಕ್ಟಿಕ್" ಪರವಾದ ನಿಲುವು ಆಗಿರುವುದರಿಂದ ಸಹಜವಾಗಿಯೇ ಅವರು ಜನ ಸಂಸ್ಕೃತಿಯತ್ತ ತಿರುಗುತ್ತಾರೆ. ಅವರ ಕವಿತೆಯು, ವೈದಿಕ ಮತ್ತು ತಳವರ್ಗದ ಸಂಸ್ಕೃತಿಯ ಪರಿಕರಗಳನ್ನು ಬಳಸಿಕೊಂಡು ಅವರೆಡರ ಧ್ಯಾನದಿಂದ ಜನಸಂಸ್ಕೃತಿಯ ಹುಡುಕಾಟವನ್ನು ಶುರು ಮಾಡುತ್ತದೆ. ಅವರ ಕವಿತೆಯ ಒಟ್ಟು ನೋಟ, ಪರಂಪರೆಯನ್ನು ನಿರಾಕರಿಸುವುದಿಲ್ಲ, ಸ್ವೀಕರಣಗೊಳ್ಳುವ ಆಶಯವುಳ್ಳದ್ದು." *

---

* ಮಲ್ಲೇಪುರಂ ಜಿ.ವೆಂಕಟೇಶ್ – ಎಕ್ಕುಂಡಿಯವರ ಕಾವ್ಯದಲ್ಲಿ ಪರಂಪರೆಯ ನೋಟ – ಪುಟ: ೦೭
(ಪ್ರಕಟಣೆ : ಕರ್ನಾಟಕ ಸಾಹಿತ್ಯ ಅಕಾಡೆಮಿ)

ಕಥನಗಳ ಸಾಂಸ್ಕೃತಿಕ ಮೌಲ್ಯ

ಎಕ್ಕುಂಡಿಯವರು ಜೀವನವನ್ನು ಸಹನೀಯಗೊಳಿಸುವ ಗುರಿ ಹೊಂದಿದವರಾಗಿದ್ದಾರೆ. ಅದಕ್ಕಾಗಿ ಮಾನವ ಸಮಾಜದಲ್ಲಿ ಉತ್ತಮವಾದ ಮೌಲ್ಯಗಳ ಅನುಸರಣೆಬೇಕು. ಈ ಮೌಲ್ಯಗಳಿಗೆ ಜನಪರವಾದ ದೃಷ್ಟಿ ಇರಬೇಕು ಎಂದು ಆಶಿಸುತ್ತಾರೆ. ಮನುಷ್ಯರನ್ನು ದೇವತ್ವಕ್ಕೇರಿಸುವ ಭಕ್ತಿ, ಸಹಜೀವಿಗಳ ಬಗೆಗೆ ಕರುಣೆ, ಸಹಾನುಭೂತಿ, ಔದಾರ್ಯ, ಅನುರೂಪತೆಯ ಬದುಕಿಗೆ ಆಧಾರವಾಗುವ ಪ್ರೀತಿ–ಪ್ರಣಯ, ಹಸಿವು, ಬಡತನ, ಸಂಘರ್ಷಗಳಿಲ್ಲದ ಬದುಕು, ನಿಸರ್ಗ ತತ್ವಗಳನ್ನು ಮೀರದ ಜೀವನ ವಿಧಾನ, ಜೀವನದ ಅರಿವು– ಇವೆಲ್ಲವೂ ಸಂಸ್ಕೃತಿಯ ನಿರ್ಮಾಪಕ ಶಕ್ತಿಗಳೇ ಆಗುತ್ತವೆ ಕವಿಯ ದೃಷ್ಟಿಯಲ್ಲಿ.

ಮಾನವರ ಬದುಕು ನಿಸರ್ಗಾಧಾರಿತವಾದುದು. ಅವರ ಉನ್ನತಿ– ಅವನತಿಗಳಲ್ಲಿ ಅವರ ಪಾತ್ರವೇ ನಿರ್ಣಾಯಕ. ಎಕ್ಕುಂಡಿಯವರ ಕಥನಗಳ ಜೀವನ ಚಿತ್ರಣ ನಿಸರ್ಗದಿಂದ ದೂರವುಳಿದಿಲ್ಲ. ಹಸಿವು, ಬಡತನಗಳಿಗೆ, ಸಮೃದ್ಧಿಯ ಜೀವನಕ್ಕೆ ಅದೇ ಕಾರಣವಾಗುತ್ತದೆ. ಮತ್ಸ್ಯಗಂಧಿಯ ಪ್ರೇಮ ಪ್ರಸಂಗ, ಮಹಾಶ್ವೇತೆ–ಪುಂಡರೀಕರ ಸಮಾಗಮ, ಕೃಷ್ಣ–ಗೋಪಿಕೆಯರ ಸರಸದಾಟ, ಜಯಂತಿ–ಶುಕ್ರಯೋಗಿಯ ಮಿಲನ, ಶಬರಿಯ ಭಕ್ತಿ, ಗಜೇಂದ್ರ ಮೋಕ್ಷ, ಬುದ್ಧನ ಸತ್ಯದರ್ಶನ, ಅವಧೂತನ ಆತ್ಮೋನ್ನತಿ, ಬೇಡನ ಸುಲಿಗೆಯಂತಹ ಘಟನೆಗಳು ಸಂಭವಿಸುವುದು ಪ್ರಕೃತಿಯ ಸಹಜ ಸಂಬಂಧಗಳಲ್ಲಿ. ಈ ಮೂಲಕ ಕವಿ ತಮ್ಮ ಕಾವ್ಯ ಜಗತ್ತಿನಲ್ಲಿ ಪ್ರಕೃತಿಗೆ ಪರಮೋಚ್ಛ ಸ್ಥಾನ ನೀಡಿದ್ದಾರೆ. ನಿಸರ್ಗದ ಚೆಲುವನ್ನು ಕವಿ ಮಾನವ ಬದುಕಿನ ಚೆಲುವನ್ನು ವಿಸ್ತರಿಸುವ ಅಮೂಲ್ಯ ದ್ರವ್ಯವೆಂದೇ ಚಿತ್ರಿಸಿದ್ದಾರೆ.

ಸಾಹಿತ್ಯಕ ಮೌಲ್ಯ

ಎಕ್ಕುಂಡಿಯವರು ಕಥನ ಕವನಗಳನ್ನು ರಚಿಸುವ ವೇಳೆಗೆ ಗೋವಿಂದ ಪೈ, ಪಂಜೆ ಮಂಗೇಶರಾಯ, ಬಿ.ಎಂ.ಶ್ರೀ., ಮಾಸ್ತಿ, ಕುವೆಂಪು, ಬೇಂದ್ರೆ, ಪು.ತಿ.ನ ಅವರಂತಹ ಅನೇಕ ಹಿರಿಯ ಕವಿಗಳು ಆಂಗ್ಲ ಮಾದರಿಯ ಕಥನ ಕವನಗಳನ್ನು ರಚಿಸಿ, ಒಂದು ವಿಧದಲ್ಲಿ ಆ ಪರಂಪರೆಗೆ ನಾಂದಿ ಹಾಡಿದ್ದರು. ಆದರೆ ಅವರ ಕಥನ ಕಾವ್ಯಗಳು ಸಾಂಪ್ರದಾಯಿಕ ಛಂದೋ ರೂಪಗಳಲ್ಲಿ ಪ್ರಕಟಗೊಂಡು ಕಥನ ಗುಣಕ್ಕೆ ಪ್ರಾಧಾನ್ಯತೆ ನೀಡಿದ್ದವು. ಇದೇ ಪರಂಪರೆಯಿಂದ ಪ್ರಭಾವಿತರಾಗಿರುವ ಎಕ್ಕುಂಡಿಯವರು ಭಾಷಾ ಬಳಕೆ, ಪ್ರಾಸ, ವಸ್ತು ವಿನ್ಯಾಸಗಳಲ್ಲಿ ಭಾವಗೀತಾತ್ಮಕ ಲಕ್ಷಣಗಳಿಗೆ ಪ್ರಾಶಸ್ತ್ಯ ಕೊಟ್ಟು ಕಥನ ಗೀತೆಗಳ ನಾವಿನ್ಯತೆಗೆ ಕಾರಣರಾಗಿದ್ದಾರೆ.

"ಭಾವಗೀತೆಗಳು ಸಂಗೀತಾತ್ಮಕ ಆಲೋಚನೆ" ಎಂದು ಡಾ॥ ಜಾನ್‌ಸನ್ ಹೇಳುತ್ತಾರೆ. ಅದು ಭಾವಗೀತೆಯ ಲಕ್ಷಣಗಳಿಗೆ ಸರಿ ಹೊಂದುತ್ತದೆ. ಆದರೆ ಎಕ್ಕುಂಡಿಯವರ ಕಥನಗಳನ್ನು ಅವಲೋಕಿಸಿದರೆ ಅಲ್ಲೆಲ್ಲಾ ಗೇಯಗುಣ ತುಂಬಿಕೊಂಡಿರುವುದನ್ನು ಕಾಣುತ್ತೇವೆ. ಉದಾ: ಮಹಾಶ್ವೇತೆ, ಶಬರಿ, ಬುದ್ಧದೇವ, ಕಂಡಿರೇನು ಕಂದನಾ, ಪಯಣ, ದೂರು, ಕಾಲಿಯಾ ಮರ್ದನ, ಅತಿಥಿ, ಹಾವಾಡಿಗರ ಹುಡುಗ, ಬುಟ್ಟಿ ಮತ್ತು ಬೀಗದ ಕೈ, ಕುಚೇಲೋಪಾಖ್ಯಾನ, ಗಜೇಂದ್ರ ಮೋಕ್ಷ, ಪಾರಿವಾಳಗಳು.

ಎಕ್ಕುಂಡಿಯವರು ತಮ್ಮ ಕಥನ ಕವನಗಳ ಭಾವ, ಆಶಯ, ಪಾತ್ರ ಚಿತ್ರಣಕ್ಕೆ ಅನುಗುಣವಾದ ಪ್ರತಿಮೆ, ಸಂಕೇತ, ರೂಪಕ ನಿರ್ಮಿತಿಯಲ್ಲಿ ವಿಶಿಷ್ಟರಾಗಿ ನಿಲ್ಲುತ್ತಾರೆ. ಅಂತಹ ನೂರಾರು ಪ್ರತಿಮೆಗಳು ಅವರ ಕಥನ ಕವನಗಳಲ್ಲಿವೆ. ಕಥನಗಳ ವಸ್ತುಗಳ ಸಂದರ್ಭದಲ್ಲೇ ಆ ಪ್ರತಿಮೆ, ರೂಪಕಗಳ ಆಯ್ಕೆ ನಡೆದಿರುವುದು ಕಥನಗಳ ಅರ್ಥವಂತಿಕೆ. ಕಲಾಮೌಲ್ಯಗಳನ್ನು ಹೆಚ್ಚಿಸಿದೆ. ಉದಾ:– ಬಾನು, ನಕ್ಷತ್ರ, ಬೆಳ್ಳಕ್ಕಿಗಳು, ಮಲ್ಲಿಗೆ, ಪಾರಿಜಾತ, ಹೊಳೆ, ರಾತ್ರಿ, ಬೆಳದಿಂಗಳು, ಮುತ್ತು, ರತ್ನ, ಬೆಕ್ಕು, ಕಲ್ಲು, ಬಂಡೆ, ಬುಟ್ಟಿ, ಹಾವು, ಬೀಗದ ಕೈ, ಕಿಡಕಿ, ಗಾಲಿ, ಗರುಡ, ಕೊಳಲು, ಪಾರಿವಾಳ, ಆನೆ, ಮೊಸಳೆ ಇತ್ಯಾದಿ. ಇಂತಹ ಎಷ್ಟೋ ಪ್ರತಿಮೆಗಳು ಸಾಹಿತ್ಯ ಕ್ಷೇತ್ರದಲ್ಲಿ ಹಳೆಯವು ಎನಿಸಿದರೂ ಅವುಗಳ ಬಳಕೆಯಲ್ಲಿ ಕವಿ ತೋರುವ ಔಚಿತ್ಯ ಪ್ರಜ್ಞೆಯಿಂದ, ಸನ್ನಿವೇಶಗಳ ಬಲದಿಂದ ಹೊಸದೊಂದು ಅರ್ಥಶಕ್ತಿ ಬಂದು, ಕಥನ ಕವನಗಳ ಸಾಹಿತ್ಯ ಗುಣಗಳು ವಿಶೇಷವಾಗುತ್ತವೆ.

ಎಕ್ಕುಂಡಿಯವರ ವರ್ಣನಾ ಪ್ರತಿಭೆಯು ಇತರ ಕವಿಗಳಿಗಿಂತ ಅವರನ್ನು ವಿಶಿಷ್ಟವಾಗಿ ನೋಡುವಂತೆ ಮಾಡುತ್ತದೆ. ಲಯ, ಅಂತ್ಯ ಪ್ರಾಸ, ವರ್ಣನೆ, ಪ್ರತೀಕಗಳ ನಿರ್ಮಾಣದಲ್ಲಿ ಕನ್ನಡ ಭಾಷೆಯ ದೇಸೀತನಕ್ಕೆ ಪ್ರಾಶಸ್ತ್ಯ ನೀಡಿ, ಕನ್ನಡ ಭಾಷೆಗಿರುವ ಚಿಂತನಾ ಸಾಮರ್ಥ್ಯ ಮತ್ತು ಕಲ್ಪನಾ ಶಕ್ತಿಗಳ ಹೊಸ ಹೊಸ ಸಾಧ್ಯತೆಗಳನ್ನು ಪರಿಚಯಿಸಿದ್ದಾರೆ.

ಇಂತಹ ಹಲವಾರು ದೃಷ್ಟಿಕೋನಗಳಲ್ಲಿ ಹೊಸಗನ್ನಡ ಸಾಹಿತ್ಯದ ಕಥನ ಕವಿಗಳ ನಡುವೆ ಸು.ರಂ.ಎಕ್ಕುಂಡಿಯವರು ವಿಶಿಷ್ಟರೆನಿಸಿದ್ದಾರೆ. ಈ ಅಧ್ಯಯನವು ಹಲವು ಮಿತಿಗಳಲ್ಲಿ ನಡೆದಿರುವುದರಿಂದ ಎಕ್ಕುಂಡಿಯವರ ಕಥನ ಕವನಗಳ ಕೆಲವು ವಿಶಿಷ್ಟಾಂಶಗಳನ್ನಷ್ಟೇ ಇಲ್ಲಿ ಪ್ರಾತಿನಿಧಿಕವಾಗಿ ಚರ್ಚಿಸಲಾಗಿದೆ.

****

ಉಪಸಂಹಾರ

ಉಪಸಂಹಾರ

ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯು ಹಲವು ಸ್ಥಿತ್ಯಂತರಗಳಿಗೆ ಒಳಗಾಗಿ, ವಸ್ತು, ಭಾಷೆ, ಪ್ರಭೇದ, ಆಶಯಗಳ ದೃಷ್ಟಿಯಿಂದ ವೈವಿಧ್ಯಮಯ ಕೃತಿ ರಚನೆಗಳಿಗೆ ಅವಕಾಶ ಕಲ್ಪಿಸಿಕೊಟ್ಟಿದೆ. ಕನ್ನಡದ ಜಾಯಮಾನಕ್ಕನುಗುನವಾಗಿ ಇಲ್ಲಿ ಹಾಡುಗಬ್ಬ, ಓದುಗಬ್ಬ ಪರಂಪರೆಗಳಿವೆ. ಈ ಎರಡೂ ಪರಂಪರೆಗಳಲ್ಲಿ ಬೃಹತ್ ಪ್ರಮಾಣದ ಕಥನಗಳು ಸೃಷ್ಟಿಯಾಗಿವೆ. ಕಥನಗಳ ನಿರ್ಮಾಣದಲ್ಲಿ ಗದ್ಯ ಪದ್ಯ ಪ್ರಭೇದಗಳು ಸರಿ ಸಮಾನವಾದ ಸಾಧನೆ ಮಾಡಿರುವುದು ಕಂಡು ಬರುತ್ತದೆ.

ಆದರೆ, ಹೊಸಗನ್ನಡದ ಸಂದರ್ಭಬಂದಾಗ ಸಾಂಪ್ರದಾಯಿಕ ಕಥನ ಮಾರ್ಗಗಳಿಗಿಂತ ಬದಲಾದ ಮನೋಧರ್ಮಕ್ಕನುಗುಣವಾಗಿ ನೂತನ ಕಥನ ವಿಧಾನಗಳು ಸೇರಿಕೊಂಡು ಹಿಂದಿನ ಸಾಹಿತ್ಯ ಪರಂಪರೆಗೆ ಆಧುನಿಕತೆಯ ಮೆರಗು ನೀಡಿವೆ. ಹೀಗೆ ವೈವಿಧ್ಯಮಯವಾಗಿ ರಚಿತವಾಗಿರುವ ಸಾಹಿತ್ಯ ಪರಂಪರೆಯ ವ್ಯಾಖ್ಯಾನ, ವಿಮರ್ಶೆ ಒಂದು ಸವಾಲಿನ ಕೆಲಸವೇ ಸರಿ.

ಪ್ರಸ್ತುತ ನನ್ನ ನಿಬಂಧದ ವಿಷಯ: "ಸು.ರಂ.ಎಕ್ಕುಂಡಿಯವರ ಕಥನ ಕವನಗಳ–ಒಂದು ಅಧ್ಯಯನ" ಶೈಕ್ಷಣಿಕ ಕಾರಣಕ್ಕಾಗಿ ರಚಿತಗೊಂಡಿದೆ. ಇಪ್ಪತ್ತನೇ ಶತಮಾನದ ಮಹತ್ವದ ಕವಿಗಳಲ್ಲಿ ಒಬ್ಬರಾದ ಎಕ್ಕುಂಡಿಯವರು ಕಥನ ಕವನಗಳನ್ನು ರಚಿಸುವುದರಲ್ಲಿ ಪ್ರಸಿದ್ಧಿ ಪಡೆದವರು. ಅವರ ಅನೇಕ ಕಥನ ಕವನಗಳು ಸಹೃದಯ ಪ್ರಪಂಚದಲ್ಲಿ ಚಿರಪರಿಚಿತ.

ಆಧುನಿಕ ಕಾಲದಲ್ಲಿ ಪ್ರಾಚೀನವಾದ ಕಥನ ಪರಂಪರೆಗೆ ಒಲಿಯುವುದು ತುಂಬಾ ವಿಶಿಷ್ಟವಾಗಿ ಕಾಣುವ ವಿಚಾರ. ಆ ಕಾರಣಕ್ಕಾಗಿಯೇ ಎಕ್ಕುಂಡಿಯವರ ಕಥನ ಕವನಗಳನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ. ಆ ಮೂಲಕ ಎಕ್ಕುಂಡಿಯವರು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ತಂದುಕೊಟ್ಟಿರುವ ವೈಶಿಷ್ಟ್ಯತೆಗಳನ್ನು ಗುರುತಿಸುವ ಪ್ರಯತ್ನ ನನ್ನದು.

ಮೊದಲ ಅಧ್ಯಾಯದಲ್ಲಿ – ಎಕ್ಕುಂಡಿಯವರ ಕಥನ ಕವನಗಳ ಅಧ್ಯಯನಕ್ಕೆ ಕಾರಣವಾಗಿರುವ ಸಂಗತಿಗಳನ್ನು ಸ್ಪಷ್ಟಪಡಿಸಲಾಗಿದೆ. ಎಕ್ಕುಂಡಿಯವರ ಕಥನ ಕವನಗಳ ವಿಶೇಷತೆಯನ್ನು ನಾಡಿನ ಪ್ರಖ್ಯಾತ ವಿದ್ವಾಂಸರು, ವಿಮರ್ಶಕರು ಗುರುತಿಸಿದ್ದಾರೆ. ಹೀಗೆ ಗಮನ ಸೆಳೆದಿರುವ ಎಕ್ಕುಂಡಿಯವರ ಸಮಗ್ರ ಸಾಹಿತ್ಯದ ವಿಮರ್ಶೆಯು ಕನ್ನಡಿಗರಿಗೆ ಪೂರ್ಣ ಪ್ರಮಾಣದಲ್ಲಿ ಇನ್ನೂ ಲಭ್ಯವಾಗಬೇಕಾಗಿದೆ. ಈ ದೃಷ್ಟಿಯಿಂದ ಅವರ ಕಥನ ಕವಿತೆಗಳ ಅಧ್ಯಯನ ಮತ್ತು ವಿಮರ್ಶೆಯು ಸಾರ್ಥಕ ಕಾರ್ಯವಾಗುತ್ತದೆ. ಈ ಅಧ್ಯಯನ ಕಾರ್ಯವು ಸುಗಮವಾಗಲು ಕಥನ ಕವನಗಳ ವಸ್ತು ವಿಷಯಗಳಿಗೆ ಅನುಗುಣವಾಗಿ ಅವುಗಳನ್ನು ವರ್ಗೀಕರಿಸಿ, ಅಧ್ಯಯನ ಕಾರ್ಯಕ್ಕೆ

ಅರ್ಥ ತುಂಬಲು ಪ್ರಯತ್ನಿಸಿರುತ್ತೇನೆ.

ಎರಡನೇ ಅಧ್ಯಾಯದಲ್ಲಿ– ಜಾಗತಿಕ ಮಟ್ಟದಲ್ಲಿ ಒಪ್ಪಿಕೊಳ್ಳಲಾಗಿರುವ ಕಥನ ಕವನದ ಅರ್ಥ, ಲಕ್ಷಣ ಮತ್ತು ಸ್ವರೂಪಗಳನ್ನು ಕ್ರೋಢೀಕರಿಸಿ, ಅದರ ಪ್ರಭೇದ ವಿಶಿಷ್ಟತೆಯನ್ನು ಮನಗಾಣಿಸಲು ಯತ್ನಿಸಿದ್ದೇನೆ. ಇಲ್ಲಿರುವ ವಿವರಗಳು ಕಥನ ಕವನಗಳ ಅಧ್ಯಯನಕ್ಕೆ ಒಂದು ಸ್ಪಷ್ಟತೆ ನೀಡುವ ಸಂಗತಿಗಳಾಗಿವೆ. ಈ ವಿವರಣೆಯನ್ನು ಒದಗಿಸಲು ಇರುವ ಕಾರಣವೆಂದರೆ: ಸಾಹಿತ್ಯದ ಮೂಲ ಪ್ರಭೇದವೊಂದು ತನ್ನ ಮೂಲ ಗುಣಗಳನ್ನು ಸಾವಿರಾರು ವರ್ಷಗಳ ಕಾಲ ಮುಂದುವರಿಸಿಕೊಂಡು ಹೋಗುವುದಕ್ಕೆ ಹೇಗೆ ಸಾಧ್ಯವಾಗಿದೆ? ಎಂಬುದನ್ನು ತಿಳಿಯಪಡಿಸುವುದು. ಒಟ್ಟಾರೆ ಕಥನ ಕವನದ ಗುಣಲಕ್ಷಣಗಳ ವಿಶ್ವಾತ್ಮಕ ಹಿನ್ನೆಲೆಗಳನ್ನು ಪಡೆಯುವುದರಲ್ಲಿ ಈ ವಿವರಣೆ ಯಶಸ್ವಿಯಾಗಿದೆ.

ಮೂರನೇ ಅಧ್ಯಾಯದಲ್ಲಿ – ಕಥನ ಕವನಗಳ ಜಾಗತಿಕ ಪರಂಪರೆಗಳ ಅವಲೋಕನ ಮಾಡಲಾಗಿದೆ. ವಸ್ತುವಿನ ಆಯ್ಕೆ, ಕಥನ ವಿಧಾನ, ಆಶಯಗಳ ದೃಷ್ಟಿಯಿಂದ ವಿಶ್ವದ ಕಥನ ಕವನಗಳಲ್ಲಿ ಭಾಷೆಯನ್ನು ಹೊರತು ಪಡಿಸಿ ಸಾಮ್ಯತೆಗಳೇ ಹೆಚ್ಚು ಕಂಡು ಬರುತ್ತವೆ. ಆಯಾ ಸಮಾಜದ ಸಾಂಸ್ಕೃತಿಕ ಅಗತ್ಯಗಳ ಜೊತೆಗೆ ಅನ್ಯ ಸಂಸ್ಕೃತಿ, ಭಾಷೆಗಳ ಪ್ರಭಾವ ಇದ್ದೇ ಇರುತ್ತವೆ. ಈ ದೃಷ್ಟಿಯಿಂದ ಸಾಹಿತ್ಯ ಸಮೃದ್ಧಿಯನ್ನು ಕಂಡಿರುವ ಪ್ರಾಚೀನ ಭಾಷೆಗಳ ಕಥನ ಗೀತೆಗಳ ಪರಂಪರೆಯನ್ನು ತೌಲನಿಕವಾಗಿ ಗಮನಿಸಬೇಕಾಗುತ್ತದೆ. ಅನ್ಯ ಭಾಷೆಗಳ ಪ್ರೇರಣೆ ಪ್ರಭಾವಗಳು ಕನ್ನಡ ಕಥನ ಪರಂಪರೆಯ ಮೇಲೆ, ಮುಖ್ಯವಾಗಿ ಎಕ್ಕುಂಡಿಯವರ ಮೇಲೆ ಯಾವ ಪ್ರಮಾಣದಲ್ಲಿ ಆಗಿರಬಹುದು ಎಂಬ ವಿಚಾರ ತಿಳಿಯುವುದಕ್ಕಾಗಿ ಅನ್ಯ ಭಾಷೆಗಳ ಕಥನ ಕವನಗಳ ಹಿನ್ನೆಲೆಯನ್ನು ಸ್ಥೂಲವಾಗಿ ಅವಲೋಕಿಸಲಾಗಿದೆ.

ಇಪ್ಪತ್ತನೆ ಶತಮಾನದ ಕನ್ನಡ ಸಾಹಿತ್ಯವು ಸಮೃದ್ಧಿಯ ದೃಷ್ಟಿಯಿಂದ ವಿಶ್ವಭಾಷೆಗಳ ಸಾಲಿನಲ್ಲಿ ನಿಲ್ಲಬಲ್ಲ ಸಾಧನೆ ಮಾಡಿದೆ. ಆ ಸಾಧನೆಯಲ್ಲಿ ಕಥನ ಕವನಗಳ ಪಾಲೂ ಇದೆ. ನಾಲ್ಕನೆ ಅಧ್ಯಾಯವು ಈ ಸಾಧನೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಕನ್ನಡ ಕಥನ ಪರಂಪರೆಯು ವಿಕಾಸಗೊಂಡಿರುವ ಬಗೆಯನ್ನು ಸ್ಥೂಲವಾಗಿ ಅವಲೋಕಿಸಿದೆ. ಆ ವಿಕಾಸವನ್ನು ಜನಪದ, ಶಾಸನ, ಅಭಿಜಾತ ಮತ್ತು ಆಧುನಿಕ ಎಂಬ ನಾಲ್ಕು ನೆಲೆಗಳಲ್ಲಿ ಗುರುತಿಸಲಾಗಿದೆ.

ಜನಪದ ಕಥನ ಪರಂಪರೆಯು ಎಲ್ಲಾ ಭಾಷೆಗಳಲ್ಲಿ ಅತ್ಯಂತ ಪಾಚೀನವಾದುದು. ಅದು ಸಾವಿರಾರು ವರ್ಷಗಳ ಕಾಲ ಮೌಖಿಕವಾಗಿ ಜೀವಂತವಾಗಿ ಉಳಿದ ಹಾಗೂ ಲಿಖಿತ ಪರಂಪರೆಗೆ ಪ್ರೇರಣೆಯಾದ ಅಂಶಗಳನ್ನು ಇಲ್ಲಿ ಗಮನಿಸುವುದಗತ್ಯ.

ಲಿಖಿತ ಪರಂಪರೆಯ ಮೊದಲ ದಾಖಲೆಯಾಗಿರುವ ಶಾಸನಗಳು ಕಥನಗಳನ್ನು ನಿರೂಪಿಸಿರುವುದಕ್ಕೆ ಉತ್ತಮ ನಿದರ್ಶನಗಳಾಗಿವೆ. ಕನ್ನಡದಲ್ಲಿರುವ ಆ ಬಗೆಯ ಶಾಸನಗಳನ್ನು ಉಲ್ಲೇಖಿಸುವ ಮೂಲಕ ಕನ್ನಡ ಕಥನಗಳ ಪ್ರಾಚೀನ ದಾಖಲೆಗಳನ್ನು ಚಾರಿತ್ರಿಕ ದೃಷ್ಟಿಯಿಂದ ಗುರುತಿಸಲಾಗಿದೆ. ಶಿಷ್ಟ ಪರಂಪರೆಯ ಅಧಿಕೃತ ರೂಪಗಳೆಂದರೆ: ಅಭಿಜಾತ ಕಥನಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವುಗಳನ್ನು ಮಹಾಕಾವ್ಯಗಳು, ಗದ್ಯ ಕಥೆಗಳು, ಚಂಪು ಕಾವ್ಯಗಳು, ಹರಿಹರನ ರಗಳೆಗಳಲ್ಲಿ ಗುರುತಿಸಬಹುದು. ಆದರೆ ಕಥನ ಕವನಗಳ ಆಧುನಿಕಾರ್ಥದಲ್ಲಿ ಈ ಅಭಿಜಾತ ಕಥನಗಳು ಸೇರ್ಪಡೆಯಾಗುವುದಿಲ್ಲ. ಒಂದು ಬಗೆಯಲ್ಲಿ ಪ್ರಾಚೀನ ಕಾಲದ ಅಭಿಜಾತ ಕಥನ ಪರಂಪರೆಯನ್ನು ಮುಂದುವರೆಸಿಕೊಂಡು ಬಂದವುಗಳಾಗಿವೆ. ಈ ವಿವರಣೆಯು ಆಧುನಿಕ ಕಥನ ಕವನಗಳಿಗೂ, ಪ್ರಾಚೀನ ಅಭಿಜಾತ ಕಥನ ಪರಂಪರೆಗೂ ಇರುವ ವ್ಯತ್ಯಾಸಗಳನ್ನು ಸ್ಪಷ್ಟಪಡಿಸುತ್ತದೆ.

ಆ ಕಾರಣಕ್ಕಾಗಿ ಅಭಿಜಾತ ಕಥನ ಪರಂಪರೆಯನ್ನು ಸ್ಥೂಲವಾಗಿ ಅವಲೋಕನ ಮಾಡಲಾಗಿದೆ. ಆಧುನಿಕ ಕಥನ ಪರಂಪರೆಯು ಪ್ರಾಚೀನ ಕಥನ ಪರಂಪರೆಗಿಂತ ಹೇಗೆ ಭಿನ್ನ ಮತ್ತು ಭಾಷೆ, ವಸ್ತು, ಛಂದಸ್ಸಿನ ದೃಷ್ಟಿಯಿಂದ ಅನ್ಯ ಭಾಷೆಗಳಿಂದ ಹೇಗೆ ಪ್ರೇರೇಪಣೆಗೊಳ ಪಟ್ಟಿದೆ ಎಂಬ ಸಂಗತಿಯನ್ನು ಸ್ಪಷ್ಟಪಡಿಸುತ್ತದೆ ಹಾಗೂ ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ಹಿರಿಯ ಕವಿಗಳು ಕನ್ನಡ ಕಥನ ಕವನ ಪರಂಪರೆಯನ್ನು ಪೋಷಿಸಿದ, ರೂಪಿಸಿದ, ವಿಚಾರಗಳನ್ನು ಎಕ್ಕುಂಡಿಯವರ ಸಾಧನೆಗೆ ಹಿನ್ನೆಲೆಯಾಗಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಒಟ್ಟಾರೆ ಈ ಭಾಗದಲ್ಲಿ ಆಧುನಿಕ ಕನ್ನಡ ಕಥನ ಕಾವ್ಯವು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದು, ಸಮೃದ್ಧಿಗೊಳ್ಳಲು ಕಾರಣವಾಗಿರುವ ಹಿನ್ನೆಲೆ ಮತ್ತು ಸಾಹಿತ್ಯಕ ಪರಿಸರವನ್ನು ಪರಿಚಯಿಸಲಾಗಿದೆ.

ಐದನೇ ಅಧ್ಯಾಯದಲ್ಲಿ– ಕನ್ನಡದ ಕಥನ ಕವಿಯೆಂದೇ ಪ್ರಸಿದ್ಧವಾಗಿರುವ ಸು.ರಂ.ಎಕ್ಕುಂಡಿಯವರ ಕಥನ ಕವನಗಳನ್ನು ಶೀರ್ಷಿಕೆಗಳೊಂದಿಗೆ ಪರಿಚಯಿಸಿ, ಅವುಗಳ ವಸ್ತು, ಆಶಯಗಳನ್ನು ಸೂಕ್ಷ್ಮವಾಗಿ ಗುರುತಿಸಿ, ಅಧ್ಯಯನ ಸೌಕರ್ಯಕ್ಕಾಗಿ ಪೌರಾಣಿಕ, ಚಾರಿತ್ರಿಕ, ಸಾಮಾಜಿಕ, ಪ್ರೀತಿ–ಪ್ರಣಯ, ಜೀವನ ಜಿಜ್ಞಾಸೆ, ವೈಚಾರಿಕ ಮತ್ತು ವಿಡಂಬನಾತ್ಮಕ ಎಂಬ ಚೌಕಟ್ಟಿನಲ್ಲಿ ವರ್ಗೀಕರಿಸಿದ ವಿವರಗಳಿವೆ. ಇದು ಅಧ್ಯಯನಕ್ಕೆ ನಿರ್ದಿಷ್ಟತೆಯನ್ನು ಮತ್ತು ಪ್ರಾತಿನಿಧಿಕ ಸ್ವರೂಪವನ್ನು ತಂದುಕೊಡಲು ಸಹಾಯಕವಾಗಿದೆ.

ಆರನೇ ಅಧ್ಯಾಯದಲ್ಲಿ – ಎಕ್ಕುಂಡಿಯವರು ಕಥನ ಕವನ ಪ್ರಕಾರವನ್ನು ತಮ್ಮ ಅಭಿವ್ಯಕ್ತಿಯ ವಿಶಿಷ್ಟ ಮಾಧ್ಯಮವನ್ನಾಗಿ ಆಯ್ದುಕೊಂಡು, ಅದರಲ್ಲಿ ಯಶಸ್ಸು ಕಂಡಿರುವ ರೀತಿಯನ್ನು ವಿವಿಧ

ಕವನಗಳ ಪ್ರಾತಿನಿಧಿಕ ವಿಶ್ಲೇಷಣೆಯ ಮೂಲಕ ವಿವರಿಸಲಾಗಿದೆ. ಪೌರಾಣಿಕ ಕಥನ ಕವನಗಳು ಭಕ್ತಿ, ದೈವ ನಿಷ್ಠೆ, ದೈವಾನುಗ್ರಹ, ಅನುರಾಗ, ಆತ್ಮೋನ್ನತಿಯಂತಹ ಅಲೌಕಿಕ ಆದರ್ಶಗಳನ್ನು ಬಿಂಬಿಸುವ ಕಥನಗಳಾಗಿವೆ. ಭಾಗವತ ಶ್ರದ್ಧೆ, ಮಧ್ವ ಮತನಿಷ್ಠೆ, ಹರಿದಾಸ ಪರಂಪರೆಯ ಬಗೆಗಿನ ಒಲವು ಎಕ್ಕುಂಡಿಯವರ ಕಥನ ಕವನಗಳಲ್ಲಿ ವರ್ಣಿತವಾಗಿರುವ ಭಕ್ತಿ ತತ್ವಕ್ಕೆ ಹೇಗೆ ಬೇರೆ ಬೇರೆ ಆಯಾಮಗಳನ್ನು ಒದಗಿಸಿವೆ ಎಂಬ ಅಂಶವನ್ನು ಆಯ್ದ ಕಥನಗಳ ಮೂಲಕ ವಿವರಿಸಲಾಗಿದೆ. ಭಕ್ತಿ, ದೈವಾನುಗ್ರಹ, ಆಧ್ಯಾತ್ಮಿಕ, ಔನ್ನತ್ಯದಂತಹ ಅಮೂರ್ತ ಭಾವಗಳಿಗೆ ಕಲೆಯ ಆಕಾರ ಕೊಡುವುದು ವಿಸ್ಮಯಕಾರಿಯಾದ ಕಲೆಗಾರಿಕೆ. ಎಕ್ಕುಂಡಿಯವರು ಆ ಕಲೆಗಾರಿಕೆಯಲ್ಲಿ ಯಶಸ್ಸು ಕಂಡಿರುವುದು ಹೇಗೆ ಎಂಬುದನ್ನು ವಿಶ್ಲೇಷಿಸಣೆ ಮೂಲಕ ಸ್ಪಷ್ಟಪಡಿಸಲಾಗಿದೆ. ಈ ದೃಷ್ಟಿಯಿಂದ ಅವರ ಹಾವಾಡಿಗರ ಹುಡುಗ, ಅತಿಥಿ, ಬುಟ್ಟಿ ಮತ್ತು ಬೀಗದ ಕೈ, ಕುಚೇಲೋಪಾಖ್ಯಾನ, ಶಬರಿ, ಕುಬ್ಜಾಂಗನೆ, ಭಗವಂತ ನೀರೆರೆದನು ಕವನಗಳನ್ನು ಹೆಸರಿಸಬಹುದು.

ಅನುರಾಗದ ಭಿನ್ನ ಅಭಿವ್ಯಕ್ತಿಗಳಾಗಿ ಭಕ್ತಿ, ಪ್ರೀತಿ, ಪ್ರಣಯದಂತ ಭಾವಗಳನ್ನು ನೋಡಬಹುದು. ಎಕ್ಕುಂಡಿಯವರ ಕಥನ ಕವನಗಳಲ್ಲಿ ಭಕ್ತಿ ತತ್ವಕ್ಕೆ ಕೊಟ್ಟಷ್ಟೇ ಪ್ರಾಧಾನ್ಯತೆಯನ್ನು ಪ್ರೀತಿ–ಪ್ರಣಯದಂಥ ವಿಷಯಗಳಿಗೂ ನೀಡಲಾಗಿದೆ. ಅವರ ಮಹಾಶ್ವೇತೆ, ಪರಿಗ್ರಹಿಸಿರಿ ಪಾರಿಜಾತ, ಶ್ವೇತಕೇತು ದೇವರ್ಷಿ, ಮಿಸುನಿ ಜಿಂಕೆ, ವಸ್ತ್ರಾಪಹರಣ, ಈ ಕವಿತೆಗಳನ್ನು ಪ್ರಾತಿನಿಧಿಕವಾಗಿ ಮುಖ್ಯವಾಗುತ್ತವೆ. ಈ ಕವಿತೆಗಳ ಕಾಲ, ಪಾತ್ರ, ಸನ್ನಿವೇಶಗಳಲ್ಲಿ ಪೌರಾಣಿಕ ಸಂದರ್ಭಕ್ಕೆ ಸೇರಿದ್ದರೂ ಪ್ರೀತಿ–ಪ್ರಣಯದಂತ ವಸ್ತು ವಿಷಯಗಳು ನಿತ್ಯನೂತನವಾದವುಗಳು. ಪುರಾಣ ಸಂದರ್ಭದ ಚಿತ್ತಾಕರ್ಷಕವಾದ ಪ್ರಸಂಗಗಳನ್ನು ತಮ್ಮ ಕಥನ ಕಾವ್ಯಕ್ಕೆ ವಸ್ತುವಾಗಿ ಆಯ್ಕೆ ಮಾಡಿಕೊಳ್ಳಲು ಈ ವಿಷಯದ ನಿತ್ಯ ನೂತನತೆಯೇ ಕಾರಣ. ಆದ್ದರಿಂದ ಎಕ್ಕುಂಡಿಯವರು ಈ ವಸ್ತುವಿಗೆ ಕಾಲಾತೀತ ಅರ್ಥವನ್ನು ಕೊಡಲು ಪ್ರಯತ್ನಿಸಿದ್ದಾರೆ.

ಪುರಾಣದಂತೆ ಚರಿತ್ರೆಯೂ ಎಕ್ಕುಂಡಿಯವರ ಕಥನಗಳಿಗೆ ಸಾಕಷ್ಟು ಸಾಮಗ್ರಿಯನ್ನು ಒದಗಿಸಿವೆ. ಚಾರಿತ್ರಿಕ ವ್ಯಕ್ತಿಗಳಾದ ಬುದ್ಧ, ಏಸು, ಪಂಪ, ಕನಕದಾಸ, ದಾಸಿಮಯ್ಯ, ಕಾರ್ಲ್‌ಮಾರ್ಕ್ಸ್, ಶಂಕರಚಾರ್ಯ, ಮಧ್ವಚಾರ್ಯ ಇವರೆಲ್ಲರ ದಾರ್ಶನಿಕ ವ್ಯಕ್ತಿತ್ವ ಮತ್ತು ಬದುಕು ಕಾವ್ಯ ರಚನೆಗೆ ಸ್ಫೂರ್ತಿ ನೀಡಿವೆ. ಅವುಗಳಲ್ಲಿ ಹೆಸರಿಸಬಹುದಾದ ಚಾರಿತ್ರಿಕ ಕವನಗಳೆಂದರೆ ಬುದ್ದದೇವ, ಯೋಧ ಮತ್ತು ಹೆಂಗಸು, ಕಳ್ಳರು ಮತ್ತು ಸಂತ ಇವುಗಳು ಚರಿತ್ರೆಯ ಭಿನ್ನ ಭಿನ್ನ ಸಂದರ್ಭಗಳನ್ನು ನಿರೂಪಿಸುತ್ತವೆ. ಆ ಅರ್ಥದಲ್ಲಿಯೇ ಇವುಗಳನ್ನು ವಿಶ್ಲೇಷಿಸಲಾಗಿದೆ.

ಪ್ರಗತಿಶೀಲ ಪಂಥದ ಸಮಾಜವಾದಿ ಆಶಯಗಳನ್ನು ಪ್ರತಿಪಾದಿಸಿದ ಲೇಖಕರಲ್ಲಿ

ಎಕ್ಕುಂಡಿಯವರು ಭಿನ್ನ ನೆಲೆಯ ಲೇಖಕರು. ಮಾರ್ಕ್ಸ್ ವಿಚಾರಧಾರೆಗಳಿಗೆ ಪ್ರಭಾವಿತವಾಗಿದ್ದರೂ ಸಾಮಾಜಿಕ ಸಂಘರ್ಷಕ್ಕಿಂತ ಅದರ ಸಮನ್ವಯತೆಯ ಕಡೆಗೆ ಪೂರ್ಣ ಒಲವು. ಆದ್ದರಿಂದ ಅವರ ಕಥನಗಳ ಕ್ರಾಂತಿಯ ಆಶಯಗಳು ಉದಾರವಾದಿ ಸ್ವರೂಪವನ್ನು ಧಾರಣ ಮಾಡಿವೆ. ಸಾಮಾಜಿಕ ಕ್ರಾಂತಿಯ ಮತ್ತು ಬದಲಾವಣೆಯ ಸಮಸ್ಯೆಗಳ ಚಿತ್ರಣವನ್ನು ಅವರ ಹಿಟ್ಟು ಮತ್ತು ಮಲ್ಲಿಗೆ, ರೊಟ್ಟಿ ಮತ್ತು ಕೋವಿ, ಕಿಡಕಿ ಮತ್ತು ಗಾಲಿಗಳು, ಅಂಡರ್ಸನ್ ಬೀದಿ ಲಂಡನ್ನಿನಲ್ಲಿ, ಗಿರವಿ ಅಂಗಡಿಯಲ್ಲಿ ಕವಿತೆಗಳಲ್ಲಿ ನೋಡಬಹುದು.

ಎಕ್ಕುಂಡಿಯವರು ಜೀವನವನ್ನು ಅದರ ವಾಸ್ತವಿಕ ನೆಲೆಯಲ್ಲಿ ಕಟ್ಟಿಕೂಡುವ ಪ್ರಯತ್ನ ಮಾಡುತ್ತಾರೆ. ಅದಕ್ಕಾಗಿ ಅವರು ಆರಿಸಿಕೊಳ್ಳುವ ವಿಷಯದ ವ್ಯಾಪ್ತಿಯು ಸಾರ್ವಕಾಲೀಕವಾದುದು. ಪುರಾಣ, ಇತಿಹಾಸ, ವಾಸ್ತವಿಕ ಎಂಬ ವ್ಯತ್ಯಾಸಗಳಿಲ್ಲ ಅಂತಹ ಕಥನಗಳೆಂದರೆ ಪಾರಿವಾಳಗಳು, ಪಯಣ, ಹುಡುಗಿಯ ಕಥೆ, ಮಂಜುಗೌಡನ ಕಥೆ, ಹುಂಜ ಮತ್ತು ಕಮಂಡಲ, ಹುಳ ಮತ್ತು ಕಿರೀಟ, ಕಣಗಿಲು ಗಿಡದಲ್ಲಿ ಹುಡುಗ, ಅರಣ್ಯಾನಿ ಮುಖ್ಯವಾದವುಗಳು. ಇಲ್ಲಿ ಮಾನವರು ವಿಧಿನಿಯಮದಂತೆ ನಡೆಯಬೇಕಾಗುತ್ತದೆ. ಬಂದ ಕಷ್ಟಗಳನ್ನು ಸ್ವೀಕರಿಸಬೇಕಾಗುತ್ತದೆ. ಆದರೆ ಬಾಳ್ವೆಯನ್ನು ಸಹನೀಯಗೊಳಿಸಿಕೊಳ್ಳಬೇಕಾಗುತ್ತದೆ ಎಂಬ ವಾಸ್ತವಿಕ ದೃಷ್ಟಿಗೆ ಬದ್ಧರಾಗಿರುವುದು ಕಂಡುಬರುತ್ತದೆ. ಆ ಕುರಿತು ಪ್ರಾತಿನಿಧಿಕವಾಗಿ ವಿಶ್ಲೇಷಿಸುವ ಯತ್ನ ಮಾಡಿರುತ್ತೇನೆ.

ಭಕ್ತಿ ಆಧ್ಯಾತ್ಮದಂತಹ ವಿಷಯಗಳಲ್ಲಿ ಅತೀವ ಶ್ರದ್ಧೆ ಇಟ್ಟಿರುವ ಎಕ್ಕುಂಡಿಯವರು ಅಲ್ಲಿ ಕಂಡು ಬರುವ ಕಪಟತನವನ್ನು ಅಷ್ಟೇ ನಿಷ್ಠುರವಾಗಿ ವಿಡಂಬಿಸಿದ್ದಾರೆ. ದೇವಾಲಯ, ಮಠಗಳು, ಸಾಮಾನ್ಯವಾಗಿ ಭಕ್ತಿಯ ಶ್ರದ್ಧಾ ಕೇಂದ್ರಗಳಾಗಿರಬೇಕು. ಆದರೆ ಅಲ್ಲಿ ನಿರರ್ಥಕ ಆಚಾರಗಳು, ಪ್ರದರ್ಶನಗೊಳ್ಳುತ್ತಿರುತ್ತವೆ. ಈ ದೃಷ್ಟಿಯಿಂದ ದಾಸಿಮಯ್ಯ ಮತ್ತು ಬೆಕ್ಕು ಕಥನವು ಒಂದು ಶ್ರೇಷ್ಠ ವಿಡಂಬನಾತ್ಮಕ ಧ್ವನಿಯುಳ್ಳ ಕಲಾಕೃತಿಯಾಗಿದೆ. ಅವರ ತಾತ್ವಿಕ ಚಿಂತನೆಗೆ ಅವಧೂತ ಮತ್ತು ಉಭಯ ಸರಸ್ವತಿ ಕಥನವು ನಿದರ್ಶನಗಳಾಗುತ್ತವೆ. ಮಿಥಿಲೆ ಕಥನವು ವರ್ತಮಾನಕ್ಕೂ, ಪುರಾಣಕ್ಕೂ ಸಂಬಂಧ ಕಲ್ಪಿಸುವ ಮೂಲಕ ವಿಶಿಷ್ಟವಾಗಿ ನಿಲ್ಲುತ್ತದೆ. ಒಟ್ಟಾರೆ ಎಕ್ಕುಂಡಿಯವರ ವೈಚಾರಿಕತೆಯು ಲೌಕಿಕ, ಅಲೌಕಿಕ, ಇತಿಹಾಸ, ನಿಸರ್ಗ ಎಂಬ ಬೇಧಗಳಿಲ್ಲದ, ಆಧ್ಯಾತ್ಮಿಕ ನೆಲೆಯ ಪರಿವೇಷಗಳನ್ನು ಧರಿಸಿಬಿಡುತ್ತದೆ.

ಏಳನೇ ಅಧ್ಯಾಯದಲ್ಲಿ– ಸು.ರಂ.ಎಕ್ಕುಂಡಿಯವರು ತಮ್ಮ ಕಥನ ಕವನಗಳ ಮೂಲಕ ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟರಾಗಿ ನಿಲ್ಲುವ ಅಂಶಗಳನ್ನು ವಿವರಿಸಲಾಗಿದೆ. ಪ್ರಸ್ತುತ ನಿಬಂಧದಲ್ಲಿ ಪ್ರಾತಿನಿಧಿಕವಾಗಿ ವಿಶ್ಲೇಷಣೆ ಮಾಡಿರುವ ಕಥನ ಕವನಗಳ ಸಾಹಿತ್ಯಿಕ

ಮತ್ತು ಸಾಂಸ್ಕೃತಿಕ ಮೌಲ್ಯಗಳ ಆಧಾರದ ಮೇಲೆ, ಎಕ್ಕುಂಡಿಯವರು ಕನ್ನಡ ಸಾಹಿತ್ಯ ಪರಂಪರೆಗೆ ತಂದಿರುವ ವೈಶಿಷ್ಟ್ಯತೆಗಳಾವುವು? ಎಂದು ಸ್ಪಷ್ಟಪಡಿಸಲು ಯತ್ನಿಸಲಾಗಿದೆ.

ಹೀಗೆ ನನ್ನ ಶೈಕ್ಷಣಿಕ ಉದ್ದೇಶಕ್ಕಾಗಿ, ಎಕ್ಕುಂಡಿಯವರ ಕಥನ ಕವನಗಳ ಅಧ್ಯಯನ ಮಾಡಲಾಗಿದೆ. ಈ ಅಧ್ಯಯನವು ಯಾವ ಅರ್ಥದಲ್ಲೂ ಸಮಗ್ರವಲ್ಲ. ಆದರೆ, ಅತ್ಯಂತ ಪ್ರಾಚೀನ ಸಾಹಿತ್ಯ ಪ್ರಭೇದವಾದ "ಕಥನ ಗೀತೆ"ಯು, ತನ್ನ ಮೂಲ ಪ್ರಾಚೀನ ಗುಣ-ಲಕ್ಷಣಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಂಡು ಆಧುನಿಕ ಕಾಲದಲ್ಲೂ ಮುಂದುವರಿದುಕೊಂಡು ಹೋಗುತ್ತಿರುವುದು ಕುತೂಹಲಕಾರಿಯಾದ ವಿಚಾರ. ಈ ಅಧ್ಯಯನದಿಂದ ಅಂತಹ ಕುತೂಹಲಕ್ಕೆ ಸ್ವಲ್ಪಮಟ್ಟಿಗೆ ಸಮಾಧಾನ ಸಿಗಬಹುದೆಂದುಕೊಂಡಿದ್ದೇನೆ. ಹೀಗಿದ್ದಾಗಲೂ ಎಕ್ಕುಂಡಿಯವರ ಕಥನ ಕವನಗಳ ಸಮಗ್ರ ವಿಶ್ಲೇಷಣಾ ಕಾರ್ಯ ಇನ್ನೂ ಅತ್ಯುತ್ತಮವಾಗಿ ನಡೆಯಬೇಕಾಗಿದೆ ಎಂದಷ್ಟೇ ಹೇಳಲು ಸಾಧ್ಯ.

****

ಅನುಬಂಧ

ಪರಮಾರ್ಶನ ಗ್ರಂಥಗಳು

೧. ಸು.ರಂ. ಎಕ್ಕುಂಡಿ : *ಕಥನ ಕವನಗಳು*
ಪ್ರಕಾಶಕರು: ಕನ್ನಡ ಮತ್ತು ಸಂಸ್ಕೃತಿ
ನಿರ್ದೇಶನಾಲಯ, ಬೆಂಗಳೂರು (೧೯೮೫).

೨. ಡಾ॥ ಉದ್ದಂಡಯ್ಯ : *ಕುವೆಂಪು ಕಥನ*
ಪ್ರಕಾಶನ: ಅಧ್ಯಯನ ಮಂಡಲ,
ಬೆಂಗಳೂರು (೨೦೦೪).

೩. ಡಿ.ವಿ.ಪ್ರಹ್ಲಾದ್ : *ಸುಬ್ಬಣ್ಣ ರಂಗನಾಥ ಎಕ್ಕುಂಡಿ, ಸಮಗ್ರ ಕಾವ್ಯ*
ಬೆಳ್ಳಕ್ಕಿ ಹಿಂಡು: ಪ್ರಕಾಶನ: ಸಂಚಯ
ಬೆಂಗಳೂರು (೨೦೦೮)

೪. ವಿವಿಧ ಲೇಖಕರು : *ಸು.ರಂ.ಎಕ್ಕುಂಡಿಯವರ ಕಾವ್ಯ*
ಪ್ರಕಾಶಕರು: ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು (೧೯೯೩).

೫. ಎಂ.ಅಕಬರ ಅಲಿ : *ಕನ್ನಡ ಕಾವ್ಯಾಧ್ಯಯನ* (ವಿಮರ್ಶಾತ್ಮಕ ಲೇಖನಗಳು)
ರಾಘವೇಂದ್ರ ಪ್ರಕಾಶನ: (೧೯೯೩),ಅಂಬಾರಕೂಡ್ಲು.

೬. ಎಚ್.ಎಲ್.ನಾಗೇಗೌಡ : *ಕನ್ನಡ ಜನಪದ ಕಥನ ಕಾವ್ಯಗಳು*
ಪ್ರಕಾಶಕರು: ಕರ್ನಾಟಕ ಜಾನಪದ ಪರಿಷತ್
(೨೦೦೭), ಬೆಂಗಳೂರು.

೭. ಡಾ॥ ಭೈರಮಂಗಲ ರಾಮೇಗೌಡ : *ರಸಸಿದ್ಧಿ ಕುವೆಂಪು ಕಾವ್ಯ ವಿಮರ್ಶೆ*
ಪ್ರಕಾಶಕರು: ಸಮಾನ ಮನಸ್ಕರ ಒಕ್ಕೂಟ,
ಬೆಂಗಳೂರು (೨೦೦೩).

೮. ರಾಜಪ್ಪ ದಳವಾಯಿ
ಲ. ರಾಘವೇಂದ್ರ : *ಕನ್ನಡ ಸಾಹಿತ್ಯ ಕೋಶ*
ಶ್ರೀ ರಾಘವೇಂದ್ರ ಪ್ರಕಾಶನ,
ಬೆಂಗಳೂರು (೧೯೯೬).

೯. ಸುಬ್ಬಣ್ಣ ರಂಗನಾಥ ಎಕ್ಕುಂಡಿ : *ಬಕುಲದ ಹೂವುಗಳು*
ಪ್ರಕಾಶಕರು: ಅಭಿನವ, ಬೆಂಗಳೂರು (೧೯೯೧).

೧೦. ಎಚ್.ಎಸ್. ವೆಂಕಟೇಶ್ ಮೂರ್ತಿ : *ಕನ್ನಡದಲ್ಲಿ ಕಥನ ಕವನಗಳು* ಪ್ರಕಾಶನ: ಗಣೇಶ ಮಂದಿರ, ಬೆಂಗಳೂರು (೧೯೮೭).

೧೧. ಕೀರ್ತನಾಥ ಕುರ್ತಕೋಟಿ : *ಸಂಸ್ಕೃತಿ ಸ್ಪಂದನ* ಪ್ರಕಟಣೆ: ಮನೋಹರ ಗ್ರಂಥ ಮಾಲಾ, ಧಾರವಾಡ (೧೯೮೯).

೧೨. ಕೆ.ವಿ.ತಿರುಮಲೇಶ್ : *ಉಲ್ಲೇಖ* ಪ್ರಕಾಶಕರು: ಅಭಿನವ, ಬೆಂಗಳೂರು (೨೦೦೭).

೧೩. ಪ್ರೊ. ಎಸ್.ಅನಂತನಾರಾಯಣ – : *ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ (೧೯೬೨)* ಪ್ರಕಾಶನ: ಡಿ.ವಿ.ಕೆಮೂರ್ತಿ, ಮೈಸೂರು.

೧೪. ವಿಷ್ಣುನಾಯಕ : *ಅಕಬರ ಅಲಿ – ಜೀವನ ಸಾಹಿತ್ಯ* ಅಭಿನಂದನಾ ಗ್ರಂಥ: ಅಂಕೋಲಾ (ಉತ್ತರ ಕನ್ನಡ), (೧೯೯೨).

೧೫. ಎಚ್.ಎಸ್.ವೆಂಕಟೇಶ್ ಮೂರ್ತಿ : *ಕಥನ ಕವನ* ಪ್ರಕಾಶಕರು: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು (೧೯೯೦).

೧೬. ವಿವಿಧ ಲೇಖಕರು : *ಸು.ರಂ.ಎಕ್ಕುಂಡಿಯವರ ಕಾವ್ಯ* ಪ್ರಕಾಶಕರು: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು (೧೯೯೩)

೧೭. ಟಿ.ಪಿ.ಅಶೋಕ್ : *ಸಾಹಿತ್ಯ ಸಂಬಂಧ* ವಿಮರ್ಶಾತ್ಮಕ ಲೇಖನಗಳ ಸಂಕಲನ ಪ್ರಕಾಶಕರು: ಅಕ್ಷರ ಪ್ರಕಾಶನ, ಹೆಗ್ಗೋಡು.

೧೮. ಪ.ವಿ.ಚಂದ್ರಶೇಖರ ರಾವ್ : *ಸಾರಸ್ವತ* ಪ್ರಕಾಶನ: ಸಾಹಿತ್ಯ ವಿಹಾರ, ಮೈಸೂರು.

೧೯. ಡಾ॥ ಜಿ.ಎಂ. ಹೆಗ್ಗಡೆ : *ಸಾಹಿತ್ಯ ಮತ್ತು ಸಂಸ್ಕೃತಿ ಸ್ಪಂದನ* (೧೯೯೭)

೨೦. ಜಿ.ಪಿ.ಬಸವರಾಜ್ : *ಕಂಡಷ್ಟು* (೧೯೯೬)

೨೧. ಡಾ॥ ಸಾ.ಶಿ.ಮರುಳಯ್ಯ : *ಸಾಶಿಮ: ವಿಮರ್ಶೆ* (೨೦೦೧)

೨೨. ಜಿ.ಎನ್.ಮೋಹನ್ : *ಸು.ರಂ.ಎಕ್ಕುಂಡಿಯವರ ಕಾವ್ಯ : ನಿಬ್ಬೆರಗು ನಲಿವುಗಳ ಪುಳಕ*
ಎಕ್ಕುಂಡಿ ನಮನ

೨೩. ಡಿ.ವಿ. ಪ್ರಹ್ಲಾದ್ : *ಬಗೆ ತೆರೆದ ಬಾನು* (ಸಂದರ್ಶನಗಳು)
ಪ್ರಕಾಶಕರು : ಸಂಚಯ (೧೯೯೬)

೨೪. ಕೆ.ನರಸಿಂಹ ಮೂರ್ತಿ (ಐ.ಎ.ಎಸ್) : *ಕನ್ನಡ ಸಾಹಿತ್ಯ ವಿಹಾರ*
ವಸಂತ ಪ್ರಕಾಶನ, ಬೆಂಗಳೂರು (೨೦೦೧)

೨೫. ಜಿ.ಎನ್.ಮೋಹನ್ : *ಸಾಲುದೀಪಗಳು* ಸು.ರಂ.ಎಕ್ಕುಂಡಿ

೨೬. ಡಾ॥ ಜಿ.ಆರ್. ತಿಪ್ಪೇಸ್ವಾಮಿ : *ಮೌಖಿಕ ಕಥನ*
ವಿಜಯಲಕ್ಷ್ಮಿ ಪ್ರಕಾಶನ,
ಮೈಸೂರು (೨೦೦೫)